Editor: NITYANANDASWAMI Publisher: U. BASAVARAJA
RNI No. KARKAN/2006/17926

ಜನಶಕ್ತಿ ಕನ್ನಡ ವಾರ ಪತ್ರಿಕೆ

ದುಡಿಯುವ ಜನರ ಪ್ರಾಣಮಿತ್ರ

JANASHAKTHI KANNADA VARA PATRIKE
ಸಂಪುಟ 16 । ಸಂಚಿಕೆ 26 । ಜೂನ್ 20–26, 2022 । ಪುಟ 16 । ರೂ. 10/–
Volume: 16 Issue: 26 June 20-26, 2022 Pages: 16 Price: 10/-
https://janashakthi.wordpress.com e-mail : js_weekly@yahoo.com





ಕಿವಿ ಹಿಂಡಬೇಕಾದ ಸಿದ್ದರಾಮಯ್ಯನವರ ನಡೆಗಳು

ಸೇನಾಕಾಂಕ್ಷಿಗಳ ಕನಸುಗಳನ್ನು ಭಸ್ಮ ಮಾಡಲು ಬರುತ್ತಲಿದೆ ಅಗ್ನಿಪಥ್



ಕೇರಳ ಕಾಂಗ್ರೆಸ್‌ನ ದಿವಾಳಿಕೋರ ರಾಜಕೀಯ



ನಿಂತಲ್ಲೇ ನಿಲ್ಲಲಿದೆ ಭಾರತದ ಅರ್ಥ ವ್ಯವಸ್ಥೆ



ಕೋಮುವಾದೀಕರಣದ ಪಠ್ಯ ಪರಿಷ್ಕರಣೆ ವಿರುದ್ಧ ಬೃಹತ್ ಪ್ರತಿಭಟನಾ ಆಕ್ರೋಶ

‘ಅಗ್ನಿಪಥ’ ಯೋಜನೆ’ಯನ್ನು ರದ್ದುಗೊಳಿಸಬೇಕು,
ನಿಯಮಿತ ನೇಮಕಾತಿಯನ್ನು ತುರ್ತಾಗಿ ಆರಂಭಿಸಬೇಕು

‘ಅಗ್ನಿಪಥ್’ ಭಾರತದ ರಾಷ್ಟ್ರೀಯ ಹಿತಾಸಕ್ತಿಗಳಿಗೆ ಅಪಚಾರ ಮಾಡುವ ಯೋಜನೆ ಎಂದು ಸಿಪಿಐ(ಎಂ)ನ ಬಲವಾದ ಅಸಮ್ಮತಿಯನ್ನು ಪೊಲಿಟ್ ಬ್ಯೂರೋ ವ್ಯಕ್ತಗೊಳಿಸಿದೆ. ನಾಲ್ಕು ವರ್ಷಗಳ ಅವಧಿಗೆ ‘ಒಪ್ಪಂದದ ಮೇರೆಯ ಸೈನಿಕ’ರನ್ನು ನೇಮಕ ಮಾಡುವ ಮೂಲಕ ವೃತ್ತಿಪರ ಸಶಸ್ತ್ರ ಪಡೆಗಳನ್ನು ಕಟ್ಟಲಾಗುವುದಿಲ್ಲ. ಈ ಯೋಜನೆಯು ಪಿಂಚಣಿ ಹಣವನ್ನು ಉಳಿಸಲು, ನಮ್ಮ ವೃತ್ತಿಪರ ಸಶಸ್ತ್ರ ಪಡೆಗಳ ಗುಣಮಟ್ಟ ಮತ್ತು ದಕ್ಷತೆಯನ್ನು ತೀವ್ರವಾಗಿ ಇಳಿಸುತ್ತದೆ ಎಂದು ಪೊಲಿಟ್ ಬ್ಯುರೊ ಹೇಳಿದೆ.

ಕಳೆದ ಎರಡು ವರ್ಷಗಳಿಂದ ಭಾರತೀಯ ಸೇನೆಯಲ್ಲಿ ಯಾವುದೇ ನೇಮಕಾತಿ ನಡೆದಿಲ್ಲ. ಈ ಯೋಜನೆಯು ಸಶಸ್ತ್ರ ಪಡೆಗಳಿಗೆ ನಿಯಮಿತ ಸೈನಿಕರನ್ನು ನೇಮಿಸುವ ಬದಲು ಅಂತಹ ಗುತ್ತಿಗೆ ಸೈನಿಕರಿಗೆ ಅವರ ನಾಲ್ಕು ವರ್ಷಗಳ ನಂತರ ಉದ್ಯೋಗದ ಇತರ ಯಾವುದೇ ನಿರೀಕ್ಷೆಗಳು ಇಲ್ಲದಂತೆ ಅವರನ್ನು ಬಿಟ್ಟುಬಿಡುತ್ತದೆ. ಇದು ಅವರು ಖಾಸಗಿ ಸಶಸ್ತ್ರ ಪಡೆಗಳಿಗೆ ಸೇವೆ ಸಲ್ಲಿಸುವ ಅಪಾಯಕಾರಿ ಪರಿಸ್ಥಿತಿಯನ್ನು ಸೃಷ್ಟಿಸುತ್ತದೆ. ಇದು ಈಗಾಗಲೇ ತೀವ್ರ ಒತ್ತಡದಲ್ಲಿರುವ ನಮ್ಮ ಸಾಮಾಜಿಕ ಹಂದರಕ್ಕೆ ಅನಾಹುತಕಾರಿ ಪರಿಣಾಮಗಳನ್ನು ಉಂಟು ಮಾಡುತ್ತದೆ.

ಉದ್ಯೋಗ ಭದ್ರತೆಯ ಕನಿಷ್ಠ ರಕ್ಷಣೆಯಿಲ್ಲದೆ ನಮ್ಮ ಯುವಕರು ಪರಮ ತ್ಯಾಗಕ್ಕೆ ಸಿದ್ಧರಾಗಬೇಕೆಂದು ಕರೆ ನೀಡುವುದು ಅಪರಾಧವಾಗುತ್ತದೆ. ದೇಶದ ವಿವಿಧ ಭಾಗಗಳಲ್ಲಿ ಸ್ವಯಂಪ್ರೇರಿತ ಪ್ರತಿಭಟನೆಗಳು ಈ ಯೋಜನೆಯ ವಿರುದ್ಧ ಆಕ್ರೋಶವನ್ನು ಪ್ರತಿಬಿಂಬಿಸುತ್ತವೆ.

ಈ ‘ಅಗ್ನಿಪಥ್’ ಯೋಜನೆಯನ್ನು ತಕ್ಷಣವೇ ರದ್ದುಪಡಿಸಬೇಕು ಮತ್ತು ಸಶಸ್ತ್ರ ಪಡೆಗಳಿಗೆ ನಿಯಮಿತ ನೇಮಕಾತಿಯನ್ನು ತುರ್ತಾಗಿ ಕೈಗೊಳ್ಳಬೇಕು ಎಂದು ಸಿಪಿಐ(ಎಂ) ಪೊಲಿಟ್ ಬ್ಯೂರೋ ಆಗ್ರಹಿಸಿದೆ.

ಶಾಂತಿ ಕಾಪಾಡಲು ಜನತೆಗೆ ಮನವಿ:

ಇಬ್ಬರು ತಪ್ಪಿತಸ್ಥರ ವಿರುದ್ಧ ದೃಢ ಕ್ರಮ ಕೈಗೊಳ್ಳಬೇಕು

ಪ್ರವಾದಿ ಮುಹಮ್ಮದ್ ವಿರುದ್ಧ ಇಬ್ಬರು ಬಿಜೆಪಿ ವಕ್ತಾರರು ಮಾಡಿದ ಆಕ್ಷೇಪಾರ್ಹ ಹೇಳಿಕೆಗಳ ವಿರುದ್ಧ ಪ್ರತಿಭಟನೆಗಳ ಸಂದರ್ಭದಲ್ಲಿ ರಾಂಚಿ, ಹೌರಾ ಮತ್ತು ಇತರ ಕೆಲವು ಸ್ಥಳಗಳಲ್ಲಿ ನಡೆದ ಹಿಂಸಾಚಾರದ ಘಟನೆಗಳ ಬಗ್ಗೆ ಸಿಪಿಐ(ಎಂ) ಪೊಲಿಟ್ ಬ್ಯೂರೋ ತೀವ್ರ ಕಳವಳವನ್ನು ವ್ಯಕ್ತಪಡಿಸಿದೆ.

ಇಂತಹ ಪ್ರಚೋದನಕಾರಿ ಮತ್ತು ಅವಮಾನಕರ ಟೀಕೆಗಳ ವಿರುದ್ಧದ ಕೋಪವು ಸಮರ್ಥನೀಯವಾಗಿದ್ದರೂ, ಯಾವುದೇ ಹಿಂಸಾತ್ಮಕ ಪ್ರತಿಭಟನೆಯನ್ನು ಕೋಮು ಶಕ್ತಿಗಳು ತಮ್ಮ ಪ್ರಯೋಜನಕ್ಕೆ ಬಳಸಿಕೊಳ್ಳುತ್ತವೆ ಮತ್ತು ಪರಿಸ್ಥಿತಿಯನ್ನು ಇನ್ನಷ್ಟು ಉಲ್ಬಣಗೊಳಿಸುತ್ತದೆ. ಸಮಾಧಾನ ಮತ್ತು ಶಾಂತಿ ಕಾಪಾಡಬೇಕು ಎಂದು ಅದು ಜನತೆಗೆ ಮನವಿ ಮಾಡಿಕೊಂಡಿದೆ.

ದುರದೃಷ್ಟವಶಾತ್, ದೆಹಲಿ ಪೊಲೀಸರು ಈ ಇಬ್ಬರು ಮಾಜಿ ವಕ್ತಾರರನ್ನು ಮಾತ್ರವಲ್ಲದೆ ಈ ಪ್ರಕರಣಕ್ಕೆ ಯಾವುದೇ ರೀತಿಯಲ್ಲಿ ಸಂಬಂಧವಿರದ ಒಬ್ಬ ಪತ್ರಕರ್ತರು ಸೇರಿದಂತೆ ಇತರ 30 ಮಂದಿಯನ್ನೂ ಹೆಸರಿಸಿ ಎರಡು ಎಫ್ಐಆರ್‌ಗಳನ್ನು ದಾಖಲಿಸಿದ್ದಾರೆ. ಇದು ಆ ಇಬ್ಬರು ಮಾಜಿ ವಕ್ತಾರರು ಎಸಗಿದ ತಪ್ಪಿನ ಗಹನತೆಯನ್ನು ತಗ್ಗಿಸುವುದಕ್ಕಾಗಿ ಮಾಡಿರುವ ಒಂದು ದಿಕ್ಕು ತಪ್ಪಿಸುವ ನಡೆಯಾಗಿದೆ ಎಂದಿರುವ ಸಿಪಿಐ(ಎಂ) ಪೊಲಿಟ್‌ಬ್ಯುರೊ, ಆ ಇಬ್ಬರು ಮಾಜಿ ವಕ್ತಾರರ ವಿರುದ್ಧ ಕಾನೂನಿನ ಅಡಿಯಲ್ಲಿ ನಿರ್ದಿಷ್ಟ ಅಪರಾಧಕ್ಕಾಗಿ ಪ್ರತ್ಯೇಕವಾಗಿ ದೃಢ ಕ್ರಮ ತೆಗೆದುಕೊಳ್ಳಬೇಕು ಎಂದು ಆಗ್ರಹಿಸಿದೆ.

ರಾಷ್ಟ್ರಪತಿ ಚುನಾವಣೆ ಕುರಿತ ಪ್ರತಿಪಕ್ಷಗಳ ಸಭೆ
ಪಶ್ಚಿಮ ಬಂಗಾಲ ಮುಖ್ಯಮಂತ್ರಿಗೆ ಯೆಚೂರಿ ಪತ್ರ

ಮುಂಬರುವ ರಾಷ್ಟ್ರಪತಿ ಚುನಾವಣೆಯ ಬಗ್ಗೆ ಚರ್ಚಿಸಲು ಪಶ್ಚಿಮ ಬಂಗಾಲದ ಮುಖ್ಯಮಂತ್ರಿ ಮಮತಾ ಬ್ಯಾನರ್ಜಿಯವರು ಜೂನ್ 15 ರ ಪ್ರತಿಪಕ್ಷಗಳ ಮುಖಂಡರ ಸಭೆಯಲ್ಲಿ ಸಿಪಿಐ(ಎಂ) ಪರವಾಗಿ ರಾಜ್ಯಸಭೆಯಲ್ಲಿ ಪಕ್ಷದ ಗುಂಪಿನ ನಾಯಕರಾದ ಎಳಮಾರಮ್ ಕರೀಂ ಪ್ರತಿನಿಧಿಸುತ್ತಾರೆ ಎಂದು ಸಿಪಿಐ(ಎಂ) ಪ್ರಧಾನ ಕಾರ್ಯದರ್ಶಿ ಸೀತಾರಾಂ ಯೆಚುರಿ ಮುಖ್ಯಮಂತ್ರಿಗಳಿಗೆ ಬರೆದಿರುವ ಪತ್ರದಲ್ಲಿ ತಿಳಿಸಿದ್ದಾರೆ.

ಪರಸ್ಪರ ಸಮಾಲೋಚನೆ ನಡೆಸಲು ಮತ್ತು ಇಂತಹ ಸಭೆಗೆ ಪಕ್ಷದ ಮುಖಂಡರು ಹಾಜರಾಗಲು ಸಾಧ್ಯವಾಗುವಂತೆ ತಾವು ಅದಕ್ಕೆ ಮೊದಲು ಒಪ್ಪಿಕೊಂಡ ಕಾರ್ಯಕ್ರಮಗಳನ್ನು ಮರುಹೊಂದಿಸಲು ಸಾಕಷ್ಟು ಸಮಯ ಸಿಕ್ಕಿಲ್ಲ. ಆದರೂ ಭಾರತೀಯ ಸಂವಿಧಾನ ಮತ್ತು ಭಾರತೀಯ ಗಣರಾಜ್ಯದ ಜಾತ್ಯತೀತ ಪ್ರಜಾಸತ್ತಾತ್ಮಕ ಸ್ವರೂಪವನ್ನು ರಕ್ಷಿಸಲು ಎಲ್ಲಾ ಜಾತ್ಯತೀತ ಶಕ್ತಿಗಳನ್ನು ಅತ್ಯಂತ ಹೆಚ್ಚಿನ ಪ್ರಮಾಣದಲ್ಲಿ ಅಣಿನೆರಿಕೆಯನ್ನು ಬಲಪಡಿಸುವ ಅಗತ್ಯವನ್ನು ಸತತವಾಗಿ ಪ್ರತಿಪಾದಿಸಿಕೊಂಡು ಬಂದಿರುವ ಸಿಪಿಐ(ಎಂ) ಇದಕ್ಕೆ ಅನುಗುಣವಾಗಿ, ಇದರಲ್ಲಿ ಭಾಗವಹಿಸುತ್ತಿದೆ ಎಂದು ಯೆಚುರಿ ತಮ್ಮ ಪತ್ರದಲ್ಲಿ ಹೇಳಿದ್ದಾರೆ.

ಪತ್ರದ ಪೂರ್ಣಪಾಠ ಹೀಗಿದೆ:

ಜೂನ್ 14, 2022

ಮಾನ್ಯ ಮುಖ್ಯಮಂತ್ರಿಗಳೇ,

ಭಾರತದ ರಾಷ್ಟ್ರಪತಿಯನ್ನು ಆಯ್ಕೆ ಮಾಡುವ ಮುಂಬರುವ ಚುನಾವಣೆಯ ಕುರಿತು ಚರ್ಚಿಸಲು ನವದೆಹಲಿಯ ಕಾನ್ಸಿಟ್ಯೂಶನ್ ಕ್ಲಬ್‌ನಲ್ಲಿ ಜೂನ್ 15, 2022 ರಂದು ಮಧ್ಯಾಹ್ನ 3.00 ಗಂಟೆಗೆ ವಿರೋಧ ಪಕ್ಷಗಳ ಸಭೆಯ ಕುರಿತು ನನಗೆ ತಿಳಿಸುವ ನಿಮ್ಮ ಜೂನ್ 11, 2022 ರ ದಿನಾಂಕದ ಪತ್ರ ನಾನು ಪಡೆದಿದ್ದೇನೆ.

ಯಾವಾಗಲೂ ವಿರೋಧ ಪಕ್ಷಗಳ ಇಂತಹ ಸಭೆಗಳು ಸೇರಲು ಬಯಸುವವರ ಗರಿಷ್ಠ ಭಾಗವಹಿಸುವಿಕೆ ಇರುವಂತೆ ಮಾಡಲು ಒಂದು ಪೂರ್ವಭಾವಿ ಪರಸ್ಪರ ಸಮಾಲೋಚನೆಯ ವಿಧಾನವನ್ನು ಅನುಸರಿಸುತ್ತವೆ. ಆದರೆ, ಈ ಸಂದರ್ಭದಲ್ಲಿ, ದಿನಾಂಕ, ಸಮಯ, ಸ್ಥಳ ಮತ್ತು ಕಾರ್ಯಸೂಚಿಯನ್ನು ತಿಳಿಸುವ ಒಂದು ಏಕಪಕ್ಷೀಯ ಪತ್ರವನ್ನು ನಾವು ಪಡೆದಿದ್ದೇವೆ.

ನಿಮ್ಮ ಪತ್ರವು "ಪ್ರತಿಪಕ್ಷದ ಧ್ವನಿಗಳ ಒಂದು ಫಲಪ್ರದ ಸಂಗಮವು ಈ ಸಮಯದ ಅಗತ್ಯವಾಗಿದೆ" ಎಂದು ಉಲ್ಲೇಖಿಸುತ್ತದೆ. ಪರಸ್ಪರ ಸಮಾಲೋಚನೆ ನಡೆಸಲು ಮತ್ತು ಇಂತಹ ಸಭೆಗೆ ಪಕ್ಷದ ಮುಖಂಡರು ಹಾಜರಾಗಲು ಸಾಧ್ಯವಾಗುವಂತೆ ತಾವು ಅದಕ್ಕೆ ಮೊದಲು ಒಪ್ಪಿಕೊಂಡ ಕಾರ್ಯಕ್ರಮಗಳನ್ನು ಮರುಹೊಂದಿಸಲು ಸಾಕಷ್ಟು ಸಮಯ ಕೊಟ್ಟಿದ್ದರೆ ಇದನ್ನು ಇನ್ನೂ ಉತ್ತಮವಾಗಿ ಸಾಧಿಸಬಹುದಿತ್ತು. ದುರದೃಷ್ಟವಶಾತ್, ನಿಮ್ಮ ಪತ್ರದ ಸ್ವೀಕೃತಿ ಮತ್ತು ಸಭೆಯ ದಿನಾಂಕದ ನಡುವೆ ಕೇವಲ ಮೂರು ದಿನಗಳು ಇದ್ದವು.

ಭಾರತೀಯ ಸಂವಿಧಾನ ಮತ್ತು ಭಾರತೀಯ ಗಣರಾಜ್ಯದ ಜಾತ್ಯತೀತ ಪ್ರಜಾಸತ್ತಾತ್ಮಕ ಸ್ವರೂಪವನ್ನು ರಕ್ಷಿಸಲು ಎಲ್ಲಾ ಜಾತ್ಯತೀತ ಶಕ್ತಿಗಳನ್ನು ಅತ್ಯಂತ ಹೆಚ್ಚಿನ ಪ್ರಮಾಣದಲ್ಲಿ ಅಣಿನೆರಿಕೆಯನ್ನು ಬಲಪಡಿಸುವ ಅಗತ್ಯವನ್ನು ಸಿಪಿಐ(ಎಂ) ಸತತವಾಗಿ ಪ್ರತಿಪಾದಿಸಿಕೊಂಡು ಬಂದಿದೆ. ಇದಕ್ಕೆ ಅನುಗುಣವಾಗಿ, ಮುಂಬರುವ ಭಾರತದ ರಾಷ್ಟ್ರಪತಿ ಚುನಾವಣೆಯ ಬಗ್ಗೆ ಚರ್ಚಿಸಲು ಮತ್ತು ರಾಷ್ಟ್ರಪತಿಗಳು ಭಾರತೀಯ ಸಂವಿಧಾನದ ಸಂರಕ್ಷಕರಾಗಿದ್ದಾರೆ ಎಂಬ ಅಂಶವನ್ನು ಪರಿಗಣಿಸಿ, ಈ ಸಭೆಯಲ್ಲಿ ಸಿಪಿಐ(ಎಂ) ಅನ್ನು ರಾಜ್ಯಸಭೆಯಲ್ಲಿ ನಮ್ಮ ಗುಂಪಿನ ನಾಯಕರಾದ ಶ್ರೀ ಎಳಮಾರಮ್ ಕರೀಂ ಪ್ರನಿಧಿಸುತ್ತಾರೆ.

ನಿಮ್ಮ ವಿಶ್ವಾಸಿ

(ಸೀತಾರಾಂ ಯೆಚೂರಿ)

ಬುಲ್‌ಡೋಜರ್ ತಂತ್ರಗಳ ವಿರುದ್ಧ ಮಧ್ಯಪ್ರವೇಶಿಸಿ
-ದೇಶದ ಮುಖ್ಯ ನ್ಯಾಯಾಧೀಶರಿಗೆ ನಿವೃತ್ತ ನ್ಯಾಯಮೂರ್ತಿಗಳ ಪತ್ರ

ಹಿಂಸಾಚಾರದ ಘಟನೆಗಳು ಮತ್ತು ಪ್ರಭುತ್ವದ ಅಧಿಕಾರಿಗಳಿಂದ ನಾಗರಿಕರ ದಮನದ ಸಂದರ್ಭದಲ್ಲಿ ಮಧ್ಯಪ್ರವೇಶಿಸಬೇಕು, ಬಿಜೆಪಿ ಸರ್ಕಾರವು ಪ್ರತಿಭಟನಾಕಾರರನ್ನು ಮನಬಂದಂತೆ ಬಂಧಿಸುತ್ತಿರುವುದರ ಮತ್ತು ಬುಲ್‌ಡೋಜರ್ ತಂತ್ರಗಳನ್ನು ಬಳಸುತ್ತಿರುವುದರ ವಿರುದ್ಧ ಸ್ವಯಂ ಪ್ರೇರಿತವಾಗಿ ಕ್ರಮ ಕೈಗೊಳ್ಳಬೇಕು ಎಂದು 12 ಮಂದಿ ನಿವೃತ್ತ ನ್ಯಾಯಮೂರ್ತಿಗಳು ಹಾಗೂ ಹಿರಿಯ ನ್ಯಾಯವಾದಿಗಳು ಸರ್ವೋಚ್ಚ ನ್ಯಾಯಾಲಯದ ಮುಖ್ಯ ನ್ಯಾಯಾಧೀಶ ನ್ಯಾಯಮೂರ್ತಿ ಎನ್.ವಿ. ರಮಣ ಅವರಿಗೆ ಪತ್ರ ಬರೆದಿದ್ದಾರೆ.

ಶಾಂತಿಯುತ ಪ್ರತಿಭಟನೆಯಲ್ಲಿ ತೊಡಗಿಸಿಕೊಳ್ಳಲು ಅವಕಾಶ ನೀಡುವ ಬದಲು, ಉತ್ತರಪ್ರದೇಶ ಆಡಳಿತ ಅವರ ವಿರುದ್ಧ ಹಿಂಸಾತ್ಮಕ ಕ್ರಮ ಕೈಗೊಳ್ಳಲು ಮುಂದಾದಂತಿದೆ. ಭವಿಷ್ಯದಲ್ಲಿ ಯಾರೂ ತಪ್ಪು ಮಾಡದಂತೆ ಅಥವಾ ಕಾನೂನನ್ನು ಕೈಗೆತ್ತಿಕೊಳ್ಳದಂತೆ ತಪ್ಪಿತಸ್ಥರ ವಿರುದ್ಧ ಕ್ರಮ ಕೈಗೊಳ್ಳಲು ಮುಖ್ಯಮಂತ್ರಿಗಳು ಅಧಿಕಾರಿಗಳಿಗೆ ಸೂಚಿಸಿರುವುದನ್ನು ಪತ್ರದಲ್ಲಿ ಉಲ್ಲೇಖಿಸಲಾಗಿದೆ.

ಮುಖ್ಯಮಂತ್ರಿ ಯೋಗಿ ಆದಿತ್ಯನಾಥ್ ಅವರ ಸೂಚನೆಗಳು ಪ್ರತಿಭಟನಾಕಾರರೊಂದಿಗೆ ಅತ್ಯಂತ ಕ್ರೂರವಾಗಿ–ನಿರ್ದಾಕ್ಷಿಣ್ಯವಾಗಿ ನಡೆಸಿಕೊಳ್ಳಲು ಮತ್ತು ಅಕ್ರಮವಾಗಿ ಹಿಂಸಿಸಲು ಪೊಲೀಸರಿಗೆ ಧೈರ್ಯ ನೀಡಿವೆ. ಆಡಳಿತ ನಡೆಸುವವರಿಂದ ಇಂತಹ ಕ್ರೂರ ನಿಗ್ರಹವು ಕಾನೂನಾತ್ಮಕ ಆಡಳಿತವನ್ನು ಬುಡಮೇಲು ಮಾಡುವ ಹಾಗೂ ನಾಗರಿಕ ಹಕ್ಕುಗಳ ಸ್ಪಷ್ಟ ಉಲ್ಲಂಘನೆಯಾಗಿದೆ. “ಪ್ರಭುತ್ವವು ಖಾತರಿಪಡಿಸಿರುವ ಸಂವಿಧಾನ ಮತ್ತು ಮೂಲಭೂತ ಹಕ್ಕುಗಳನ್ನು ಇದು ಅಪಹಾಸ್ಯ ಮಾಡುತ್ತದೆ” ಎಂದು ಪತ್ರದಲ್ಲಿ ಅಭಿಪ್ರಾಯ ಪಡಲಾಗಿದೆ.

ಇಂತಹ ಕ್ರೂರ ದಾಳಿಗಳು ನ್ಯಾಯಾಂಗದ ಸ್ಥೈರ್ಯವನ್ನು ಪರಿಕ್ಷೆಗೊಳಪಡಿಸುವಂತದ್ದಾಗಿದ್ದು, ಈ ಹಿಂದೆ ಇಂತಹ ಘಟನೆಗಳು ಜರುಗಿದಾಗ ನ್ಯಾಯಾಂಗವು ಪರಿಸ್ಥಿತಿಯನ್ನು ಸಮರ್ಥವಾಗಿ ಎದುರಿಸಿದೆ. ವಲಸೆ ಕಾರ್ಮಿಕರು ಹಾಗೂ ಪೆಗಸಸ್ ಪ್ರಕರಣದಲ್ಲಿ ಸರ್ವೋಚ್ಚ ನ್ಯಾಯಾಲಯ ಸ್ವಯಂಪ್ರೇರಿತವಾಗಿ ಪ್ರಕರಣ ದಾಖಲಿಸಿಕೊಂಡಿದ್ದನ್ನು ಪತ್ರದಲ್ಲಿ ನೆನಪಿಸಲಾಗಿದೆ.

ಇಂದಿನ ನಿರ್ಣಾಯಕ ಕಾಲಘಟ್ಟದಲ್ಲಿ ಸರ್ವೋಚ್ಚ ನ್ಯಾಯಾಲಯವು ಸಮರ್ಥವಾಗಿ ಸ್ಪಂದಿಸುತ್ತದೆ ಮತ್ತು ನಾಗರಿಕರು ಹಾಗೂ ಸಂವಿಧಾನವನ್ನು ನಿರಾಸೆಗೊಳಿಸುವುದಿಲ್ಲ ಎಂಬುದಾಗಿ ನಾವು ಭಾವಿಸುತ್ತೇವೆ ಎಂದು ಈ ಹಿರಿಯ ನ್ಯಾಯವಿದರು ಆಶಿಸಿದ್ದಾರೆ.

ಸುಪ್ರೀಂ ಕೋರ್ಟ್ ನಿವೃತ್ತ ನ್ಯಾಯಮೂರ್ತಿಗಳಾದ ಬಿ ಸುದರ್ಶನ ರೆಡ್ಡಿ, ವಿ ಗೋಪಾಲ ಗೌಡ, ಎ ಕೆ ಗಂಗೂಲಿ, ದೆಹಲಿ ಹೈಕೋರ್ಟ್ ನಿವೃತ್ತ ಮುಖ್ಯ ನ್ಯಾಯಮೂರ್ತಿ ಎ ಪಿ ಶಾ, ಮದ್ರಾಸ್ ಹೈಕೋರ್ಟ್ ನಿವೃತ್ತ ನ್ಯಾಯಮೂರ್ತಿ ಕೆ ಚಂದ್ರು, ಸರ್ವೋಚ್ಚ ನ್ಯಾಯಾಲಯದ ಹಿರಿಯ ನ್ಯಾಯವಾದಿಗಳಾದ ಶಾಂತಿಭೂಷಣ್, ಇಂದಿರಾ ಜೈಸಿಂಗ್, ಚಂದರ್ ಉದಯ್ ಸಿಂಗ್, ಪ್ರಶಾಂತ್ ಭೂಷಣ್, ಆನಂದ್ ಗ್ರೋವರ್ ಹಾಗೂ ಮದ್ರಾಸ್ ಹೈಕೋರ್ಟ್‌ನ ಹಿರಿಯ ವಕೀಲ ಶ್ರೀರಾಂ ಪಂಚು ಪತ್ರಕ್ಕೆ ಸಹಿ ಮಾಡಿದ್ದಾರೆ.

ಇಂಡಿಯನ್ ಬ್ಯಾಂಕ್‌ನ ಮಹಿಳಾ ವಿರೋಧಿ ನಿರ್ಧಾರವನ್ನು ತಕ್ಷಣ ಹಿಂಪಡೆಯಬೇಕು:
ಎಐಡಿಡಬ್ಲ್ಯುಎ ಆಗ್ರಹ

ಅಖಿಲ ಭಾರತ ಜನವಾದಿ ಮಹಿಳಾ ಸಂಘ(ಎಐಡಿಡಬ್ಲ್ಯುಎ) ಆರು ತಿಂಗಳು ಅಥವಾ ಅದಕ್ಕಿಂತ ಹೆಚ್ಚಿನ ಅವಧಿಯ ಗರ್ಭಿಣಿ ಮಹಿಳೆಯರ ನೇಮಕಾತಿಯನ್ನು ಮಾಡುವುದಿಲಲ್ಲೆಧಿರುವ ಇಂಡಿಯನ್ ಬ್ಯಾಂಕ್‌ನ ಇತ್ತೀಚಿನ ಸುತ್ತೋಲೆಗೆ ತನ್ನ ಬಲವಾದ ವಿರೋಧವನ್ನು ಬಲವಾಗಿ ವ್ಯಕ್ತಪಡಿಸಿದೆ. ಕೆಲವು ತಿಂಗಳ ಹಿಂದೆ ಸ್ಟೇಟ್ ಬ್ಯಾಂಕ್ ಆಫ್ ಇಂಡಿಯಾ ಇದೇ ರೀತಿಯ ನಿರ್ಧಾರವನ್ನು ವಿವಿಧೆಡೆಗಳಿಂದ ಭಾರೀ ಪ್ರತಿಭಟನೆಗಳಿಂದಾಗಿ ಹಿಂತೆಗೆದುಕೊಂಡಿದ್ದನ್ನು ಈ ಸಂದರ್ಭದಲ್ಲಿ ಅದು ನೆನಪಿಸಿದೆ.

ಈ ನಿರ್ಧಾರ "ಸಂವಿಧಾನ ವಿರೋಧಿ" ಮತ್ತು ಹೆರಿಗೆ ಸೌಲಭ್ಯಗಳು (ತಿದ್ದುಪಡಿ) ಕಾಯಿದೆ, 2017 ರ ಅಡಿಯಲ್ಲಿ ನಿಬಂಧನೆಗಳನ್ನು ಉಲ್ಲಂಘಿಸುತ್ತದೆ. ಆದ್ದರಿಂದ ಇಂಡಿಯನ್ ಬ್ಯಾಂಕ್ ಆಡಳಿತ ಈ ಮಹಿಳಾ ವಿರೋಧಿ ನಿರ್ಧಾರವನ್ನು ತಕ್ಷಣವೇ ಹಿಂಪಡೆಯಬೇಕೆಂದು ಅದು ಆಗ್ರಹ ಪಡಿಸಿದೆ

ಇಂಡಿಯನ್ ಬ್ಯಾಂಕ್ ತನ್ನ ದೈಹಿಕ ಸಾಮರ್ಥ್ಯದ ಇತ್ತೀಚಿನ ಮಾರ್ಗಸೂಚಿಗಳಲ್ಲಿ ಹೊಸ ಷರತ್ತನ್ನು ಸೇರಿಸಿ 12 ವಾರಗಳ ಅಥವಾ ಅದಕ್ಕಿಂತ ಹೆಚ್ಚಿನ ಅವಧಿಯ ಗರ್ಭಿಣಿಯರು ನೇಮಕಕ್ಕೆ ತಾತ್ಕಾಲಿಕವಾಗಿ ಅನರ್ಹರು, ಹೆರಿಗೆಯ ದಿನಾಂಕದ ಪುಟ 7 ಕ್ಕೆ

ಸಂಪಾದಕೀಯ

ಮೇಕೆ ದಾಟು: ಬೇಕಿರುವುದು ವಿವಾದದ ವಿಸ್ತರಣೆ ಅಲ್ಲ

ಬೆಂಗಳೂರು ಮಹಾನಗರದ ಕುಡಿಯುವ ನೀರಿನ ಯೋಜನೆಯೂ ಒಳಗೊಂಡಂತೆ ಕರ್ನಾಟಕದ ಪಾಲಿಗೆ ದೊರೆಯುವ ಹೆಚ್ಚುವರಿ ನೀರನ್ನು ಬಳಸಲು ಆಣೆಕಟ್ಟು ಕಟ್ಟುವ ಪ್ರಸ್ತಾಪದ ಜಾರಿಗೆ ಡಿ.ಪಿ.ಆರ್. ಮಾಡಲು ಮನವಿ ಮಾಡಿದೆ. ಕರ್ನಾಟಕದ ಈ ಕೋರಿಕೆಯನ್ನು ತಿರಸ್ಕರಿಸುವಂತೆ ತಮಿಳುನಾಡು ಪ್ರಧಾನಿಗೆ ಆಕ್ಷೇಪವನ್ನು ಸಲ್ಲಿಸಿರುವುದು ಉಭಯ ರಾಜ್ಯಗಳ ನಡುವೆ ವಾಗ್ವಾದಕ್ಕೆಡೆ ಕಾರಣವಾಗಿದೆ.

ಕಾವೇರಿ ನದಿ ನೀರಿನ ಹಂಚಿಕೆ ಕುರಿತಂತೆ ವಿವಾದ ಹೊಸತೇನಲ್ಲ. ನ್ಯಾಯಾಲಯಗಳು, ಪ್ರಾಧಿಕಾರ ನೀರಿನ ಹಂಚಿಕೆ ಮಾಡಿ ನೀಡಿದ ಪ್ರಮುಖ ತೀರ್ಪಿನಲ್ಲಿ ಉಳಿದ 4.75 ಟಿ.ಎಂ.ಸಿ. ನೀರನ್ನು ಕುಡಿಯುವ ನೀರು ಹಾಗೂ ವಿದ್ಯುತ್ ಉತ್ಪಾದನೆಯ ಉದ್ದೇಶಕ್ಕೆ ಸದ್ಬಳಕೆ ಮಾಡಲು ತೀರ್ಪಿನಲ್ಲಿ ಅವಕಾಶವಿದೆ. ಅದಕ್ಕಾಗಿ ಮೇಕೆ ದಾಟು ಬಳಿಯ ಬಿಳಿಗುಂಡ್ಲು ಬಳಿ ಆಣೆಕಟ್ಟೆ ಕಟ್ಟಲು ಅಗತ್ಯವಾದ ವಿವರ ಯೋಜನಾ ವರದಿ– ಡಿ.ಪಿ.ಆರ್. ಹೊರಡಿಸುವುದೂ ಒಳಗೊಂಡು ಅಗತ್ಯವಾದ ಕ್ರಮಗಳಿಗೆ ಕರ್ನಾಟಕ ಸರಕಾರ ಮುಂದಾಗಿದೆ.

ಅದರಂತೆ ಅದರ ಅನುಮೋದನೆಗೆ ಕಾವೇರಿ ನೀರು ನಿಯಂತ್ರಣ ಪ್ರಾಧಿಕಾರಕ್ಕೆ ಸಲ್ಲಿಸಿದೆ. ಈ ವಾರದಲ್ಲಿ ನಡೆಯಲಿರುವ ಸಭೆಯಲ್ಲಿ ಚರ್ಚೆಗೆ ಕೈಗೆತ್ತಿಕೊಳ್ಳದಂತೆ ತಮಿಳುನಾಡು ಮಾಡಿರುವ ಮನವಿ ವಿವಾದದ ಮುಂದುವರಿಕೆ ಅಷ್ಟೇ. ಇದು ಸೂಕ್ಷ್ಮ ಪ್ರಶ್ನೆಯಾಗಿರುವುದರಿಂದ ಉಭಯ ರಾಜ್ಯಗಳ ನಡುವೆ ಸಂಘರ್ಷ ಉಂಟಾಗದಂತೆ ಕೇಂದ್ರ ಸರಕಾರ, ಪ್ರಧಾನಿ ಕ್ರಮ ವಹಿಸಿ ಬಗೆ ಹರಿಸಲು ಮುತುವರ್ಜಿ ವಹಿಸಬೇಕು. ಸಂಕುಚಿತ ರಾಜಕಾರಣ ಕೂಡದು.

ನೀರಿನ ಬಳಕೆಗೆ ಸಂಬಂಧಿಸಿ ನ್ಯಾಯ ಮಂಡಳಿಯ ತೀರ್ಪು ಇದೆ. ಅದೇ ಹೊತ್ತಿನಲ್ಲಿ ಯೋಜನೆ ಜಾರಿಯಿಂದ ಉಂಟಾಗಬಹುದಾದ ಪಾರಿಸಾರಿಕ, ಆಡಳಿತಾತ್ಮಕ ಹಾಗೂ ರಾಜಕೀಯ ಪರಿಣಾಮಗಳ ಗಂಭೀರ ಪ್ರಶ್ನೆಗಳೂ, ಅನುಮಾನ ಆತಂಕಗಳೂ ಇವೆ. ರಾಜ್ಯಗಳು ಎತ್ತುವ ಪ್ರಶ್ನೆಗಳಿಗೆ, ಭಿನ್ನಾಭಿಪ್ರಾಯಗಳಿಗೆ ಸಮನ್ವಯ, ಸಮಂಜಸವಾದ ಸೂತ್ರಗಳ ಮೂಲಕ ಇತ್ಯರ್ಥ ಪಡಿಸುವ ಹೊಣೆ ಕೇಂದ್ರ ಸರಕಾರದ ಮೇಲೆ ಇದೆ. ಈಗಲೂ ಪ್ರಾಧಿಕಾರ ಸಭೆ ಸೇರುತ್ತಿರುವುದರಿಂದ ಉಭಯ ರಾಜ್ಯಗಳು ವಿವಾದವನ್ನು ಹೊರಗೆ ವಿಸ್ತರಿಸದೇ ಪರಿಹಾರ ಕಾಣಲು ಯತ್ನಿಸುವುದೂ ಉಪಯುಕ್ತ. ಇದರಲ್ಲಿ ಕೇಂದ್ರ ಒಕ್ಕೂಟ ತತ್ವ, ರಾಜ್ಯಗಳ ಸಂಬಂಧ ದುರ್ಬಲವಾಗದಂತೆ ಅಗತ್ಯ ಎಚ್ಚರಿಕೆ ಮುತುವರ್ಜಿ ವಹಿಸಬೇಕು. ರಾಜ್ಯಗಳೂ ಸಹಕರಿಸಬೇಕು.

ಕಿವಿ ಹಿಂಡ ಬೇಕಾದ ಸಿದ್ಧರಾಮಯ್ಯನವರ ನಡೆಗಳು

ಈ ವಾರ

ಎಸ್.ವೈ. ಗುರುಶಾಂತ್

ವಿಧಾನಸಭೆಯ ಒಳಗೆ ಅಥವಾ ಹೊರಗೆ ಸಿದ್ದರಾಮಯ್ಯನವರು ಆಡುವ ಮಾತುಗಳಿಗೆ ಒಂದು 'ತೂಕ' ಇದ್ದೇ ಇದೆ. ಬಿಜೆಪಿಯ ಆಕ್ರಮಣಕಾರಿ ರಾಜಕೀಯ ದಾಳಿಗಳಿಗೆ ಅಷ್ಟೇ ತೀಕ್ಷ್ಣವಾಗಿ ವೈಚಾರಿಕ ಮರುದಾಳಿ ಮಾಡುವುದು ಸಂಸದೀಯ ಪ್ರಜಾಪ್ರಭುತ್ವದಲ್ಲಿ ವಿರೋಧ ಪಕ್ಷದ ನಾಯಕನಾಗಿ ನಿರ್ವಹಿಸಲೇಬೇಕಾದ ಗುರುತರ ಹೊಣೆಗಾರಿಕೆಯೂ ಹೌದು. ವಿಶೇಷವಾಗಿ ಹೆಚ್ಚುತ್ತಿರುವ ಕೋಮುವಾದಿಗಳ ದಾಳಿಗಳು, ಅದಕ್ಕೆ ಸರ್ಕಾರದ ಸಿದ್ಧ ಸಮರ್ಥನೆ ಮತ್ತು ಕುಮ್ಮಕ್ಕಿನ ನಡೆಗಳನ್ನು ಅತ್ಯಂತ ಕಠಿಣ ಮಾತುಗಳಲ್ಲಿ ಟೀಕಿಸುವ ಕೋಮುವಾದಿಗಳ ಹುನ್ನಾರಗಳನ್ನು ಬಯಲಿಗಿಡುವಲ್ಲಿ ಸಿದ್ದರಾಮಯ್ಯನವರು ವಹಿಸುವ ಪಾತ್ರ ಜನರ ಗಮನ ಸೆಳೆಯುತ್ತದೆ. ಮೆಚ್ಚುಗೆ, ಬೆಂಬಲವನ್ನು ಪಡೆಯುತ್ತದೆ. ಈಗ ವಿಧಾನ ಪರಿಷತ್ ನಲ್ಲಿ ಬಿ.ಕೆ. ಹರಿಪ್ರಸಾದ್ ಸೇರ್ಪಡೆ, ಕೋಮುವಾದದ ವಿರುದ್ಧ ಅವರ ದನಿಯಿಂದಾಗಿ ಮತ್ತಷ್ಟು ಬಲ ಬಂದಿದೆ.

ಸಿದ್ದರಾಮಯ್ಯನವರು ಕೆಳಹಂತದ ರಾಜಕಾರಣದಿಂದ ಮುಖ್ಯಮಂತ್ರಿಯಾಗುವ ವರೆಗೆ ವಿವಿಧ ಹಂತಗಳಲ್ಲಿ ಅಧಿಕಾರವನ್ನು ನಡೆಸಿ (ಅನುಭವಿಸಿ) ಬೆಳೆದವರು. ಲೋಹಿಯಾ ರವರ ಸಮಾಜವಾದಿ ವಿಚಾರಗಳ ಹಿನ್ನೆಲೆ ಅವರಿಗಿದೆ ಎಂದೂ ಹೇಳಲಾಗುತ್ತದೆ. ಲೋಹಿಯಾ ವಿಚಾರಗಳ ಆಳಕ್ಕೆ ಅಷ್ಟಾಗಿ ಹೋಗದೆ ಪ್ರಾಯೋಗಿಕ ಅನುಭವಗಳಿಂದ ಸಾಮಾಜಿಕ ವಾಸ್ತವಗಳನ್ನು ಅರಿತು ಬದಲಾವಣೆಯ ಕನಸಿನೊಂದಿಗೆ ಹಂಬಲಿಸಿದವರು ಸಿದ್ದರಾಮಯ್ಯ ಅನ್ನುವುದು ಒಂದು ಹೆಗ್ಗಳಿಕೆ. ತಮ್ಮದೇ ಆದ ಸಾಮಾಜಿಕ ನ್ಯಾಯದ ಪರಿಕಲ್ಪನೆಯನ್ನು ಜಾರಿಗೊಳಿಸಲು ಆಸಕ್ತಿ ತೋರಿದವರು ಎನ್ನುವುದೂ ಮತ್ತೊಂದು ಅಂಶ.

ಕರ್ನಾಟಕದಲ್ಲಿ ಕಾಂಗ್ರೆಸ್ ಪಕ್ಷ ಅಧಿಕಾರಕ್ಕೆ ಬಂದಿದೆ. ಆಡಳಿತ, ನೀತಿಗಳ ವೈಫಲ್ಯವಾದಾಗ ಸೋತಿದೆ. ಇತ್ತೀಚೆಗೆ ಸಿದ್ದರಾಮಯ್ಯನವರು ಮುಖ್ಯಮಂತ್ರಿಯಾಗಿ ನೇತೃತ್ವ ವಹಿಸಿ ಚುನಾವಣೆಗೆ ಹೋದಾಗಲೂ ಕಾಂಗ್ರೆಸ್ ಅಧಿಕಾರ ಕಳೆದುಕೊಂಡಿದೆ. 2018 ರ ಚುನಾವಣೆಯಲ್ಲಿ ಬಿಜೆಪಿಯನ್ನು ನೆಚ್ಚದೇ ಜನತೆ ಯಾವುದೇ ಒಂದು ಪಕ್ಷ ಏಕಾಂಗಿಯಾಗಿ ಸರಕಾರ ರಚಿಸುವಂತೆ ಬಹುಮತ ನೀಡದೆ ಇರುವಾಗ ಮತ ನಿರಪೇಕ್ಷತೆಯ ಶಕ್ತಿಗಳ ಪರವಾದ ಜನಾದೇಶದಿಂದಾಗಿ ಕುಮಾರಸ್ವಾಮಿಯವರ ನೇತೃತ್ವದಲ್ಲಿ ಸರ್ಕಾರ ರಚಿಸಲು ಇದೇ ಕಾಂಗ್ರೆಸ್ ಬೇಷರತ್ತಿನ ಬೆಂಬಲ ನೀಡಿ ಸಮ್ಮಿಶ್ರ ಸರಕಾರವನ್ನು ರಚಿಸಿತು.

ಕೋಮುವಾದವನ್ನು ವಿರೋಧಿಸುವಾಗಲೇ ಉದಾರೀಕರಣದ ಆರ್ಥಿಕ ನೀತಿಗಳ ಪರ ಗಟ್ಟಿ ನಿಲುವು ಕಾಂಗ್ರೆಸ್ ನದು. ರಾಜ್ಯದಲ್ಲಿ ಆ ನೀತಿಗಳನ್ನು ಜಾರಿಗೊಳಿಸುವಲ್ಲಿ ಮತ್ತು ಬಿಜೆಪಿ ಸರ್ಕಾರದ ಆರ್ಥಿಕ ನೀತಿಗಳನ್ನು ವಿರೋಧಿಸದೆ ಇರುವಲ್ಲಿ ಅದರ ಪಾತ್ರವೂ ನಿಚ್ಚಳ. ಆದರೆ ಕೋಮುವಾದದ ವಿರುದ್ಧ ಮಾತನಾಡುವುದನ್ನು ಕಾಂಗ್ರೆಸ್ ಬಿಟ್ಟಿಲ್ಲ. ಅನೇಕ ಬಾರಿ ಪಕ್ಷದೊಳಗೇ ಬೆಂಬಲ ಸಿಗದೇ ಇರುವಾಗಲೂ ವಿಶೇಷವಾಗಿ, ಸಿದ್ದರಾಮಯ್ಯನವರು ಸತತವಾಗಿ ಒಡ್ಡುವ ಪ್ರತಿರೋಧ, ವಾದ ಮಂಡನೆಯೂ ಗಮನಾರ್ಹ. ಇದರಿಂದಾಗಿ ಅವರು ಅತ್ಯಂತ ಜನಪ್ರಿಯ ಹಾಗೂ ಜನಬೆಂಬಲದ ಅನುಭವಿ ನಾಯಕರಾಗಿಯೂ ಬೆಳೆದಿದ್ದಾರೆ.

ಹೀಗಿರುವಾಗಲೂ ಸಿದ್ದರಾಮಯ್ಯನವರ ಕೆಲವು ರಾಜಕೀಯ ನಡೆಗಳು ಪ್ರಶ್ನಾರ್ಹವಾಗಿವೆ. ಮುಖ್ಯವಾಗಿ, ಇತ್ತೀಚೆಗೆ ನಡೆದ ವಿಧಾನಸಭೆಯಿಂದ ರಾಜ್ಯ ಸಭೆಗೆ ನಡೆದ ಚುನಾವಣೆಯಲ್ಲಿ ಬಿ.ಜೆ.ಪಿ. ಪಕ್ಷ ನಾಲ್ಕನೆಯ ಅಭ್ಯರ್ಥಿಯನ್ನು ಗೆಲ್ಲಿಸಿಕೊಳ್ಳಲು ಸಿದ್ದರಾಮಯ್ಯನವರು ರೂಪಿಸಿದ ರಾಜಕೀಯ ತಂತ್ರಗಾರಿಕೆ ಪ್ರಮುಖ ಪಾತ್ರ ವಹಿಸಿದೆ ಎನ್ನಲಾಗುತ್ತಿದೆ. ಇದರಲ್ಲಿ ಆರಂಭದಲ್ಲಿ ಕಾಂಗ್ರೆಸ್ ಪಕ್ಷ ಒಂದು ಸ್ಥಾನಕ್ಕೆ ಮಾತ್ರ ತನ್ನ ಅಭ್ಯರ್ಥಿಯನ್ನು ಕಣಕ್ಕಿಳಿಸಲು ನಿರ್ಧರಿಸಿತ್ತು. ಜೆ.ಡಿ.ಎಸ್. ತನ್ನ ಮತಗಳ ಜೊತೆಗೆ, ತನ್ನ ಅಭ್ಯರ್ಥಿಗೆ ಹಾಕಿ ಉಳಿದ ಮತಗಳಲ್ಲಿ ಎರಡನೆಯ ಪ್ರಾಶಸ್ತ್ಯದ ಮತವನ್ನು ಕಾಂಗ್ರೆಸ್ ಪಕ್ಷ ನೀಡಿದ್ದರೆ ಜೆ.ಡಿ.ಎಸ್. ಅಭ್ಯರ್ಥಿಯ ಗೆಲುವು ನಿಶ್ಚಿತವಿತ್ತು, ಬಿಜೆಪಿಯನ್ನು ಸೋಲಿಸಬಹುದಿತ್ತು. ಹಾಗೆ ಮಾಡದೇ ಸ್ಪರ್ಧಿಸದಿರುವ ಹಿಂದಿನ ನಿರ್ಧಾರ ಬದಲಿಸಲು ಹೈಕಮಾಂಡನ್ನು ಒಪ್ಪಿಸಿ ಆ ಸ್ಥಾನಕ್ಕೆ ತನ್ನ ಮತ್ತೊಬ್ಬ ಅಭ್ಯರ್ಥಿಯನ್ನು ನಿಲ್ಲಿಸುವ ಮೂಲಕ ಜೆಡಿಎಸ್ ಸೋಲಲು, ಬಿಜೆಪಿ ಗೆಲ್ಲಲು ಅವಕಾಶವನ್ನು ಮಾಡಿಕೊಡಲಾಯಿತು. ಇದರಲ್ಲಿ ಕಾಂಗ್ರೆಸ್ ನಾಯಕರು ಅದರಲ್ಲೂ ಸಿದ್ದರಾಮಯ್ಯನವರು ಬಿಜೆಪಿ ನಾಯಕರೊಂದಿಗೆ 'ಡೀಲ್' ಮಾಡಿಕೊಂಡಿದ್ದಾರೆ ಎಂಬ ಅತ್ಯಂತ ಗಂಭೀರ ಆರೋಪ ಕೇಳಿ ಬಂತು. ಇದನ್ನು ಸಮರ್ಥಿಸುವಂತೆ ಸಿದ್ದರಾಮಯ್ಯ ಮತ್ತು ಬಿ.ಎಸ್. ಯಡಿಯೂರಪ್ಪ ನವರು ವಿಮಾನ ನಿಲ್ದಾಣದಲ್ಲಿ ಮಾತುಕತೆ ನಡೆಸಿ ಒಳ ಒಪ್ಪಂದ ಮಾಡಿಕೊಂಡಿದ್ದಾರೆ ಎಂಬ ಮಾಹಿತಿಗಳು ಪ್ರಕಟವಾಗಿವೆ. ಒಳ ಸಖ್ಯತೆಯ ಕಾರಣದಲ್ಲಿ ಬಿಜೆಪಿ ಮೇಲುಗೈ ಸಾಧಿಸಲು ಸಿದ್ದರಾಮಯ್ಯನವರು ಅನುಕೂಲ ಮಾಡಿಕೊಟ್ಟಿದ್ದು ಎಷ್ಟು ಸರಿ ಮತ್ತು ಕೋಮುವಾದವನ್ನು ವಿರೋಧಿಸುವ ಅವರ ರಾಜಕಾರಣಕ್ಕೆ ನಿಜವಾಗಲೂ ಏನಾದರೂ ಅರ್ಥವಿದೆಯೇ? ಮಾತು ಮತ್ತು ಕೃತಿಗಳಲ್ಲಿ ಸಾಮ್ಯತೆ ಇಲ್ಲದ ಅವರ ನಡೆ ಪ್ರಶ್ನಾರ್ಹ. ಇದಕ್ಕೆ ಜೆ.ಡಿ.ಎಸ್ ನಾಯಕರ ಮೇಲಿನ ಸೇಡು ಕಾರಣವಾಯಿತೇ ಅಥವಾ ನೆಪವಾಯಿತೇ? ಎಂಬಂತಹ ಪ್ರಶ್ನೆಗಳು ಬಂದಿವೆ.

ಈ ವಿಧಾನ ಸಭಾ ಚುನಾವಣೆ ಬಳಿಕ ಕೋಮುವಾದೀ ಬಿಜೆಪಿಯನ್ನು ಶತಾಯಗತಾಯ ಅಧಿಕಾರದಿಂದ ದೂರ ಇಡಬೇಕೆಂದು ಏರ್ಪಟ್ಟ ಜೆ.ಡಿ.ಎಸ್. ಮತ್ತು ಕಾಂಗ್ರೆಸ್ ಪಕ್ಷಗಳ ಮೈತ್ರಿಕೂಟದ ಸರಕಾರ ಕಿತ್ತಾಟ, ಎಳೆದಾಟದಲ್ಲಿ ಪತನವಾಯಿತು. ಮತ್ತು ಬಿಜೆಪಿ ಹೇಗೆಲ್ಲಾ ಕುತಂತ್ರ ಹೂಡಿ ಅಧಿಕಾರ ಹಿಡಿಯಿತು? ಈ ನಾಟಕಕ್ಕೆ ಇಂಬು ಒದಗಿಸುವಲ್ಲಿ ಸಿದ್ದರಾಮಯ್ಯನವರ ಪಾತ್ರ ಏನಿತ್ತು ಎನ್ನುವುದನ್ನೂ ನೆನಪಿಸಿಕೊಳ್ಳಲಾಗುತ್ತಿದೆ. ಅಂದು ಮುಂಬೈನಲ್ಲಿಯ ಬಿಜೆಪಿಯ 'ರೆಸಾರ್ಟ್' ಸೇರಿದ್ದ 18 ಜನ ಸಚಿವಾಕಾಂಕ್ಷಿ ಅತೃಪ್ತರಲ್ಲಿ ಬಹುತೇಕರು ಸಿದ್ದರಾಮಯ್ಯನವರ ಬಣದವರು, ಅತಿ ಆಪ್ತರು ಎನ್ನುವುದು ಗಮನಾರ್ಹ.



ಅಧಿಕಾರದಾಹಿಗಳ ಒಳ ಬಂಡಾಯ ಹೆಚ್.ಡಿ. ಕುಮಾರಸ್ವಾಮಿ ನೇತೃತ್ವದ ಸಮಿಶ್ರ ಸರಕಾರವನ್ನು ಉರುಳಿಸಿ ಕೋಮುವಾದಿ ಫ್ಯಾಶಿಸ್ಟರು ಅಧಿಕಾರ ಹಿಡಿಯುವುದಕ್ಕೆ ಅವಕಾಶ ಮಾಡಿಕೊಟ್ಟಿತು. ಆಗ ತನ್ನ ಕೈ ಮೀರಿದೆ ಎಂದು ಸಿದ್ದರಾಮಯ್ಯನವರೂ ಕೈ ಚೆಲ್ಲಿದರು. ವಿರೋಧ ಪಕ್ಷದ ನಾಯಕನಾಗಿ ಪ್ರತಿಷ್ಠಾಪಿತವಾಗಿ ರಾಜ್ಯದ ರಾಜಕಾರಣದಲ್ಲಿ ಶಕ್ತಿ ರಾಜಕಾರಣದ ಒಂದು ಮುಖ್ಯ ಕೇಂದ್ರ ಬಿಂದುವಾಗಲು ಅವರು ಬಯಸಿದರೇ ಎನ್ನುವುದು ಮುಚ್ಚಿಡಲಾಗದ ಜೀವಂತ ಪ್ರಶ್ನೆ! ಬಿಜೆಪಿ ಆಡಳಿತದಲ್ಲಿ ಕರ್ನಾಟಕದ ವರ್ತಮಾನದ ವಿಧ್ವಂಸಕ ವಿದ್ಯಾಮಾನಗಳನ್ನು ಅವಲೋಕಿಸಿದರೆ ಸರಕಾರ ಉರುಳಲು, ಹೊಸ ಸರಕಾರ ಬರಲು ಅಂದು ಸೃಷ್ಟಿಗೊಂಡ ಕಾರಣಗಳು ಏನೇ ಇರಲಿ, ಆದ ಪ್ರಮಾದ ಅಕ್ಷಮ್ಯವೂ ಆಗಿದೆ. ಇದರ ಹೊಣೆಗಾರಿಕೆ ಕಾಂಗ್ರೆಸ್ ಮತ್ತು ಜೆಡಿಎಸ್ ಪಕ್ಷಗಳ ಇಬ್ಬರ ಮೇಲೆ ಇದೆ ಎನ್ನುವುದು ನಿಜ. ಆದರೆ ಅತ್ಯಂತ ಗಟ್ಟಿ ದನಿಯಲ್ಲಿ ಕೋಮುವಾದಿಗಳನ್ನು, ಫ್ಯಾಶಿಸ್ಟ್ ಸಂಘಪರಿವಾರದ ಜನ್ಮ ಜಾಲಾಡುವ ಸಿದ್ದರಾಮಯ್ಯನವರು ಕೆಲವು ನಿರ್ಣಾಯಕ ಸಂದರ್ಭಗಳಲ್ಲಿ ಅವೇ ಶಕ್ತಿಗಳ ಬೆಳವಣಿಗೆಗೆ ಮೆಟ್ಟಿಲಾಗುವುದು ಅಪಾಯಕರ. ಇಂತಹ ಆಟಗಳು 'ಸೆಕ್ಯುಲರ್' ಸಮಾಜವಾದಿ ಸಿದ್ದರಾಮಯ್ಯ ನವರನ್ನು ನಾಯಕ ಸ್ಥಾನದಿಂದ ನಿಧಾನವಾಗಿಯಾದರೂ ಖಳ ನಾಯಕನ ಸ್ಥಾನಕ್ಕೆ ತಳ್ಳಬಲ್ಲದು. ಜನಸಾಮಾನ್ಯರ ಪ್ರಜ್ಞೆ, ಸಂವೇದನೆಗಳನ್ನು, ಪ್ರತಿಕ್ರಿಯೆಗಳನ್ನು ನಾಯಕರಾದವರು ಅಷ್ಟು ಲಘುವಾಗಿ ಪರಿಗಣಿಸಬಾರದು. ಕಾಂಗ್ರೆಸ್ ಪಕ್ಷದಲ್ಲಿನ ಧ್ವಂದಗಳು, ಸ್ವಾರ್ಥ ರಾಜಕಾರಣ, ಅಧಿಕಾರದ ಅಡ್ಡ ಹಾದಿಗಳು ಕೋಮುವಾದದ ವಿರುದ್ಧದ ಹೋರಾಟವನ್ನು ದುರ್ಬಲಗೊಳಿಸುತ್ತವೆ. ಮತ್ತು ಅತಿ ದೀರ್ಘ, ಘೋರ ಪರಿಣಾಮಗಳನ್ನು ಉಂಟು ಮಾಡುತ್ತವೆ ಎನ್ನುವುದನ್ನು ಅವರು ನೆನಪಿಡಬೇಕು.

ಆದ್ದರಿಂದ ಸಿದ್ದರಾಮಯ್ಯನವರಿಗೆ ಕಿವಿ ಹಿಂಡಿ ಕಿವಿ ಮಾತು ಹೇಳಬೇಕಾದ ಜರೂರು ಇದೆ. ಸಿದ್ದರಾಮಯ್ಯನವರ ನುಡಿ– ನಡೆಗಳು ಕಾಂಗ್ರೆಸ್ ರಾಜಕಾರಣದ ಭಾಗ, ಆಂತರಿಕ ವಿಷಯಗಳು ಎನ್ನುವುದನ್ನು ಗಮನದಲ್ಲಿರಿಸಿಯೇ ಅವರ ಜನ ಕಾಳಜಿಯನ್ನು ಲಕ್ಷಿಸಿ ರಾಜ್ಯ ರಾಜಕಾರಣದ ಹಿತದೃಷ್ಟಿಯಲ್ಲಿ ಹೇಳಬೇಕಾಗಿದೆ.

ಕಾಂಗ್ರೆಸ್ ಪಕ್ಷ ಈಗಲೂ ಬಿಜೆಪಿ ಎದುರಿಸಲು ಮೂರನೆಯ ಪರ್ಯಾಯ ಅಥವಾ ಅಂತಹ ಶಕ್ತಿಗಳೊಡನೆ ಸಹಯೋಗ ಹೊಂದಿದ,

ಪುಟ 4 ಕ್ಕೆ

ಬೆಂಗಳೂರಿನಲ್ಲಿ ಮಳೆಯ ಅನಾಹುತ: ಸಂತ್ರಸ್ತರಿಗೆ ಪರಿಹಾರಕ್ಕಾಗಿ ಸಿಪಿಐ(ಎಂ) ಒತ್ತಾಯ

ಕಳೆದ ತಿಂಗಳು ಬೆಂಗಳೂರಿನಲ್ಲಿ ಸುರಿದ ಮಳೆಯಿಂದ ಉಂಟಾದ ಅನಾಹುತಗಳ ನಂತರವು ಸರಿಯಾದ ಮುಂಜಾಗ್ರತಾ ಕ್ರಮಗಳನ್ನು ಕೈಗೊಳ್ಳದ ರಾಜ್ಯ ಬಿಜೆಪಿ ಸರ್ಕಾರ ಮತ್ತು ಬಿಬಿಎಂಪಿಯ ದುರಾಡಳಿತದಿಂದ 2–3 ದಿನ ಬೆಂಗಳೂರಿನಲ್ಲಿ ಸುರಿದ ಮಳೆ ಅಬ್ಬರಕ್ಕೆ ರಾಜಕಾಲುವೆಯಲ್ಲಿ ಯವಕ ಕೊಚ್ಚಿಹೊಗಿದ್ದರೆ, ಒಬ್ಬ ಮಹಿಳೆ ಬಲಿಪಡೆದಿದೆ, ಹಲವು ಪ್ರದೇಶಗಳು ಜಲಾವೃತಗೊಂಡು ಮನೆಗಳು, ವಾಹನಗಳು ಹಾನಿಗೀಡಾಗುವಂತೆ ಮಾಡಿದೆ ಎಂದು ಸಿಪಿಐ(ಎಂ) ಬೆಂಗಳೂರು ಜಿಲ್ಲಾ ಸಮಿತಿಗಳು ಆರೋಪಿಸಿವೆ.

ಬೆಂಗಳೂರಿನ ಕೆರೆಗಳ, ರಾಜಕಾಲುವೆಗಳ ಒತ್ತುವರಿ ತೆರೆವು ಮಾಡದ, ರಸ್ತೆ ಗುಂಡಿ ಮುಚ್ಚದ ಪರಿಣಾಮ, ಸಮರ್ಪಕವಲ್ಲದ ಒಳ ಚರಂಡಿ ವ್ಯವಸ್ಥೆಯಿಂದ ಮಳೆ ನೀರು ರಸ್ತೆಗಳ ಮೇಲೆ ಹರಿದು ಮನೆಗಳಿಗೆ ನುಗ್ಗಿದೆ, ಹಲವು ಪ್ರದೇಶಗಳು ಈಜುಕೊಳಗಂತಾಗಿದೆ.

ಮುಖ್ಯಮಂತ್ರಿ ನಗರೋತ್ಥಾನ ಯೋಜನೆಯಡಿ ಮೂಲಭೂತ ಸೌಕರ್ಯಗಳಿಗಾಗಿ ಸಾವಿರಾರು ಕೋಟಿ ನೀಡಲಾಗಿದ್ದರೂ ಅದೂ ದುರ್ಬಳಕೆ ಆಗುತ್ತಿದೆ. ಸ್ಮಾರ್ಟ್ ಸಿಟಿ ಯೋಜನೆಯಡಿ ಕೇಂದ್ರ ಸರ್ಕಾರದಿಂದ ಅನುದಾನ ಎಲ್ಲಿ, ಯಾವುದಕ್ಕೆ ಬಳಕೆಯಾಗುತ್ತಿದೆ ಎಂಬ ಬಗ್ಗೆ ಸಾರ್ವಜನಿಕರಿಗೆ ಮಾಹಿತಿ ಇಲ್ಲ. ಹೀಗಾಗಿ ಇದೂ ದುರ್ಬಳಕೆ ಆಗಿರುವ ಸಾಧ್ಯತೆ ಇದೆ. ಬಿಬಿಎಂಪಿ ಯಿಂದ ಈ ಕಾಮಗಾರಿಗಳಿಗೆ ಅನುದಾನ ಮಂಜೂರಾಗಿದ್ದರೂ ಕೆಲಸಗಳು ಆಗಿಲ್ಲ. ಆ ಹಣವಲ್ಲ ರಾಜಕಾರಣಿಗಳ, ಭ್ರಷ್ಟ ಅಧಿಕಾರಿಗಳ ಜೋಬು ತುಂಬಿದೆ ಎಂದು ಸಿಪಿಐ(ಎಂ) ಆರೋಪಿಸಿದೆ.

ಹಾಗಾಗಿ ಕೂಡಲೇ ರಾಜ್ಯ ಬಿಜೆಪಿ ಸರ್ಕಾರ ಮತ್ತು ಬಿಬಿಎಂಪಿ ಆಡಳಿತ ಮಳೆಯಿಂದ ಮೃತರಾದ ಕುಟುಂಬಕ್ಕೆ ತಲಾ 25 ಲಕ್ಷ ಪರಿಹಾರ, ಅವರ ಮಕ್ಕಳು ಮತ್ತು ಅವಲಂಬಿತರಿಗೆ ವಿದ್ಯಾಭ್ಯಾಸ, ಉದ್ಯೋಗ ನೀಡಬೇಕು, ಮಳೆ ಸಂತ್ರಸ್ತರಿಗೆ ಪರಿಹಾರ ಒದಗಿಸಬೇಕು, ಕೆರೆ, ರಾಜಕಾಲುವೆ ಒತ್ತುವರಿ ತೆರೆವುಗೊಳಿಸಲು, ರಸ್ತೆ ಗುಂಡಿಗಳನ್ನು ಮುಚ್ಚಲು ಕ್ರಮಗಳನ್ನು ಕೈಗೊಳ್ಳಬೇಕೆಂದು ಸಿಪಿಐ(ಎಂ) ಬೆಂಗಳೂರು ಉತ್ತರ ಮತ್ತು ದಕ್ಷಿಣ ಜಿಲ್ಲಾ ಸಮಿತಿಗಳು ಒತ್ತಾಯಿಸಿವೆ.





ಪ್ರಧಾನಿ ಮೋದಿ ಮೈಸೂರು ಭೇಟಿ ಖಂಡಿಸಿ ಎಡಪಕ್ಷಗಳು– ದಲಿತ–ಪ್ರಗತಿಪರ ಸಂಘಟನೆಗಳ ಪ್ರತಿಭಟನೆ

ಪ್ರಧಾನಿ ನರೇಂದ್ರ ಮೋದಿ ಯಾವ ಭರವಸೆಗಳನ್ನು ಈಡೇರಿಸದೆ ಮೈಸೂರಿಗೆ ಭೇಟಿ ನೀಡುತ್ತಿರುವುದನ್ನು ಖಂಡಿಸಿ ಜೂನ್ 19 ರಂದು ಎಡಪಕ್ಷಗಳು, ದಲಿತ, ರೈತ, ಪ್ರಗತಿಪರ ಸಂಘಟನೆಗಳು ಜಂಟಿಯಾಗಿ ಪ್ರತಿಭಟನೆ ನಡೆಸಿದರು.

ಮೈಸೂರನ್ನು ಪ್ಯಾರಿಸ್ ಮಾಡುವುದಾಗಿ ಪ್ರಸ್ತಾಪಿಸಿದ ಪ್ರಧಾನಿ ನರೇಂದ್ರ ಮೋದಿ ಅಧಿಕಾರಕ್ಕೆ ಏರೀ 8 ವರ್ಷಗಳಾಗಿವೆ. ಸಾಂಸ್ಕೃತಿಕ ನಗರಗೆ ಯಾವ ಕೊಡುಗೆಗಳನ್ನು ನೀಡದೇ ಮತ್ತೊಮ್ಮೆ ಎರಡು ದಿನಗಳ ಪ್ರವಾಸ ಕೈಗೊಂಡಿದ್ದಾರೆ. ಅವರು, ಸಾಂಸ್ಕೃತಿಕ ನಗರಿಯನ್ನು ಪ್ಯಾರಿಸ್ ಮಾದರಿಯ ನಗರ ಮಾಡುವ ನಿಟ್ಟಿನಲ್ಲಿ ಎಷ್ಟು ಹಣ ನೀಡಿದ್ದಾರೆ, ಯಾವ ಯೋಜನೆಗಳನ್ನು ರೂಪಿಸಿದರು ಎಂದು ಪ್ರಕಟಿಸಬೇಕು ಎಂದು ಪ್ರತಿಭಟನಾಕಾರರು ಆಗ್ರಹಿಸಿದರು.

ಶಾಂತಿಯುತವಾಗಿ ಪ್ರತಿಭಟನೆ ಮಾಡುತ್ತಿದ್ದವರನ್ನು ಪೊಲೀಸರು ಬಂಧಿಸಿದರು. ಪ್ರತಿಭಟನೆಯಲ್ಲಿ ಸಿಪಿಐ(ಎಂ), ಸಿಪಿಐ, ಎಸ್‌ಯುಸಿಐ(ಸಿ) ಪಕ್ಷ ಹಾಗೂ ದಲಿತ, ರೈತ, ಪ್ರಗತಿಪರ ಸಂಘಟನೆಗಳ ಕಾರ್ಯಕರ್ತರ ಭಾಗವಹಿಸಿದ್ದರು.



ಕಿವಿ ಹಿಂಡ ಬೇಕಾದ ಸಿದ್ಧರಾಮಯ್ಯನವರ ನಡೆಗಳು...... ಪುಟ 3 ರಿಂದ

ಹೊಂದುವ ಪ್ರಸಂಗಗಳು ಇವೆಯಾದರೂ ಮೂಲತಃ ಅದು ಅಧಿಕಾರದ ಏಕಸ್ವಾಮ್ಯದ ಭ್ರಮಾಧೀನ ಮನೋಭಾವದಿಂದ ಹೊರತಾಗಿಲ್ಲ. ಇತರೆ ಸೆಕ್ಯುಲರ್– ಪ್ರಾದೇಶಿಕ ರಾಜಕೀಯ ಶಕ್ತಿಗಳ ಅಸ್ತಿತ್ವ ಹಾಗೂ ಅವುಗಳ ಮೂಲಕ ಜನತೆಯ ಒತ್ತಾಸೆಗಳನ್ನು ಮಾನ್ಯ ಮಾಡುವುದಿರಲಿ ಅವೇ ತನ್ನ ಬೆಳವಣಿಗೆಗೆ ಅಡ್ಡಿಯೆಂದೂ, ತನ್ನ ಶತೃವೆಂದೇ ಭಾವಿಸಿ ಅದರ ನಾಶಕ್ಕೂ ಯತ್ನಿಸುವ ಉದಾಹರಣೆಗಳಿಗೂ ಕಡಿಮೆ ಇಲ್ಲ. ಆದರೆ ಬಿಜೆಪಿ ಮತ್ತು ಕಾಂಗ್ರೆಸ್ ಪಕ್ಷಗಳ ನೀತಿಗಳನ್ನು ಧಿಕ್ಕರಿಸಿ ಪರ್ಯಾಯ ಕಂಡುಕೊಳ್ಳುವ ಜನರ ರಾಜಕೀಯ ವಾಸ್ತವವನ್ನೂ ಕಾಂಗ್ರೆಸ್ ಪರಿಗಣಿಸುವುದಿಲ್ಲ. ಪರಿಗಣಿಸಿದರೂ ಅದೊಂದು ತಾತ್ಕಾಲಿಕ ಅಧಿಕಾರದ ತಂತ್ರವನ್ನಾಗಿ ಮಾತ್ರ ನೋಡುತ್ತದೆ.

ಸೈದ್ಧಾಂತಿಕವಾಗಿ,ರಾಜಕೀಯ,ಆಡಳಿತಾತ್ಮಕವಾಗಿ ಕಾಂಗ್ರೆಸ್ ದುರ್ಬಲಗೊಳ್ಳುತ್ತಿರುವ ಪರಿಸ್ಥಿತಿಯೂ ಕೆಲವು ಜನಪ್ರಿಯ ನಾಯಕರ ಹುಚ್ಚಾಟಗಳಿಗೆ ಇಂಬು ಕೊಡುವ ಸನ್ನಿವೇಶವನ್ನೂ ಕಡೆಗಣಿಸುವಂತಿಲ್ಲ. ಅದನ್ನು ತಡೆದು ಕೋಮುವಾದಿಗಳನ್ನು ಹಿಮ್ಮೆಟ್ಟಿಸುವ ಕರ್ತವ್ಯ ನಾಯಕರು ಮತ್ತು ಆ ಪಕ್ಷದ ಒಳಗೆ ಮೂಡಬೇಕಾದ ವಿವೇಕ ಮತ್ತು ಎಚ್ಚರವೂ ಆಗಿದೆ.

ಆರ್ಥಿಕ ದುಸ್ಥಿತಿಗೆ ಕಾರಣವಾಗುವ ಕಾರ್ಪೋರೇಟ್ ಲೂಟಿಕೋರತನದಿಂದ ಮತ್ತು ಒಡೆದಾಳುವ ಕೋಮುವಾದಿ ದಾಳಿ ದೌರ್ಜನ್ಯಗಳಿಂದ ರಾಜ್ಯ ನಲುಗಿ ಹೋಗಿರುವಾಗ ಸಿದ್ಧರಾಮಯ್ಯನಂತಹವರು ಜವಾಬ್ಧಾರಿ ನಡೆ ಇಡುವುದು ಜನತೆಗೆ ಧೈರ್ಯವನ್ನು, ಬಲವನ್ನು ತುಂಬುವಂತಹದಾಗುತ್ತದೆ. ರಾಜ್ಯದಲ್ಲಿ ಬಿಜೆಪಿಗೆದುರಾಗಿ ಕಾಂಗ್ರೆಸ್ಸೇತರ ಪರ್ಯಾಯ ದುರ್ಬಲವಾಗಿರುವಾಗ ಇಂತಹ ನಡೆ ಜನ ಹಿತದ ದೃಷ್ಠಿಯಿಂದ ರಾಜ್ಯದ ಪ್ರಗತಿಪರ ಮನಸ್ಸುಗಳು ಮತ್ತು ಜನತೆ ನಿರೀಕ್ಷಿಸುತ್ತಿದ್ದಾರೆ ಎಂಬುದನ್ನು ಮರೆಯಬಾರದು.

ಕೊಡಗು ಕಟ್ಟಡ ಕಾರ್ಮಿಕರ ಸಮಾವೇಶ ನೂತನ ನಾಯಕತ್ವ



ಕೊಡಗು ಜಿಲ್ಲೆಯ ವಿರಾಜಪೇಟೆಯಲ್ಲಿ ನಡೆದ ಕಟ್ಟಡ ಕಾರ್ಮಿಕ ಸಂಘಟನೆಯ ಸಮ್ಮೇಳನವನ್ನು ಕಾ. ಬಾಲಕೃಷ್ಣ ಶೆಟ್ಟಿ ಉದ್ಘಾಟಿಸಿದರು.

ಸಂಘದ ಗೌರವ ಅಧ್ಯಕ್ಷರಾದ ಕಾ. ಪ್ರಮೋದ್ ರವರು ಸಮ್ಮೇಳನದ ಅಧ್ಯಕ್ಷತೆ ವಹಿಸಿದ್ದರು.

22 ಸದಸ್ಯರ ಹೊಸ ಸಮಿತಿಯನ್ನು ಸರ್ವಾನುಮತದಿಂದ ಆಯ್ಕೆಯಾಗಿದ್ದು, ಅಧ್ಯಕ್ಷರಾಗಿ ಎ.ಸಿ. ಸಾಬು, ಕಾರ್ಯದರ್ಶಿ ಯಾಗಿ ರತೀಶ್, ಖಜಾಂಚಿಯಾಗಿ ಹಮೀದ್ ಆಯ್ಕೆಯಾದರು.


ಪುರಸಭಾ ಭವನದಲ್ಲಿ ಕಿಕ್ಕಿರಿದು ಭಾಗವಹಿಸಿದ ಪ್ರತಿನಿಧಿಗಳು

ಸೌಹಾರ್ದತೆ ಇಲ್ಲದ ಸಮಾಜ ಅವನತ್ತಿಯತ್ತ

ಕೊಡಗು ಸೌಹಾರ್ದ ಸಮಾವೇಶದಲ್ಲಿ ಆತಂಕ

ಭಾರತ ಪ್ರಜಾಸತ್ತಾತ್ಮಕ ಯುವಜನ ಫೆಡರೇಷನ್ನಿನ ಜಿಲ್ಲಾ ಸಂಘಟನಾ ಸಮಿತಿಯ ನೇತೃತ್ವದಲ್ಲಿ ಸೌಹಾರ್ದ ಸಮಾವೇಶ ವಿರಾಜಪೇಟೆ ಉಡುಪಿ ಹೋಟೆಲ್ ಸಭಾಂಗಣದಲ್ಲಿ 19 ಜೂನ್ 2022 ರ ಭಾನುವಾರ ಡಿವೈಎಫ್ಐ ನ ಜಿಲ್ಲಾ ಸಂಚಾಲಕರಾದ ಶ್ರೀ ರಾಚಪ್ಪಾಜಿ ಆನಂದಪುರ ರವರ ಅಧ್ಯಕ್ಷತೆಯಲ್ಲಿ ನಡೆಯಿತು.

ಈ ಸೌಹಾರ್ದ ಕೂಟಕ್ಕೆ ಜನಶಕ್ತಿ ವಾರ ಪತ್ರಿಕೆಯ ಕಾರ್ಯನಿರ್ವಾಹಕ ಸಂಪಾದಕರಾದ ಡಾ. ಎಸ್ ವೈ ಗುರುಶಾಂತ್ ರವರು ಆಗಮಿಸಿ 'ದೇಶದ ಯುವ ಜನರು ದೇಶದ ಅಭಿವೃದ್ಧಿಯ ಬಗ್ಗೆ ಚಿಂತಿಸುವಂತೆ ಆಗಬೇಕು. ಉದ್ಯೋಗ ಅಭಿವೃದ್ಧಿಯ ಬಗ್ಗೆ ಮಾತನಾಡಲು ಆರಂಭಿಸುವಾಗ ಸೌಹಾರ್ದತೆಗೆ ಧಕ್ಕೆ ಉಂಟಾಗುವುದಿಲ್ಲ, ಸೌಹಾರ್ದತೆಯಿಂದ ಬದುಕಿ ಬಾಳುತ್ತಿದ್ದ ಒಂದು ಜನತೆಯನ್ನು ಜಾತಿ ಧರ್ಮ ಕೋಮುಗಳ ವ್ಯತ್ಯಾಸಕ್ಕೆ ತಳ್ಳಿ ಪರಸ್ಪರ ಕಚ್ಚಾಡುವಂತೆ ಮಾಡಿದೆ, ತಮ್ಮ ಸೋಲುಗಳನ್ನು ಮುಚ್ಚಿಕೊಳ್ಳಲು ಯುವಜನತೆ ಇವುಗಳ ಬಗ್ಗೆ ಪ್ರಶ್ನಿಸಿದಂತೆ ಮಾಡಲು ಈ ಸಂದರ್ಭವನ್ನು ಆಳುವ ಶಕ್ತಿಗಳು ಬಳಸುತ್ತಿದೆ. ನಿರುದ್ಯೋಗದ ಬೇಗೆಯಲ್ಲಿ ಬೇಯುತ್ತಿರುವ ಯುವಜನರು ಒಗ್ಗಟ್ಟಾಗಿ ದೇಶದ ಸಮಗ್ರತೆ ಮತ್ತು ಐಕ್ಯತೆಗೆ ಬೇಕಾಗಿ, ಅಭಿವೃದ್ಧಿಗೆ ಪೂರಕವಾಗಿ ಸಂಘಟಿತರಾಗಬೇಕು' ಎಂದು ಕರೆಕೊಟ್ಟರು.



ಮಾತನಾಡುತ್ತಿರುವ ನೆರವಂಡ ರಮೇಶ್‌ರವರು

ನಮ್ಮನಾಡಿನ ಸೌಹಾರ್ದ ಸಂಸ್ಕೃತಿಯನ್ನು ವಿವರಿಸಿ ಅದನ್ನು ಬಲಗೊಳಿಸಬೇಕೆಂದರು.

ಮುಖ್ಯ ಅತಿಥಿಗಳಾಗಿ ಆಗಮಿಸಿದ ಚಿತ್ರನಟರು ಸಾಮಾಜಿಕ ಕಾರ್ಯಕರ್ತರೂ ಆದ ನೆರವಂಡ ಉಮೇಶ್ ರವರು ಮಾತನಾಡುತ್ತಾ ಸುಂದರವಾದ ಪರಿಸರದಲ್ಲಿ ಸಹಬಾಳ್ವೆ ನಡೆಸುತ್ತಿದ್ದ ಜನರ ಮಧ್ಯಕ್ಕೆ ಜಾತಿ ಧರ್ಮದ ವೈಷಮ್ಯವನ್ನು ತಂದು ಹಾಕಿ ಶತ್ರುತ್ವವನ್ನು ಬೆಳೆಸಲಾಗುತ್ತಿದೆ. ಇದನ್ನು ಮೆಟ್ಟಿನಿಲ್ಲಲು ಪ್ರಜಾಸತ್ತಾತ್ಮಕ ಯುವಜನ ಚಳುವಳಿ ಅಗತ್ಯ. ಡಿ.ವೈ.ಎಫ್.ಐ. ನಂತಹ ಯುವಜನ ಒಕ್ಕೂಟಗಳು ಸದಾ ಜಾಗೃತರಾಗಬೇಕಾಗಿದೆ, ಹಳ್ಳಿ ಹಳ್ಳಿಗಳಿಗೂ ಬೇರೆ ಬೇರೆ ಹೆಸರುಗಳಲ್ಲಿ ನುಗ್ಗಿ ಜಾತಿ ವೈಶಮ್ಯದ ಬೀಜ ಬಿತ್ತುತ್ತಿರುವ ಶಕ್ತಿಗಳನ್ನು ತಡೆಗಟ್ಟಲು ಎಲ್ಲರೂ ಪ್ರಯತ್ನಿಸಬೇಕಾಗಿದೆ. ಹಿಂಸೆಗೆ ಪ್ರತಿಹಿಂಸೆ ಪರಿಹಾರವಲ್ಲ, ಪ್ರಚೋದನಗಳಿಗೆ ಯಾರೂ ಒಳಪಡದೆ ಸಹಬಾಳ್ವೆಯನ್ನು ನಡೆಸಲು ನಾವೆಲ್ಲರೂ ಜೊತೆ ಸೇರುವ' ಎಂದು ಕರೆ ನೀಡಿದರು.

ಸಮ್ಮಿಲನದಲ್ಲಿ ಭಾಗವಹಿಸಿದ ದಲಿತ ಸಂಘರ್ಷ ಸಮಿತಿಯ ಕಾರ್ಯಕರ್ತರಾದ ಶ್ರೀ ಸತೀಶ್ ರವರು ಮಾತನಾಡುತ್ತಾ ಜಾತಿ ಧರ್ಮ ದ್ವೇಶಕ್ಕೆ ಕೂಲಿಯಾಳುಗಳಾಗಿ ಬರುವ ನಮ್ಮ ಯುವಕರು ತಮ್ಮ ಅಸ್ತಿತ್ವವನ್ನೇ ಕಳೆದುಕೊಳ್ಳುತ್ತಿದ್ದಾರೆ. ಸೌಹಾರ್ದತೆಯನ್ನು ಕದಡುವ ಶಕ್ತಿಗಳು ಬಡ ನಿರುದ್ಯೋಗಿ ಯುವಕರನ್ನು ತಮ್ಮ ಆಯುಧಗಳನ್ನಾಗಿ ಬಳಸುತ್ತಿದ್ದಾರೆ. ಈ ಕುರಿತು ಎಲ್ಲಾ ಯುವಜನರು ಎಚ್ಚರ ವಹಿಸಬೇಕೆಂದು ತಿಳಿ ಹೇಳಿದರು. ಮತ್ತೊಬ್ಬ ಅತಿಥಿಯಾಗಿ ಬಂದಿದ್ದ ವಕೀಲ ಶ್ರೀ ಕೆವಿ ಸುನಿಲ್ ರವರು ಮಾತನಾಡುತ್ತಾ ಎಲ್ಲಾ ಸಂಘ ಸಂಸ್ಥೆಗಳು ಒಟ್ಟಾಗಿ ಸೌಹಾರ್ದತೆಗೆ ಬೇಕಾಗಿ ದುಡಿಯಬೇಕೆಂದು ಕರೆನೀಡಿದರು.

ಕಾರ್ಯಕ್ರಮದ ಸ್ವಾಗತವನ್ನು ವಿರಾಜಪೇಟೆ ಘಟಕದ ಶ್ರೀ ಶಿಜೊಯ್ ವರ್ಗೀಸ್, ವಂದನೆಯನ್ನು ತಿತಿಮತಿಯ ಕುಮಾರಿ ವಿದ್ಯಾ ವೈ ಯು ಮತ್ತು ನಿರೂಪಣೆಯನ್ನು ಡಿವೈಎಫ್ಐ ನ ಸಂಚಾಲಕರಾದ ಶ್ರೀ ಕೆ.ಎಸ್. ಶಾಜಿ ರಮೇಶ್ ರವರು ನೆರವೇರಿಸಿದರು. ಸಮ್ಮಿಲನದಲ್ಲಿ ಸಂಚಾಲನ ಸಮಿತಿಯ ಸದಸ್ಯರಾದ ಶ್ರೀ ಸಾದಿಖ್ ಕುಂಜಿಲ, ಕುಮಾರಿ ಚೈತನ್ಯ ನೆಲ್ಲುಹುದಿಕೇರಿ, ಶ್ರೀ ಶಾಹಿದ್ ಕುಂಜಿಲ, ಶ್ರೀ ನವಾಸ್ ಪೆರುಂಬಾಡಿ, ಶ್ರೀ ಹುಸೈನ್ ವಿರಾಜಪೇಟೆ, ಮತ್ತು ಹಮಾಲಿ ಕಾರ್ಮಿಕರ ವಿರಾಜಪೇಟೆ ಘಟಕದ ಕಾರ್ಯದರ್ಶಿಯಾದ ಶ್ರೀ ಹಾರಿಸ್ ರವರೂ ಭಾಗವಹಿಸಿದರು.



ಸಲಕರಣೆ ಹರಿತಗೊಳಿಸುವ ಪಾವತಿ ಕಡಿತ ವಾಪಾಸು ಪಡೆಯಲು ಆಗ್ರಹ

ಮಹಾತ್ಮ ಗಾಂಧಿ ರಾಷ್ಟ್ರೀಯ ಗ್ರಾಮೀಣ ಉದ್ಯೋಗ ಖಾತ್ರಿ ಯೋಜನೆಯಡಿ ಸಲಕರಣೆ ಹರಿತಕ್ಕಿದ್ದ ಪಾವತಿ ರದ್ದುಗೊಳಿಸಿರುವ ಸುತ್ತೋಲೆ ವಾಪಾಸು ಪಡೆಯಲು ಹಾಗೂ ಕೂಲಿಕಾರರ ಹಕ್ಕೊತ್ತಾಯಗಳನ್ನು ಈಡೇರಿಸಲು ಒತ್ತಾಯಿಸಿ ಮುಖ್ಯಮಂತ್ರಿಗಳಿಗೆ ಕೆಪಿಆರ್‌ಎಸ್, ಎಐಎಡಬ್ಲ್ಯೂಯೂ ಮತ್ತು ಜೆಎಂಎಸ್ ಸಂಘಟನೆಗಳು ಮನವಿಯನ್ನು ಸಲ್ಲಿಸಿವೆ. ಹಕ್ಕೊತ್ತಾಯಗಳು ಈ ಕೆಳಗಿನಂತಿವೆ.

ಸಲಕರಣೆ ಹರಿತಗೊಳಿಸುವ ಪಾವತಿ ಕಡಿತ ವಾಪಾಸು ಪಡೆಯಿರಿ ಕನಿಷ್ಠ 20 ರೂ. ಗಳಿಗೆ ಹೆಚ್ಚಿಸಬೇಕು

ಗ್ರಾಮೀಣಾಭಿವೃದ್ಧಿ, ಆಯುಕ್ತಾಲಯ, ಗ್ರಾಮೀಣಾಭಿವೃದ್ಧಿ ಹಾಗೂ ಪಂಚಾಯತ್ ರಾಜ್ ಇಲಾಖೆಯ ಆಯುಕ್ತರು ಹೊರಡಿಸಿದ ಉಲ್ಲೇಖ– 1 ಪತ್ರವು ಉದ್ಯೋಗ ಖಾತ್ರಿಯಲ್ಲಿ ತೊಡಗಿದ ಗ್ರಾಮೀಣ ಬಡವರು ಉದ್ಯೋಗ ಖಾತ್ರಿ ಕೆಲಸಕ್ಕಾಗಿ ಅವರೇ ತರುವ ಸಲಕರಣೆಗಳ ಹರಿತಕ್ಕಾಗಿ ನಿಗದಿಸಿ ನೀಡುತ್ತಿದ್ದ ಪ್ರತಿ ದಿನದ ತಲಾ ಹತ್ತು ರೂಗಳನ್ನು ವಾಪಾಸು ಪಡೆದಿರುವುದು ತೀವ್ರವಾಗಿ ವಿರೋಧಿಸಿದೆ.

ಬೆಲೆ ಏರಿಕೆಯ ಈ ದಿನಗಳಲ್ಲಿ ಸಲಕರಣೆಯ ಹರಿತಗೊಳಿಸುವಿಕೆಯ ವೆಚ್ಚವು ಏರಿಕೆಯಾಗಿರುವ ಈ ಸಂದರ್ಭದಲ್ಲಿ ಪಾವತಿಸಲಾಗುತ್ತಿದ್ದ 10 ರೂ. ಗಳನ್ನು ಕನಿಷ್ಠ 20 ರೂ. ಗಳಿಗೆ ಹೆಚ್ಚಿಸ ಬೇಕಿರುವಾಗ ಇರುವುದನ್ನು ಇಲ್ಲದಂತೆ ಮಾಡಿರುವುದು ಸರಿಯಲ್ಲ. ತಕ್ಷಣವೇ ಸುತ್ತೋಲೆಯನ್ನು ವಾಪಾಸು ಪಡೆದು ಸಲಕರಣೆಗಳ ಹರಿತಗೊಳಿಸುವಿಕೆಯ ಪಾವತಿಯನ್ನು 20 ರೂ. ಗಳಿಗೆ ಹೆಚ್ಚಿಸಲು ಕ್ರಮವಹಿಸಬೇಕೆಂದು ಆಗ್ರಹಿಸಿದೆ.

ಉದ್ಯೋಗ ಖಾತ್ರಿ ಕೂಲಿಯು ಕೃಷಿರಂಗದ ಕನಿಷ್ಠ ಕೂಲಿಯಂತೆ ಹೆಚ್ಚಿಸಬೇಕು

ಉದ್ಯೋಗ ಖಾತ್ರಿ ಕೂಲಿ ಮೊತ್ತವು ಕರ್ನಾಟಕ ಸರಕಾರ ಕೃಷಿ ರಂಗದಲ್ಲಿನ ಕೂಲಿ ಕೆಲಸದ ವೇತನಕ್ಕಿಂತ ಬಹಳ ಕಡಿಮೆಯದಾಗಿದೆ. ಕೃಷಿ ರಂಗದಲ್ಲಿ ನಿಗದಿಸಿದ 424 ರೂಗಳ ವೇತನವನ್ನು ತಕ್ಷಣದಿಂದ ಜಾರಿಗೆ ಬರುವಂತೆ ಕ್ರಮವಹಿಸಬೇಕು.



ನೂರು ದಿನಗಳ ಉದ್ಯೋಗ ಪಡೆಯಲು ಒಂದೇ ಫಾರಂ– 6 ಸಾಕು. ಉದ್ಯೋಗ ನೀಡದ ದಿನಗಳಿಗೆ ನಿರುದ್ಯೋಗ ಭತ್ಯೆ ಒದಗಿಸಿ:

ಉದ್ಯೋಗ ಖಾತ್ರಿ ಕೆಲಸಕ್ಕಾಗಿ ಸಲ್ಲಿಸಿದ ಫಾರಂ – 6 ಒಮ್ಮೆ ನೀಡಿದರೇ ಅದರ ಮೇಲೆಯೇ ಆದೇಶದಂತೆ ನೂರು ದಿನ ಇಲ್ಲವೇ 150 ದಿನಗಳ ಕೆಲಸವನ್ನು ಕೃಷಿ ರಂಗದಲ್ಲಿನ ತೀವ್ರ ಕೃಷಿ ಕೆಲಸದ ಸಂದರ್ಭವನ್ನು ಹೊರತು ಪಡಿಸಿ ಒದಗಿಸಬೇಕು. 100 ಅಥವಾ 150 ದಿನಗಳಲ್ಲಿ ಒದಗಿಸಲಾಗದ ದಿನಗಳಿಗಳಿಗೆ ನಿರುದ್ಯೋಗ ಭತ್ಯೆಯನ್ನು ಅವರ ಬ್ಯಾಂಕ್ ಖಾತೆಗೆ ಜಮಾ ಮಾಡಬೇಕು.

ಮೇಟಿ ಕೆಲಸಕ್ಕೆ ವೇತನ ನೀಡಿರಿ ಬಾಕಿಹಣ ಬಿಡುಗಡೆ ಮಾಡಿರಿ

ಮೇಟಿಗಳಿಗೆ ಮೇಟಿ ಕೆಲಸಕ್ಕಾಗಿ ವೇತನವನ್ನು ನಿಗದಿಸಿ ಒದಗಿಸಬೇಕು ಮತ್ತು ಅವರ ಬಾಕಿ ಹಣವನ್ನು ಈ ಕೂಡಲೇ ಪಾವತಿಸಬೇಕು. ಅವರಿಗೆ ಮಾಪನದ ಸಾಧನ ಸಲಕರಣೆಗಳನ್ನು ಒದಗಿಸಬೇಕು.

ಮಣ್ಣು ರಸ್ತೆ ನಿರ್ಮಾಣಕ್ಕೆ ಪ್ರತ್ಯೇಕ ಕೂಲಿ ನೀಡಿರಿ. ಟ್ರಾಕ್ಟರ್ ಗಳಿಗೆ ಲೋಡ್ ಮಾಡಲು ಹೆಚ್ಚುವರಿ ಕೂಲಿ ನೀಡಬೇಕು:

ಉದ್ಯೋಗ ಖಾತ್ರಿ ಕೆಲಸಗಾರರಿಂದ ಬಿಟ್ಟಿ ದುಡಿಮೆ ಮಾಡಿಸಿಕೊಳ್ಳುತ್ತಿರುವುದು ಮುಂದುವರೆದಿದೆ ಮತ್ತು ಆ ಕೆಲಸದ ಬಿಲ್ ಗಳು ಭ್ರಷ್ಟಾಚಾರದ ಪಾಲಾಗುತ್ತಿವೆ. ನಿಗದಿತ ಅಳತೆಯಂತೆ ಅವರ ಕೆಲಸವನ್ನು ಮಾಡಬೇಕು ಮತ್ತು ಬಿಟ್ಟಿಯಾಗಿ ಟ್ರಾಕ್ಟರ್ ಗಳಿಗೆ ಮಣ್ಣು ತುಂಬ ಬೇಕು. ಅದೇ ರೀತಿ, ಅಗೆದ ಮಣ್ಣನ್ನು ಮಣ್ಣಿನ ರಸ್ತೆಗೆ ಎತ್ತಿ ಹಾಕಬೇಕು ಎನ್ನ ಲಾಗುತ್ತಿದೆ. ಇವೆರಡು ಮಾಪನದಾಚೆಗಿನ ಹೆಚ್ಚುವರಿ ಶ್ರಮವನ್ನು ಬೇಡುವ ಕೆಲಸಗಳಾಗಿದ್ದು ಅವುಗಳು ಪ್ರತ್ಯೇಕ ಕೆಲಸಗಳೆಂದು ಪರಿಗಣಿಸಿ ಪ್ರತ್ಯೇಕ ಕೂಲಿ ನೀಡಬೇಕು. ಇಲ್ಲಿನ ಭ್ರಷ್ಟಾಚಾರದ ತನಿಖೆಗೆ ಕ್ರಮವಹಿಸಬೇಕು ಎಂದಿವೆ.

ಬೆಂಗಳೂರಿನಲ್ಲಿ ಮಳೆಯ ಅಬ್ಬರ – ಸಂಕಷ್ಟಕ್ಕೆ ಸಿಕ್ಕ ಜನರಿಗೆ ಪರಿಹಾರಕ್ಕಾಗಿ –

ಮಹದೇವ ಪುರ ಬಿಬಿಎಂಪಿ ಜಂಟೀ ಆಯುಕ್ತರ ಕಚೇರಿ ಮುಂದೆ– ಸಿಪಿಎಂ ಪ್ರತಿಭಟನೆ

17 ಜೂನ್ 2022 ರಂದು, ಶುಕ್ರವಾರ–ರಾತ್ರಿ ಇಡೀ ಸುರಿದ ಅಬ್ಬರದ ಮಳೆಯಿಂದ ನೀರಿನ ರಭಸಕ್ಕೆ ಸಿಕ್ಕಿ ಗಾಯಿತ್ರಿ ಲೇಔಟ್ ಬಳಿಯ ರಾಜ ಕಾಲುವೆಯಲ್ಲಿ ಮಿಥಿನ್ ಎಂಬ ಸಿವಿಲ್ ಇಂಜಿನಿಯರಿಂಗ್, ತನ್ನ ಬೈಕ್ ಅನ್ನು ರಾಜ ಕಾಲುವೆ ಬಳಿ ಪಾರ್ಕಿಂಗ್ ಮಾಡಿದ್ದ, ಮಳೆಯ ರಭಸಕ್ಕೆ ಬೈಕ್ ಕಾಲುವೆಯೊಳಗೆ ಬಿದ್ದು ಕೊಚ್ಚಿಕೊಂಡು ಹೋಗುತ್ತಿತ್ತು. ಮಿಥಿನ್ ಬೈಕ್ ಅನ್ನು ಕಾಲುವೆಯಿಂದ ಮೇಲಕ್ಕೆ ಎತ್ತಲು ಕೆಲವರ ಸಹಾಯದೊಂದಿಗೆ, ಕಾಲುವೆಯ ನೀರಿಗೆ ಇಳಿದ, ಮಳೆ ವಿಪರೀತವಾಗಿ ಹರಿಯುವ ನೀರಿನ ರಭಸಕ್ಕೆ ಕೊಚ್ಚಿ ಹೋದ, ವಿಷಯ ತಿಳಿದ ತಕ್ಷಣ ಸಿಪಿಎಂ ನ ಕಾರ್ಯಕರ್ತರು ಸ್ಥಳಕ್ಕೆ ಬೇಟಿ ನೀಡಿ ಪರಿಸ್ಥಿತಿಯನ್ನು ಅರಿತು ಬಿಬಿಎಂಪಿಯ ನಿರ್ಲಕ್ಷ್ಯ ಮತ್ತು ಬಿಜೆಪಿಯ ದುರಾಡಳಿತದ ವಿರುದ್ಧ ಪ್ರತಿಭಟಿಸಿ ಜನರ ಗಮನ ಸೆಳೆಯುವಲ್ಲಿ ಯಶಸ್ವಿಯಾಯಿತು. ಸ್ಥಳಕ್ಕೆ ಆಗಮಿಸಿದ ಎಂಎಲ್‌ಎ ಮತ್ತು ಬಿಬಿಎಂಪಿ ಅಧಿಕಾರಿಗಳನ್ನು ತರಾಟೆಗೆ ತೆಗೆದುಕೊಂಡರು. ಯುವಕನಿಗಾಗಿ ಹುಡುಕಾಟ ಸುರುವಾಯಿತು. ಭಾನುವಾರ ಮೃತದೇಹ ಸಿಕ್ಕಿತು. ಸತ್ತ ಅವರ ಕುಟುಂಬಕ್ಕೆ ರೂ. 25 ಸಾವಿರ ಮತ್ತು ಸತ್ತ ಮಿಥಿನ್ ಕುಟುಂಬದ ಒಬ್ಬರಿಗೆ ಸೂಕ್ತ ಪರಿಹಾರ ಹಾಗೂ ಉದ್ಯೋಗ ನೀಡಬೇಕೆಂದು ಒತ್ತಾಯಿಸಿ 20 ಜೂನ್ 22 ರಂದು ಮಹದೇವಪುರ ಬಿಬಿಎಂಪಿ ಜಂಟೀ ಆಯುಕ್ತರ ಕಚೇರಿ ಮುಂದೆ, ಪ್ರತಿಭಟನೆ ನಡೆಸಿತು.



ನಮ್ಮ ಹೋರಾಟದ ಫಲದಿಂದಾಗಿ, ಪ್ರತಿಭಟನೆಯ ಸ್ಥಳಕ್ಕೆ ಆಯುಕ್ತರ ಪರವಾಗಿ, ಬಂದ ಕಂದಾಯ ಅಧಿಕಾರಿಗಳು, ಅಲ್ಲಿಂದಲೇ, ಅಂದರೆ, ನಿಮ್ಮ ಎದುರಿನಲ್ಲೇ ರೂ.5 ಲಕ್ಷ ಹಣವನ್ನು ಮೃತನ ತಂದೆಯ ಬ್ಯಾಂಕ್ ಅಕೌಂಟ್ ಗೆ ನೆಫ್ಟ್ ಮೂಲಕ ತಕ್ಷಣಕ್ಕೆ ಕಳುಹಿಸಿದ್ದೇವೆ ಎಂದು ಘೋಷಿಸಿದರು.

ಪ್ರತಿಭಟನೆಯಲ್ಲಿ ವಲಯ ಸಮಿತಿಯ ಪ್ರಮುಖರಾದ ಕಾರ್ಯದರ್ಶಿ ಎನ್. ನಾಗರಾಜ್, ಸಿ. ರಮೇಶ್, ಶರಣಪ್ಪ, ಎಂ. ನಂಜೇಗೌಡ, ಗೋಪಾಲಗೌಡ, ಮತ್ತು ಗೌರಮ್ಮ, ಗಾಯಿತ್ರಿ ಭಾಗವಹಿಸಿ, ಮಾತನಾಡಿ ಆಯುಕ್ತರಿಗೆ ಮನವಿಯನ್ನು ನೀಡಿ, ನೊಂದ ನೂರಾರು ಕುಟುಂಬಗಳಿಗೆ ಸೂಕ್ತ ಪರಿಹಾರ ನೀಡಲು ಒತ್ತಾಯಿಸಲಾಯಿತು.

ರಾಜಕಾಲುವೆ ಈ ಹಿಂದೆ, ವಿಸ್ತಾರವಾಗಿತ್ತು. ಅಕ್ಕ ಪಕ್ಕ ಅವೈಜ್ಞಾನಿಕವಾಗಿ ಕಾನೂನು ಉಲಂಘಿಸಿ, ಒತ್ತುವರಿ ಮಾಡಿಕೊಳ್ಳಲು ಬಿಬಿಎಂಪಿ ಅಧಿಕಾರಿಗಳು ಮತ್ತು ಸ್ಥಳೀಯ ಮಾಜಿ ಕಾರ್ಪೋರೇಟುಗಳು ಶಾಮೀಲಾಗಿದ್ದಾರೆ. ಇದಕ್ಕೆ ಅಲ್ಲಿನ ಎಂಎಲ್‌ಎ ಮತ್ತು ಮಂತ್ರಿಗಳ ಬೆಂಬಲವಿದೆ ಎಂದು ಸಿಪಿಎಂ ನಾಯಕರು ತಿಳಿಸಿದರು. ಒತ್ತುವರಿ ಮಾಡಿರುವ ಸರ್ಕಾರಿ ಸ್ಥಳವನ್ನು ತೆರವುಗೊಳಿಸಲು ಸಿಪಿಎಂ ನಾಯಕರು ಆಯುಕ್ತರನ್ನು ಆಗ್ರಹಿಸಿದರು.

ಆ ನಂತರ ಮನವಿ ಪತ್ರವನ್ನು ಸಲ್ಲಿಸಿ ಇಂತಹ ಅನಾಹುತಗಳು ಮುಂದೆ, ಮರುಕಳಿಸದಂತೆ ಸೂಕ್ತ ಕ್ರಮ ತೆಗೆದುಕೊಳ್ಳಬೇಕು ಎಂದು ಮನವಿಯಲ್ಲಿ ಒತ್ತಾಯಿಸಿದೆ.

ಬಿಸಿಯೂಟದಲ್ಲಿ ಮೊಟ್ಟೆ, ಈರುಳ್ಳಿ, ಬೆಳ್ಳುಳ್ಳಿ ವಿವಾದ: ಆಹಾರ ಹಕ್ಕು ನಿಷೇಧದ ಹಿನ್ನೋಟ

ಕಳೆದ ಹಲವು ವರ್ಷಗಳಿಂದ ರಾಜ್ಯದ ಸರಕಾರ ಮತ್ತು ಆಳುವ ಪಕ್ಷಗಳು ರಾಜ್ಯದ ಬಹುಸಂಖ್ಯಾತರ ಆಹಾರ ಹಕ್ಕುಗಳನ್ನು ನಿರ್ಬಂಧಿಸುವ ನಿಷೇಧಿಸುವ ಪ್ರಯತ್ನಗಳನ್ನು ನಡೆಸುತ್ತಿವೆ. ಕಳೆದ ವರ್ಷ ಕಲ್ಯಾಣ ಕರ್ನಾಟಕದಲ್ಲಿ ಬಿಸಿಯೂಟದಲ್ಲಿ ಮೊಟ್ಟೆ ವಿವಾದದ ಸಮಯದಲ್ಲಿ ಅದು ತಾರಕಕ್ಕೇರಿತ್ತು. ಆದರೆ ಬಿಸಿಯೂಟದಲ್ಲಿ ಮೊಟ್ಟೆಯನ್ನು ನಿಲ್ಲಿಸುವ ಪ್ರಯತ್ನ ತೀವ್ರ ಪ್ರತಿರೋಧದಿಂದಾಗಿ ವಿಫಲವಾಗಿತ್ತು. ಮಾತ್ರವಲ್ಲ ಇತ್ತೀಚೆಗೆ ಇನ್ನೂ ನಾಲ್ಕು ಜಿಲ್ಲೆಗಳಿಗೆ ಆ ಯೋಜನೆಯನ್ನು ವಿಸ್ತರಿಸುವ ಶಿಕ್ಷಣ ಇಲಾಖೆಯ ಪ್ರಸ್ತಾವ ಸರಕಾರದ ಮುಂದಿದೆ. ಆದರೆ ಈ ಉತ್ತಮ ಸಾಂಸ್ಕೃತಿಕ, ಪ್ರಜಾಸತ್ತಾತ್ಮಕ, ನಿರ್ಧಾರವು ಇಂದಿನ ಸಂದರ್ಭದಲ್ಲಿ 'ರಾಜಕೀಯಕರಣ'ಕ್ಕೆ ತುತ್ತಾಗತ್ತದೋ ಎಂಬುದನ್ನು ಕಾದು ನೋಡಬೇಕು. ಏಕೆಂದರೆ 2018ರಲ್ಲಿ ಅಧಿಕೃತ ನೀತಿಯನ್ನು ಉಲ್ಲಂಘಿಸಿ 'ಅಕ್ಷಯ ಪಾತ್ರ ಫೌಂಡೇಶನ್' ಈರುಳ್ಳಿ-ಬೆಳ್ಳುಳ್ಳಿ ಕೊಡಲು ನಿರಾಕರಿಸಿದ್ದನ್ನು ವೈಜ್ಞಾನಿಕ ಸಲಹೆಯನ್ನೂ ನಿರ್ಲಕ್ಷಿಸಿ ಸರಕಾರ ಅನುಮೋದಿಸಿತ್ತು. ಜನರ ನಡುವೆ ಜಾತಿ-ಮತ ವಾರು ಬಿರುಕು ಮೂಡಿಸುವ, ಜಾತಿ ವ್ಯವಸ್ಥೆಯನ್ನು ಗಟ್ಟಿ ಮಾಡುವ ಭೀಕರ ಪ್ರಯತ್ನಗಳ ಹಿನ್ನೆಲೆಯಲ್ಲಿ, ಆಹಾರ ಹಕ್ಕು ನಿಷೇಧದ ಪ್ರಯತ್ನ ಮತ್ತು ವೈಜ್ಞಾನಿಕ ಧೋರಣೆ ಆಧಾರಿತ ಸಾರ್ವಜನಿಕ ನೀತಿಗಳ ನಡುವಿನ ಸಂಘರ್ಷದ ಈ ಎರಡು ಪ್ರಕರಣಗಳ ಹಿನ್ನೋಟ ಇಲ್ಲಿದೆ. EPW ವಾರಪತ್ರಿಕೆಯಲ್ಲಿ ಇತ್ತೀಚೆಗೆ ಪ್ರಕಟವಾದ ಲೇಖನದ ಭಾವಾನುವಾದ.

ಮೂಲ: ಸಿದ್ಧಾರ್ಥ ಜೋಶಿ, ಸಿಲ್ವಿಯ ಕರ್ಪಗಂ
ಅನುವಾದ: ಶೃಂಶಾನಾ

ಕೃಪೆ: EPW ಜೂನ್ 4 2022 ಸಂಚಿಕೆ



ಕರ್ನಾಟಕ ಸರ್ಕಾರವು ಸರ್ಕಾರಿ ಶಾಲೆಗಳಲ್ಲಿ ಮೊಟ್ಟೆ ನೀಡಬೇಕು ಎಂದು ನವೆಂಬರ್ 2021ರಲ್ಲಿ ನಿರ್ಧರಿಸಿದಾಗ ಇದನ್ನು ವಿರೋಧಿಸಿದ ನಡೆ ಹೊಸದೇನಲ್ಲ. ಜನವರಿ 2007ರಲ್ಲಿ ಹೆಚ್.ಡಿ. ಕುಮಾರಸ್ವಾಮಿ ನೇತೃತ್ವದ ಜೆಡಿಎಸ್ ಮತ್ತು ಬಿಜೆಪಿ ಸಮ್ಮಿಶ್ರ ಸರ್ಕಾರದ ಅವಧಿಯಲ್ಲಿ ಉತ್ತರ ಕರ್ನಾಟಕ ಜಿಲ್ಲೆಗಳ ಕೆಲವು ಪ್ರದೇಶಗಳ ಸೀಮಿತ ಶಾಲೆಗಳಲ್ಲಿ ಮೊಟ್ಟೆ ನೀಡಬೇಕು ಎಂದು ನಿರ್ಧಾರ ತೆಗೆದುಕೊಂಡಾಗ ಕೆಲವು ಲಿಂಗಾಯತ ಮತ್ತು ಜೈನ ಗುರುಗಳು ವ್ಯಕ್ತಪಡಿಸಿದ ವಿರೋಧದಿಂದಾಗಿ ಈ ಪ್ರಸ್ತಾಪವನ್ನು ಕೈ ಬಿಡಲಾಯಿತು. 2006ರಲ್ಲಿ ಎಲ್ಲಾ ಸರ್ಕಾರಿ ಮತ್ತು ಅನುದಾನಿತ ಶಾಲೆಗಳಲ್ಲಿ ನಡೆಸಿದ ಅಧ್ಯಯನದಲ್ಲಿ 58 ಲಕ್ಷ ನೋಂದಾಯಿತ ವಿದ್ಯಾರ್ಥಿಗಳಲ್ಲಿ ಸುಮಾರು 50 ಲಕ್ಷ ವಿದ್ಯಾರ್ಥಿಗಳು (ಶೇ. 86ಕ್ಕೂ ಮೀರಿ) ಬಿಸಿಯೂಟ ಯೋಜನೆಯಡಿ ಮೊಟ್ಟೆ ಇರಲಿ ಎಂದು ಬಯಸಿದ್ದರು. ಸಮ್ಮಿಶ್ರ ಸರ್ಕಾರದ ಪಾಲುದಾರನಾದ ಬಿಜೆಪಿಯು ಪೋಷಿಸಿದ್ದ ಧಾರ್ಮಿಕ ಗುರುಗಳ ವಿರೋಧದಿಂದಾಗಿ ಈ ಪ್ರಸ್ತಾಪವನ್ನು ಮುಂದಿನ ಶೈಕ್ಷಣಿಕ ವರ್ಷಕ್ಕೆ ಮುಂದೂಡಲಾಯಿತು ಮತ್ತು ನಂತರದಲ್ಲಿ ಸದ್ದಿಲ್ಲದಂತೆ ಇದನ್ನು ಮುಚ್ಚಿ ಹಾಕಲಾಯಿತು.

ನವೆಂಬರ್ 2021ರಲ್ಲಿ ಈಶಾನ್ಯ ಕರ್ನಾಟಕದ ಏಳು ಜಿಲ್ಲೆಗಳಲ್ಲಿ ಮೊಟ್ಟೆ ನೀಡಬೇಕು ಎಂದು ಘೋಷಿಸಿದ್ದ ನಿರ್ಧಾರವನ್ನು ಪ್ರತಿರೋಧದ ನಡುವೆಯೂ ಹಿಂಪಡೆದಿಲ್ಲ. ಈ ಬಾರಿಯ ವಿಶೇಷತೆ ಏನೆಂದರೆ ಲಿಂಗಾಯತ ಮುಖ್ಯಮಂತ್ರಿ ಇರುವ ಬಿಜೆಪಿ ಸರಕಾರದಿಂದ ಈ ಘೋಷಣೆ ಹೊರಹೊಮ್ಮಿರುವುದು. ಮೇಲಾಗಿ, ಶಿಕ್ಷಣ ಇಲಾಖೆಯು ಎಲ್ಲ ಪೂರ್ವಭಾವಿ ಸಿದ್ಧತೆಗಳು ನಡೆಸಿದ ನಂತರವೇ ಮೊಟ್ಟೆ ನೀಡುವ ನಿರ್ಧಾರವನ್ನು ಘೋಷಿಸಿದ್ದು. ಈ ಶಾಲೆಗಳ ಮಕ್ಕಳ ಆಯ್ಕೆಯನ್ನೂ ಒಂದು ಆಂತರಿಕ ಸರ್ವೆ ಮೂಲಕ ಶಿಕ್ಷಣ ಇಲಾಖೆಯು ಪಡೆದಿತ್ತು. ಈ ಕ್ರಮವನ್ನು "ರಾಜಕೀಯಗೊಳಿಸುವ" ಪ್ರಕ್ರಿಯೆಯನ್ನು ಎದುರು ನೋಡುತ್ತಿದ್ದ ಶಾಲೆಗಳು ಮೊಟ್ಟೆ ಬೇಕೆಂದು ಬಯಸಿದ್ದ ವಿದ್ಯಾರ್ಥಿಗಳ ಪೋಷಕರಿಂದ ಅನುಮತಿ ಪಡೆಯುವಂತೆ ಮತ್ತು ಸ್ಥಳೀಯ ಸಾಂಸ್ಕೃತಿಕ ಆಚರಣೆಗಳ ಆಧಾರದಲ್ಲಿ ಯಾವ ದಿನ ತಿನ್ನಬಹುದು, ತಿನ್ನಬಾರದು ಎಂಬುದರ ಬಗ್ಗೆಯೂ ಮಾಹಿತಿ ನೀಡುವಂತೆ ಕೇಳಿದವು. ಅಂತಿಮವಾಗಿ ಅವಶ್ಯವಿರುವ ಎಲ್ಲ ಮಾಹಿತಿಗಳನ್ನು ಪಡೆದ ನಂತರದಲ್ಲಿ ಈ ಏಳು ಜಿಲ್ಲೆಗಳಲ್ಲಿ ಮೊಟ್ಟೆ ನೀಡುವ ನಿರ್ಧಾರವನ್ನು 23.11.2021ರಂದು ಘೋಷಿಸಲಾಯಿತು.

ಈ ನಿರ್ಧಾರಕ್ಕೆ ಕ್ಷಿಪ್ರ ವಿರೋಧ ಬಂದಿತು. ನವೆಂಬರ್ 30, 2021ರಂದು ರಾಷ್ಟ್ರೀಯ ಬಸವ ದಳ, ಲಿಂಗಾಯತ ಧರ್ಮ ಮಹಾಸಭೆ ಮತ್ತು ಅಕ್ಕನಾಗಲಾಂಬಿಕ ಮಹಿಳಾ ಗಣಗಳ ಸದಸ್ಯರು ಬೀದರ್‌ನಲ್ಲಿ ಮೆರವಣಿಗೆ ನಡೆಸಿ ಈ ಸುತ್ತೋಲೆ ವಾಪಸ್ಸು ಪಡೆಯುವಂತೆ ಆಗ್ರಹಿಸಿದವು. "ಮೊಟ್ಟೆಯನ್ನು ಸೇವಿಸುವುದರಿಂದ ಮಕ್ಕಳ ಮನಸ್ಸಿನ? ಮೇಲೆ ದುಷ್ಪರಿಣಾಮ ಬೀರುತ್ತದೆ. ಕೆಲವು ಮಕ್ಕಳಿಗೆ ಮೊಟ್ಟೆ ಮತ್ತು ಕೆಲವು ಮಕ್ಕಳಿಗೆ ಬಾಳೇಹಣ್ಣು ನೀಡುವುದು ಬೇಧಭಾವ ಮಾಡಿದಂತಾಗುತ್ತದೆ. ಮೊಟ್ಟೆ ತಿನ್ನುವವರಿಗೆ ಮೊಟ್ಟೆ ನೀಡುವುದು ಸಸ್ಯಹಾರಿ ಮಕ್ಕಳಿಗೆ ಅಗೌರವದ ತೋರಿದಂತಾಗುತ್ತದೆ" ಎಂದು ಇವರುಗಳು ಮೊಟ್ಟೆ ಸೇವನೆ ವಿರುದ್ಧ ವಾದ ಮಾಡಿದ್ದರು. ಈ ಭಾಗದ ಸುಮಾರು 50ಕ್ಕೂ ಹೆಚ್ಚು ಧರ್ಮ ಗುರುಗಳು ಮುಖ್ಯಮಂತ್ರಿಗಳಿಗೆ ರಾಜಧರ್ಮ ಪಾಲಿಸುವಂತೆ ಮತ್ತು ಶಾಲೆಗಳಿಂದ ಮೊಟ್ಟೆಗಳನ್ನು ಹಿಂಪಡೆಯುವಂತೆ ಆಗ್ರಹಿಸಿದರು. ಈ ಸುತ್ತೋಲೆಯನ್ನು ವಾಪಸ್ಸು ಪಡೆಯದಿದ್ದರೆ, ಬೆಳಗಾವಿಯಲ್ಲಿರುವ ರಾಜ್ಯ ವಿಧಾನಸಭೆ ಸಂಕೀರ್ಣಕ್ಕೆ ಮೆರವಣಿಗೆ ಹೂಡುವುದಾಗಿ ಬೆದರಿಕೆ ಹಾಕಿದರು. ಈ ವಿರೋಧಕ್ಕೆ ನೇತೃತ್ವ ನೀಡುತ್ತಿರುವ ಅಖಿಲ ಭಾರತ ಸಸ್ಯಹಾರಿಗಳ ಕೂಟದ ನಾಯಕರು "ಕಲ್ಯಾಣ ಕರ್ನಾಟಕದಲ್ಲಿ ಅಪೌಷ್ಟಿಕವಾಗಿರುವ ಮಕ್ಕಳೇ ಇಲ್ಲ" ಎಂದು ಹೇಳಿಕೊಂಡರು!

ಮೊಟ್ಟೆಯನ್ನು ಬಿಸಿಯೂಟದಲ್ಲಿ ನೀಡುವ ಕುರಿತಂತೆ ಮೂಡಿಬಂದಿರುವ ವಿರೋಧವು ಹೇಗೆ ಜಾತಿ ಆಧಾರಿತವಾಗಿದೆ ಎಂಬುದು ತಿಳಿಯುತ್ತದೆ. ಹೀಗಾಗಿ ಆಹಾರ ಆಯ್ಕೆಯಲ್ಲಿ ಮೊಟ್ಟೆಯನ್ನು ಬಹುಸಂಖ್ಯಾತ ಕುಟುಂಬಗಳು ಬಳಸುತ್ತವೆ ಮತ್ತು ಮೊಟ್ಟೆ ಸೇವಿಸದಿರುವವರ ಪ್ರಮಾಣ ಅತ್ಯಂತ ಅಲ್ಪಪ್ರಮಾಣದ್ದಾಗಿದೆ, ಅದರಲ್ಲೂ ಬಹುತೇಕರು ಮೇಲ್ಜಾತಿಗೆ ಸೇರಿದವರು.ಕೆಳಗಿರುವ ಎರಡು ಕೋಷ್ಟಕಗಳು ಇದನ್ನು ಸ್ಪಷ್ಟ ಪಡಿಸುತ್ತವೆ. ಕೋಷ್ಟಕ – 1 ರಲ್ಲಿ ಸರಕಾರಿ, ಅನುದಾನಿತ ಮತ್ತು ಎರಡೂ ಪ್ರಾಥಮಿಕ (1–5ತರಗತಿ), ಮಾಧ್ಯಮಿಕ (6–8), ಹೈಸ್ಕೂಲ್ (9–10) ಶಾಲೆಗಳಲ್ಲಿ ಓದುತ್ತಿರುವ ಪರಿಶಿಷ್ಟ ಜಾತಿ (ಎಸ್.ಸಿ), ಪರಿಶಿಷ್ಟ ಪಂಗಡ (ಎಸ್.ಟಿ), ಹಿಂದುಳಿದ (ಒಬಿಸಿ) ಮತ್ತು ಮೇಲುಜಾತಿಯ (ಸಾಮಾನ್ಯ)ಮಕ್ಕಳ ಪ್ರಮಾಣ ಕೊಡಲಾಗಿದೆ. ಈ ಅಂಖೆಸಂಖ್ಯೆಗಳ ಪ್ರಕಾರ ಮೇಲುಜಾತಿಯ ಸುಮಾರು ಶೇಕಡಾ 5ರಷ್ಟು ಬಿಟ್ಟರೆ ಉಳಿದವರೆಲ್ಲ ಸಾಂಪ್ರದಾಯಿಕವಾಗಿ ಸಸ್ಯಾಹಾರಿಗಳಲ್ಲ.

Table 1: Caste–category-wise Composition of Students Studying in Government and Aided Schools in Academic Year 2018–19

School	Class	Gen	SC	ST	OBC
Government schools	Lower primary (1–5)	3.01	26.46	11.87	58.66
	Higher primary (6–8)	3.58	24.35	10.85	61.22
	High school (9–10)	2.18	22.52	10.08	65.22
	Total	3.08	25.27	11.31	60.35
Aided schools	Lower primary (1–5)	7.16	20.22	6.16	66.46
	Higher primary (6–8)	7.63	22.00	7.21	63.17
	High school (9–10)	5.83	22.18	7.73	64.26
	Total	6.81	21.52	7.08	64.58
Government-run and aided schools	Lower primary (1–5)	3.61	25.56	11.04	59.79
	Higher primary (6–8)	4.55	23.79	9.98	61.68
	High school (9–10)	3.84	22.37	9.01	64.78
	Total	3.95	24.39	10.32	61.34

These statistics pertain to schools run by the education department and private aided schools.
Source: Unified District Information System for Education (UDISE) Report for 2018–19 (Karnataka).

Table 2: Percentage Distribution of Frequency of Consumption of Specific Food Items in Karnataka by Men and Women

Type of Food	Frequency of Consumption of Type of Food				
	Daily	Weekly	Occasionally	Never	At Least Once
Women					
Eggs	8.5	54.9	18.8	17.8	82.2
Fish	3.7	31.8	33.3	31.2	68.8
Chicken or meat	2.8	50.0	23.5	23.6	76.4
Fish or chicken or meat	5.5	52.2	19.9	22.4	71.6
Men					
Eggs	9.7	56.6	23.3	10.4	89.6
Fish	5.2	36.4	37.0	21.5	77.5
Chicken or meat	4.0	49.7	29.4	16.8	83.2
Fish or chicken or meat	7.3	52.8	25.3	14.6	85.4

Source: IIPS and ICF (2021: 137).



ಕೋಷ್ಟಕ2 ರಲ್ಲಿ ಮೊಟ್ಟೆ, ಮೀನು, ಕೋಳಿ ಅಥವಾ ಇತರ ಮಾಂಸ, ಕೋಳಿ-ಮೀನು ಅಥವಾ ಇತರ ಮಾಂಸಗಳನ್ನು ಅನುಕ್ರಮವಾಗಿ ದಿನಾ, ವಾರಕ್ಕೊಮ್ಮೆ, ಅಪರೂಪಕ್ಕೆ, ಕನಿಷ್ಠ ಒಂದು ಬಾರಿಯಾದರೂ ಸೇವಿಸಿದ ಕರ್ನಾಟಕದ ಮಹಿಳೆಯರು ಮತ್ತು ಪುರುಷರ ಪ್ರಮಾಣದ ಅಂಕೆಸಂಖ್ಯೆಗಳಿವೆ. ಈ ಕೋಷ್ಟಕದ ಸಂಖ್ಯೆಗಳ ಆಧಾರದ ಮೇಲೆ ಕರ್ನಾಟಕದಲ್ಲಿ ಪ್ರಾಣಿ ಜನ್ಯ ಪ್ರೊಟೀನ್ ಸೇವನೆಯನ್ನು ಪರಿಶೀಲಿಸಿದರೆ, ಸುಮಾರು ಶೇ. 82.2 ಮಹಿಳೆಯರು ಮತ್ತು ಶೇ. 89.6 ಪುರುಷರು ಕನಿಷ್ಟ ಒಂದು ಬಾರಿಯಾದರೂ ಮೊಟ್ಟೆ ಸೇವಿಸುತ್ತಾರೆ; ಅಂತೆಯೇ ಶೇ. 71.6 ಮಹಿಳೆಯರು ಮತ್ತು ಶೇ. 85.4 ಪುರುಷರು ಕನಿಷ್ಟ ಒಮ್ಮೆಯಾದರೂ ಮೀನು, ಕೋಳಿ ಅಥವಾ ಮಾಂಸವನ್ನು ಸೇವಿಸುತ್ತಾರೆ.

ಶಿಕ್ಷಣ ಇಲಾಖೆಯು ನಡೆಸಿರುವ ಅಧ್ಯಯನದ ಪ್ರಕಾರ ಏಳು ಜಿಲ್ಲೆಗಳಲ್ಲಿ ಆರು ಜಿಲ್ಲೆ ಬರುವ ಗುಲ್ಬರ್ಗಾ ವಿಭಾಗದಲ್ಲಿ ಶೇ. 80ಕ್ಕೂ ಅಧಿಕ ಮಕ್ಕಳು ಮೊಟ್ಟೆ ಬೇಕೆಂದು ಹೇಳಿದ್ದವು ಮತ್ತು ಉಳಿದ ಮಕ್ಕಳು ಬಾಳೇಹಣ್ಣು ಬಯಸಿದ್ದವು. ಮೇಲಾಗಿ ಈ ಜಿಲ್ಲೆಗಳ ಪೌಷ್ಟಿಕ ಸೂಚ್ಯಾಂಕಗಳು ಮೊಟ್ಟೆ ನೀಡುವ ನಿರ್ಧಾರ ಎಷ್ಟು ಸೂಕ್ತವಾಗಿದೆ ಎಂಬುದು ಶಿಕ್ಷಣ ಇಲಾಖೆ ನಡೆಸಿರುವ ಸರ್ವೆಯಿಂದ ತಿಳಿಯುತ್ತದೆ. ಈ ವರದಿ "ಶಾಲೆಗೆ ಹೋಗುವ ಮಕ್ಕಳಲ್ಲಿ ಅನೆಮಿಯಾ ಪ್ರಮಾಣ ಶೇ. 68 ರಿಂದ (ವಿಜಯಪುರ ಜಿಲ್ಲೆ) ಶೇ.74 (ಯಾದಗಿರಿ ಜಿಲ್ಲೆ) ರಷ್ಟಿದೆ" ಎಂದು ಹೇಳುತ್ತದೆ. ಮೇಲಾಗಿ, ಕಲ್ಯಾಣ ಕರ್ನಾಟಕ ಪ್ರಾಂತ್ಯವು ಸಮಾಜೋ-ಆರ್ಥಿಕವಾಗಿ ಮತ್ತು ಶೈಕ್ಷಣಿಕವಾಗಿ

ಪುಟ 14 ಕ್ಕೆ

ಕೇರಳ ಕಾಂಗ್ರೆಸ್‌ನ ದಿವಾಳಿಕೋರ ರಾಜಕೀಯ

ಕೇರಳ ಮುಖ್ಯಮಂತ್ರಿ ಪಿಣರಾಯಿ ವಿಜಯನ್ ರಾಜಿನಾಮೆ ನೀಡುವಂತೆ ಆಗ್ರಹಿಸಿ ಕಾಂಗ್ರೆಸ್ ಮತ್ತು ಬಿಜೆಪಿ ಬೀದಿಗಳಲ್ಲಿ ಹೋರಾಟ ನಡೆಸುತ್ತಿವೆ. ಕೆಲವು ಕಡೆಗಳಲ್ಲಿ ಪ್ರತಿಭಟನೆ ಹಿಂಸಾತ್ಮಕವಾಗಿದ್ದು ಪೊಲೀಸರೊಂದಿಗೆ ಘರ್ಷಣೆಗಿಳಿದಿದ್ದಾರೆ.

ಚಿನ್ನ ಕಳ್ಳಸಾಗಾಟ ಹಗರಣದ ಆರೋಪಿಗಳಲ್ಲಿ ಒಬ್ಬರಾಗಿ ಈಗ ಜಾಮೀನಿನ ಮೇಲೆ ಹೊರಗಿರುವ ಸ್ವಪ್ನಾ ಸುರೇಶ್ ಮಾಡಿದ್ದ ಹಾಸ್ಯಾಸ್ಪದ ಆರೋಪದ ಆಧಾರದಲ್ಲಿ ಈ ಚಳವಳಿ ನಡೆಸಲಾಗುತ್ತಿದೆ. ಮುಖ್ಯಮಂತ್ರಿಯವರ ಸಲಹೆ ಮೇರೆಗೆ ಒಂದು ಬ್ಯಾಗ್ ತುಂಬಾ ವಿದೇಶಿ ಕರೆನ್ಸಿಯನ್ನು ರಾಜತಾಂತ್ರಿಕ ಮಾರ್ಗದ ಮೂಲಕ ದೇಶದಿಂದ ಹೊರಕ್ಕೆ ಸಾಗಿಸಿದೆ ಎಂಬುದು ಸ್ವಪ್ನಾ ಹೆಣೆದ ಹೊಸ ಕಟ್ಟುಕಥೆಯಾಗಿದೆ. ಬಿರ್ಯಾನಿ ಪಾತ್ರೆಗಳಲ್ಲಿ ಚಿನ್ನವಿಟ್ಟು ಮುಖ್ಯಮಂತ್ರಿ ಮನೆಗೆ ಕೊಂಡೊಯ್ದೆ ಎನ್ನುವುದು ಅವರ ಇನ್ನೊಂದು ಕಥೆಯಾಗಿದೆ.

ರಾಜತಾಂತ್ರಿಕ ಮಾರ್ಗದ ಮೂಲಕ ಚಿನ್ನದ ಕಳ್ಳಸಾಗಾಟ ಮಾಡಲಾಗಿತ್ತು ಎನ್ನುವುದು 2020 ಜೂನ್‌ನಲ್ಲಿ ಮೊದಲ ಬಾರಿಗೆ ಬಹಿರಂಗವಾಗಿದ್ದಾಗ ಇದು ಕಸ್ಟಮ್ಸ್ ಇಲಾಖೆಯ ವ್ಯಾಪ್ತಿಗೆ ಬರುವುದರಿಂದ ಕೇಂದ್ರೀಯ ಸಂಸ್ಥೆಯೊಂದರಿಂದ ತನಿಖೆ ನಡೆಸುವಂತೆ ಆಗ್ರಹಿಸಿ ಕೇಂದ್ರ ಸರಕಾರಕ್ಕೆ ಮುಖ್ಯಮಂತ್ರಿ ವಿಜಯನ್ ಪತ್ರ ಬರೆದಿದ್ದರು. ಎನ್‌ಐಎ, ಸಿಬಿಐ, ಇ.ಡಿ. ಮತ್ತು ಕಸ್ಟಮ್ಸ್ ಇಲಾಖೆ ಎರಡು ವರ್ಷ ಕಾಲ ಪ್ರತಿಯೊಂದು ಆಯಾಮದಲ್ಲಿ ವಿಚಾರಣೆ ನಡೆಸಿದ್ದವು. ಪ್ರತಿಪಕ್ಷಗಳು ಮತ್ತು ಮಾಧ್ಯಮಗಳ ಆಧಾರರಹಿತ ಆರೋಪಗಳ ಹೊರತಾಗಿಯೂ ಮುಖ್ಯಮಂತ್ರಿಯಾಗಲೀ ಸರಕಾರದ ಇತರ ಯಾವುದೇ ಸಚಿವರ ವಿರುದ್ಧವಾಗಲೀ ಯಾವುದೇ ಆರೋಪ ಸಾಬೀತಾಗಲಿಲ್ಲ.

ವಿವಿಧ ಸಂಸ್ಥೆಗಳ ಮುಂದೆ ಒಂಬತ್ತು ಬಾರಿ ನೀಡಿದ್ದ ಹೇಳಿಕೆಗಳಲ್ಲಿ ಸ್ವತಃ ಸ್ವಪ್ನಾ ಅವರೇ ಮುಖ್ಯಮಂತ್ರಿಯನ್ನು ಪ್ರಸ್ತಾಪಿಸಿರಲಿಲ್ಲ. ವಾಸ್ತವವಾಗಿ, ಮುಖ್ಯಮಂತ್ರಿಯನ್ನು ಸಿಲುಕಿಸಲು ತನ್ನ ಮೇಲೆ ಒತ್ತಡ ಹೇರಲಾಗುತ್ತಿದೆ ಎಂದು ಆಕೆ ಜೈಲಿನಿಂದ ಕಳಿಸಿದ್ದ ಒಂದು ಧ್ವನಿ ಸಂದೇಶದಲ್ಲಿ ಹೇಳಿದ್ದರು.

2021 ನವೆಂಬರ್‌ನಲ್ಲಿ ಸ್ವಪ್ನಾಗೆ ಜಾಮೀನು ಸಿಕ್ಕಿತ್ತು. ಅದಾದ ತಕ್ಷಣವೇ ಆಕೆ ಆರ್‌ಎಸ್‌ಎಸ್ ಸಂಯೋಜಿತ ಎನ್‌ಜಿಒ ಒಂದರಲ್ಲಿ ಕಾರ್ಯ ನಿರ್ವಾಹಕಿಯಾಗಿ ಕೆಲಸಕ್ಕೆ ಸೇರಿದ್ದರು. ಸಹ ಆರೋಪಿ ಪಿ.ಎಸ್. ಶ್ರೀನಾಥ್ ಎಂಬಾತನೂ ಅಲ್ಲಿ ಕೆಲಸಕ್ಕೆ ಸೇರಿದ್ದ. ಆ ಎನ್‌ಜಿಒ ಹೆಸರು ಹೈರೇಂಜ್ ರೂರಲ್ ರೇವಲಪ್‌ಮೆಂಟ್ ಸೊಸೈಟಿ (ಎಚ್‌ಆರ್‌ಡಿಎಸ್). ಇದಾದ ಕೆಲವು ತಿಂಗಳ ನಂತರ ಸ್ವಪ್ನಾ ಮ್ಯಾಜಿಸ್ಟ್ರೇಟ್ ಮುಂದೆ ಸೆಕ್ಷನ್ 164 ರನ್ವಯ ಹೇಳಿಕೆ ದಾಖಲಿಸಿದ್ದರು. ಹಾಗೂ ಅದನ್ನು ಬಹಿರಂಗಪಡಿಸಿದ್ದರು.

— ಪ್ರಕಾಶ್ ಕಾರತ್ —



ಹಾಗಾದರೆ ಈಗ ಏನು ಬದಲಾವಣೆ ಆಯಿತು? 2021 ನವೆಂಬರ್‌ನಲ್ಲಿ ಸ್ವಪ್ನಾಗೆ ಜಾಮೀನು ಸಿಕ್ಕಿತ್ತು. ಅದಾದ ತಕ್ಷಣವೇ ಆಕೆ ಆರ್‌ಎಸ್‌ಎಸ್ ಸಂಯೋಜಿತ ಎನ್‌ಜಿಒ ಒಂದರಲ್ಲಿ ಕಾರ್ಯ ನಿರ್ವಾಹಕಿಯಾಗಿ ಕೆಲಸಕ್ಕೆ ಸೇರಿದ್ದರು. ಸಹ ಆರೋಪಿ ಪಿ.ಎಸ್. ಶ್ರೀನಾಥ್ ಎಂಬಾತನೂ ಅಲ್ಲಿ ಕೆಲಸಕ್ಕೆ ಸೇರಿದ್ದ. ಆ ಎನ್‌ಜಿಒ ಹೆಸರು ಹೈರೇಂಜ್ ರೂರಲ್ ರೇವಲಪ್‌ಮೆಂಟ್ ಸೊಸೈಟಿ (ಎಚ್‌ಆರ್‌ಡಿಎಸ್). ಇದಾದ ಕೆಲವು ತಿಂಗಳ ನಂತರ ಸ್ವಪ್ನಾ ಮ್ಯಾಜಿಸ್ಟ್ರೇಟ್ ಮುಂದೆ ಸೆಕ್ಷನ್ 164 ರನ್ವಯ ಹೇಳಿಕೆ ದಾಖಲಿಸಿದ್ದರು. ಹಾಗೂ ಅದನ್ನು ಬಹಿರಂಗಪಡಿಸಿದ್ದರು. ಅದೊಂದು ಗೌಪ್ಯ ದಾಖಲೆಯಾಗಿದ್ದರೂ ಆಕೆ ಹಾಗೆ ಮಾಡಿದ್ದರು.

ಈ ಕಟ್ಟುಕಥೆಗಳ ನಂತರ ಏನೇನು ನಾಟಕಗಳು ಅನಾವರಣಗೊಳ್ಳುತ್ತವೆ ಎಂಬುದು ನಿರೀಕ್ಷಿತವೇ ಆಗಿತ್ತು. ಸ್ವಪ್ನಾ ಹೇಳಿದ್ದ ಹಾಸ್ಯಾಸ್ಪದ ಸುಳ್ಳನ್ನೇ ವೇದವಾಕ್ಯ ಎಂಬಂತೆ ನಂಬಿದ ಕಾಂಗ್ರೆಸ್ ಸಿಎಂ ರಾಜಿನಾಮೆ ಆಗ್ರಹಿಸಿ ಪ್ರತಿಭಟನೆಗೆ ಇಳಿಯಿತು. ಇಡೀ ಪ್ರಕರಣದ ಸೂತ್ರಧಾರಿಯಾದ ಬಿಜೆಪಿ–ಆರ್‌ಎಸ್‌ಎಸ್ ಯೋಜನೆಗೆ ತಕ್ಕಂತೆ ಬೀದಿಗಿಳಿದವು. ಬಹುತೇಕ ಮುಖ್ಯವಾಹಿನಿ ಮಾಧ್ಯಮಗಳು ಸಿಎಂ ಮತ್ತು ಎಲ್‌ಡಿಎಫ್ ಸರಕಾರದ ವಿರುದ್ಧದ ಪ್ರಚಾರಕ್ಕೆ ದನಿಗೂಡಿಸಿದವು. ಸ್ವಪ್ನಾರ ಸುಳ್ಳಿನ ಕಂತೆಗಳನ್ನೇ ಪುಂಖಾನುಪುಂಖವಾಗಿ ಪ್ರಚಾರ ಮಾಡಿದವು.

ಮುಖ್ಯಮಂತ್ರಿಯವರ ಓಡಾಟಕ್ಕೆ ಯುವ ಕಾಂಗ್ರೆಸ್ ಅಡ್ಡಿ ಪಡಿಸುತ್ತಿದೆ ಹಾಗೂ ಕಪ್ಪು ಬಾವುಟ ಪ್ರದರ್ಶಿಸುತ್ತಿದೆ. ಮುಖ್ಯಮಂತ್ರಿಯನ್ನು ದೈಹಿಕವಾಗಿ ಎದುರಿಸುವ ಪ್ರಯತ್ನಗಳನ್ನೂ ನಡೆಸಲಾಗುತ್ತಿದೆ. ಕಣ್ಣೂರಿನ ಇಬ್ಬರು ಯುವ ಕಾಂಗ್ರೆಸ್ ಮುಖಂಡರು, ಮುಖ್ಯಮಂತ್ರಿ ತಿರುವನಂತಪುರಂನಿಂದ ಪ್ರಯಾಣಿಸುತ್ತಿದ್ದ ವಿಮಾನದಲ್ಲಿ ಪ್ರಯಾಣಿಸಿದ್ದು ವಿಮಾನ ಇಳಿದಾಗ ಮುಖ್ಯಮಂತ್ರಿಯತ್ತ ಧಾವಿಸಿ ಘೋಷಣೆಗಳನ್ನು ಕೂಗಿದರು. ಕಾಂಗ್ರೆಸ್‌ನ ಪ್ರತಿಪಕ್ಷ ನಾಯಕ ವಿ.ಡಿ. ಸತೀಶನ್ ಈ ಕೃತ್ಯವನ್ನು ಸಮರ್ಥಿಸಿಕೊಂಡಿದ್ದಾರೆ. ಪ್ರತಿಭಟನಾರ್ಥ ಘೋಷಣೆಗಳನ್ನು ಕೂಗಲಾಗಿದೆಯಷ್ಟೇ ಎಂದು ಹೇಳಿದ್ದಾರೆ ಹಾಗೂ ಮುಖ್ಯಮಂತ್ರಿಯತ್ತ ಧಾವಿಸುತ್ತಿದ್ದ ಪ್ರತಿಭಟನೆಕಾರರನ್ನು ತಡೆದು ಅವರನ್ನು ಹಿಂದೆ ತಳ್ಳಿದ ಎಲ್‌ಡಿಎಫ್ ಸಂಚಾಲಕ ಇ.ಪಿ. ಜಯರಾಜನ್ ವಿರುದ್ಧವೇ ಕೇಸ್ ದಾಖಲಿಸಬೇಕೆಂದು ಆಗ್ರಹಿಸಿದ್ದಾರೆ!

ಕೇರಳದಲ್ಲಿ ಕಾಂಗ್ರೆಸ್ ಪಕ್ಷ ಪಿಣರಾಯಿ ವಿಜಯನ್ ವಿರುದ್ಧ ಪ್ರತಿಭಟನೆ ನಡೆಸುತ್ತಿದ್ದ ದಿನವೇ ಕಾಂಗ್ರೆಸ್ ನಾಯಕ ರಾಹುಲ್ ಗಾಂಧಿ ನ್ಯಾಶನಲ್ ಹೆರಾಲ್ಡ್ ಕೇಸ್‌ನಲ್ಲಿ ಅನುಷ್ಠಾನ ನಿರ್ದೇಶನಾಲಯದ (ಇ.ಡಿ.) ಮುಂದೆ ಹಾಜರಾಗಿದ್ದರು. ಈ 'ರಾಜಕೀಯ ಸೇಡನ್ನು' ವಿರೋಧಿಸಿ ಕಾಂಗ್ರೆಸ್ ಮುಖಂಡರು ಮತ್ತು ಕಾರ್ಯಕರ್ತರು ದೆಹಲಿಯಲ್ಲಿ ಬೀದಿಗಿಳಿದಿದ್ದರು. ಆದರೆ ಕೇರಳದಲ್ಲಿ ಪಿಣರಾಯಿ ವಿಜಯನ್ ವಿರುದ್ಧ ಇ.ಡಿ. ಕ್ರಮ ಕೈಗೊಂಡಿಲ್ಲ ಎಂದು ಕಾಂಗ್ರೆಸ್ ಹೇಳುತ್ತಿದೆ. ಮೋದಿ ಮತ್ತು ವಿಜಯನ್ ನಡುವೆ ಒಪ್ಪಂದವಾಗಿರುವುದೇ ಇದಕ್ಕೆ ಕಾರಣ ಎಂದು ಆರೋಪಿಸಿದೆ.

ಒಂದು ವರ್ಷದ ಹಿಂದೆ, ಚಿನ್ನ ಸ್ಮಗ್ಲಿಂಗ್ ಕೇಸ್‌ನಲ್ಲಿ ಮುಖ್ಯಮಂತ್ರಿ ವಿರುದ್ಧ ಕಾಂಗ್ರೆಸ್ ಮತ್ತು ಬಿಜೆಪಿ ವ್ಯಾಪಕ ಪ್ರತಿಭಟನೆ ನಡೆಸಿದ್ದವು. ಈ ಪ್ರಕರಣದಲ್ಲಿ ಸಿಎಂ ಅನ್ನು ಹೆಸರಿಸಲು ಯಾವುದೇ ಪುರಾವೆ ಸಲ್ಲಿಸಲು ಕೇಂದ್ರೀಯ ತನಿಖಾ ಸಂಸ್ಥೆಗಳು ವಿಫಲಗೊಂಡ ಹಾಗೂ 2021ರ ಮೇ ಚುನಾವಣೆಗಳಲ್ಲಿ ಈ ಎಲ್ಲ ಆರೋಪಗಳನ್ನು ಜನರು ತಿರಸ್ಕರಿಸಿದ ನಂತರ, ಯುಡಿಎಫ್ ಹತಾಶಗೊಂಡಿದೆ. ಇದೀಗ ತಮ್ಮ ಅವಕಾಶವನ್ನು ಪುನರುಜ್ಜೀವನಗೊಳಿಸಿಕೊಳ್ಳಲು ಆರ್‌ಎಸ್‌ಎಸ್–ಪ್ರಾಯೋಜಿತ ಸ್ವಪ್ನಾ ಸುರೇಶ್ ಹೇಳಿಕೆಯ ಬಾಲ ಹಿಡಿದುಕೊಂಡು ಜಗ್ಗಾಡತೊಡಗಿದೆ.

ಕೇರಳದಲ್ಲಿ ಕಾಂಗ್ರೆಸ್ ನಡೆದುಕೊಳ್ಳುತ್ತಿರುವ ರೀತಿ ನೋಡಿದರೆ ರಾಷ್ಟ್ರ ಮಟ್ಟದಲ್ಲಿ ಅದರ ದಿವಾಳಿಕೋರತನದ ಪರಿಸ್ಥಿತಿಗೆ ಕಾರಣ ಏನೆಂಬುದು ತಿಳಿಯುತ್ತದೆ. ಎಡ–ನೇತೃತ್ವದ ಸರಕಾರವೊಂದರ ವಿರುದ್ಧ ಹೋರಾಡಲು ಬಿಜೆಪಿ ಜೊತೆ ಸೇರಲೂ ಅದಕ್ಕೆ ಸಂಕೋಚವಿಲ್ಲ. ವಿಜಯನ್ ಅವರು ಮೋದಿಯೊಂದಿಗೆ 'ಡೀಲ್–ಮಾಡಿಕೊಳ್ಳುತ್ತಾರೆ' ಎಂದು ಕೆಸರೆರಚಲೂ ಕಾಂಗ್ರೆಸ್ ನಾಯಕರು ಹೇಸುವುದಿಲ್ಲ. ಆದರೆ ಅವರ ನಾಯಕರೇ ತಂಡೋಪತಂಡವಾಗಿ ಬಿಜೆಪಿ ಸೇರಲು ಧಾವಿಸುತ್ತಿದ್ದಾರೆ. ವಾಸ್ತವವಾಗಿ ಕೇರಳದಲ್ಲಿ ಕಾಂಗ್ರೆಸ್ ಪಕ್ಷವು ಎಲ್‌ಡಿಎಫ್ ಸರಕಾರದ ವಿರುದ್ಧ ಆರ್‌ಎಸ್‌ಎಸ್–ಬಿಜೆಪಿ ಸಂಚಿನಲ್ಲಿ ದಾಳವಾಗುತ್ತಿದೆ.

ಕೇರಳದಲ್ಲಿ ಕಾಂಗ್ರೆಸ್–ಬಿಜೆಪಿಗಳ ಜಂಟಿ ದಾಳಿಯನ್ನು ಪ್ರಬಲವಾದ ಪ್ರತಿ–ಆಂದೋಲನದೊಂದಿಗೆ ಹಾಗೂ ಜನರನ್ನು ದೊಡ್ಡ ಪ್ರಮಾಣದಲ್ಲಿ ಅಣಿನೆರೆಯಿಸಿ ಎದುರಿಸಬೇಕಾಗಿದೆ. ಎಲ್‌ಡಿಎಫ್ ಸರಕಾರ ಹಾಗೂ ಅದರ ನೀತಿಗಳಲ್ಲಿ ಕೇರಳ ಜನರಿಗೆ ಸಂಪೂರ್ಣ ವಿಶ್ವಾಸವಿದ್ದು ತಕ್ಕ ಪ್ರತಿಕ್ರಿಯೆ ನೀಡಲಿದ್ದಾರೆ.

ಅನು: ವಿಶ್ವ

ಇಂಡಿಯನ್ ಬ್ಯಾಂಕ್‌ನ ಮಹಿಳಾ ವಿರೋಧಿ ನಿರ್ಧಾರವನ್ನು ತಕ್ಷಣ ಹಿಂಪಡೆಯಬೇಕು.... ಪುಟ 2 ರಿಂದ

ಆರು ವಾರಗಳ ನಂತರ ಅಭ್ಯರ್ಥಿಯು ಫಿಟ್‌ನೆಸ್ ಪ್ರಮಾಣಪತ್ರಕ್ಕಾಗಿ ಮರು–ಪರೀಕ್ಷೆಗೆ ಒಳಗಾಗಬೇಕು, ನೋಂದಾಯಿತ ವೈದ್ಯಕೀಯ ವೈದ್ಯರಿಂದ ಫಿಟ್‌ನೆಸ್ ವೈದ್ಯಕೀಯ ಪ್ರಮಾಣಪತ್ರವನ್ನು ಸಲ್ಲಿಸಬೇಕು ಎಂದು ವಿಧಿಸಿದೆ. ಇಂಡಿಯನ್ ಬ್ಯಾಂಕ್ ಪ್ರಾಯೋಜಿತ ತಮಿಳುನಾಡು ಗ್ರಾಮ ಬ್ಯಾಂಕ್ (ಟಿಎನ್‌ಜಿಬಿ) ಸಹ ಇದೇ ರೀತಿಯ ಮಾರ್ಗಸೂಚಿಗಳನ್ನು ಹೊರಡಿಸಿದೆ ಮತ್ತು ವೈದ್ಯಕೀಯ ಪರೀಕ್ಷೆಯ ನಂತರ ಹೆರಿಗೆಯಾದ ಮೂರು ತಿಂಗಳ ನಂತರ ಮಾತ್ರ ಅವರನ್ನು ಸೇರಲು ಅನುಮತಿಸಲಾಗುವುದು ಎಂದು ಷರತ್ತು ವಿಧಿಸಿದೆ. ಇದು ಪ್ರತಿಗಾಮಿ ಷರತ್ತು, ಮಹಿಳೆಯರಿಗೆ ಅತ್ಯಂತ ತಾರತಮ್ಯದ್ದಾಗಿದೆ ಎಂದು ಎಐಡಿಡಬ್ಲ್ಯುಎ ಖಂಡಿಸಿದೆ.

ಸ್ವಾತಂತ್ರ್ಯದ ನಂತರ ದೇಶದಲ್ಲಿ ಮಹಿಳೆಯರ ಕೆಲಸ ಭಾಗವಹಿಸುವಿಕೆ ಅತ್ಯಂತ ಕೆಳಗಿನ ಮಟ್ಟಕ್ಕೆ ಇಳಿದಿರುವ ಪ್ರಸ್ತುತ ಸಂದರ್ಭದಲ್ಲಿ ಬ್ಯಾಂಕ್ ಮ್ಯಾನೇಜ್‌ಮೆಂಟ್‌ಗಳು ನೀಡುವ ಇಂತಹ ಸೂಚನೆಗಳು ಮಹಿಳೆಯರ ಉದ್ಯೋಗಾವಕಾಶಗಳ ಮೇಲೆ ಮತ್ತಷ್ಟು ಪ್ರತಿಕೂಲ ಪರಿಣಾಮ ಬೀರುತ್ತವೆ. ಬ್ಯಾಂಕ್‌ಗಳಲ್ಲಿ ಮಹಿಳಾ ಉದ್ಯೋಗಿಗಳ ಸಂಖ್ಯೆ 25% ದಷ್ಟು ಕೆಳ ಮಟ್ಟದಲ್ಲಿದೆ. 50 ಅಥವಾ ಅದಕ್ಕಿಂತ ಹೆಚ್ಚಿನ ಉದ್ಯೋಗಿಗಳನ್ನು ನೇಮಿಸಿಕೊಳ್ಳುವ ಎಲ್ಲಾ ವಲಯಗಳಲ್ಲಿ ಪ್ರತಿ ಸಂಸ್ಥೆಗಳಲ್ಲಿ ಕಡ್ಡಾಯ ಶಿಶುಪಾಲನಾ (ಡೇಕೇರ್) ಸೌಲಭ್ಯಗಳಿಗೆ ಸಂಬಂಧಿಸಿದ ನಿಬಂಧನೆ ಇದೆ. ತಾಯಂದಿರು ದಿನಕ್ಕೆ ನಾಲ್ಕು ಬಾರಿ ಶಿಶುವಿಹಾರಕ್ಕೆ ಭೇಟಿ ನೀಡಲು ಅನುಮತಿಸುವ ಪ್ರಯೋಜನವನ್ನು ಇದು ಒಳಗೊಂಡಿದೆ. ಗರ್ಭಿಣಿಯರು ಬ್ಯಾಂಕ್‌ಗೆ ಸೇರುವುದನ್ನು ತಡೆಯುವುದು ಅವರ ಕೆಲಸದ ಹಕ್ಕಿನ ಉಲ್ಲಂಘನೆಯಾಗಿದೆ ಎಂದು ಎಐಡಿಡಬ್ಲ್ಯುಎ ಅಭಿಪ್ರಾಯ ಪಟ್ಟಿದೆ.

ಈ ಹಿಂದೆ ಮಹಿಳಾ ಅಭ್ಯರ್ಥಿಗಳು ಲಿಖಿತ ಪರೀಕ್ಷೆ ಮತ್ತು ಸಂದರ್ಶನದಲ್ಲಿ ಉತ್ತೀರ್ಣರಾದ ನಂತರ, ಅವರು ತಮ್ಮ ಆರೋಗ್ಯದ ಇತಿಹಾಸದ ವಿವರಗಳನ್ನು ಕೇಳುವ "ಮಹಿಳಾ ಅಭ್ಯರ್ಥಿಗಳಿಗೆ ಮಾತ್ರ" ಎಂಬ ಉಪಶೀರ್ಷಿಕೆಯ ಅಡಿಯಲ್ಲಿ ವೈದ್ಯಕೀಯ ಪರೀಕ್ಷಕರಿಗೆ ಘೋಷಣೆಯನ್ನು ಭರ್ತಿ ಮಾಡಬೇಕಾಗಿತ್ತು. ಪ್ರತಿಭಟನೆಯ ನಂತರ ಈ ಅವಮಾನಕರ ಷರತ್ತನ್ನು ಹಿಂಪಡೆಯಲಾಗಿದೆ. ಇಂತಹ ಪ್ರತಿಗಾಮಿ ಕ್ರಮಗಳನ್ನು ಮರಳಿ ತರುವುದು ಸ್ವೀಕಾರಾರ್ಹವಲ್ಲ ಎಂದಿರುವ ಎಐಡಿಡಬ್ಲ್ಯುಎ ಸಂವಿಧಾನ ವಿರೋಧಿಯಾದ ಇಂತಹ ಮಹಿಳಾ–ವಿರೋಧಿ ನಿರ್ಧಾರವನ್ನು ಇಂಡಿಯನ್ ಬ್ಯಾಂಕ್ ಆಡಳಿತ ತಕ್ಷಣವೇ ಹಿಂತೆಗೆದುಕೊಳ್ಳಬೇಕು ಮತ್ತು ಇಂತಹ ಪ್ರತಿಗಾಮಿ ಸುತ್ತೋಲೆಯನ್ನು ಹೊರಡಿಸಲು ಕಾರಣರಾದ ಕಾರ್ಯನಿರ್ವಾಹಕರ ವಿರುದ್ಧ ಕ್ರಮಕೈಗೊಳ್ಳಬೇಕು ಎಂದು ಆಗ್ರಹಿಸಿದೆ. ಕೇಂದ್ರ ಸರ್ಕಾರ ಯಾವುದೇ ಸಂಸ್ಥೆಯು ನೇಮಕಾತಿಯಲ್ಲಿ ಮಹಿಳೆಯರಿಗೆ ತಾರತಮ್ಯ ಮಾಡದಂತೆ ಖಚಿತಪಡಿಸಬೇಕು ಎಂದೂ ಅದು ಆಗ್ರಹಿಸಿದೆ.





ಸೇನಾಕಾಂಕ್ಷಿಗಳ ಕನಸುಗಳನ್ನು ಭಸ್ಮಮಾಡಲು ಬರುತ್ತಲಿದೆ ಅಗ್ನಿಪಥ್

ದೇಶದ ನಿರುದ್ಯೋಗ ಸಮಸ್ಯೆಯನ್ನು ಬಗೆಹರಿಸುವಲ್ಲಿ ಮೋದಿ ನೇತೃತ್ವದ ಬಿಜೆಪಿ ಕೇಂದ್ರ ಸರ್ಕಾರ ಸಂಪೂರ್ಣ ವಿಫಲವಾಗಿದೆ. ಮುಂಬರುವ ಸಾರ್ವತ್ರಿಕ ಚುನಾವಣೆ ಮೋದಿ ಎದುರ ಅದೇ ನಿರುದ್ಯೋಗ ಸಮಸ್ಯೆ ಪೆಡಂಭೂತವಾಗಿ ಎದುರಾಗಲಿದೆ. ಕೊಟ್ಟ ಭರವಸೆಯನ್ನು ಈಡೇರಿಸಲಾಗದೆ ಯುವಜನರ ದಾರಿ ತಪ್ಪಿಸಲು ಸರ್ಕಾರ ಮುಂದಾಗಿದೆ. ಬಡ ಅವಿದ್ಯಾವಂತ ಕುಟುಂಬಗಳಿಂದ ಉದ್ಯೋಗಕಾಂಕ್ಷಿಗಳಾಗಿ ಬರುವ ಯುವಜನರಿಗೆ ಸೇನೆಗೆ ಸೇರುವುದು ಒಂದು ಪ್ರಮುಖ ಆಕರ್ಷಣೆ. ಅದೊಂದು ಅಪಾಯಕಾರಿ ವೃತ್ತಿಯಾಗಿದ್ದರೂ ಗಣನೀಯ ಸಂಖ್ಯೆಯಲ್ಲಿ ಅದು ಉದ್ಯೋಗಗಳನ್ನು ಒದಗಿಸುತ್ತಾ ಬಂದಿದೆ. ಮೋದಿ ಸರ್ಕಾರ ಸೇನಾಕಾಂಕ್ಷಿ ಯುವಕರ ಅಸಹಾಯಕತೆಯ ದುರ್ಲಾಭ ಪಡೆಯಲು ಹುನ್ನಾರ ಹೂಡಿದೆ. ಅವರ ಸೇವಾ ಅವಧಿಯನ್ನು 4 ವರ್ಷಕ್ಕೆ ಇಳಿಸಿ, ಅವರ ಪಿಂಚಣಿಯನ್ನು ರದ್ದುಮಾಡಿ ಉಳಿತಾಯ ಆಗುವ ಹಣವನ್ನು ಕಾರ್ಪೋರೇಟ್ ಕಂಪೆನಿಗಳಿಂದ ಶಸ್ತ್ರಾಸ್ತ್ರ ಖರೀದಿ ಮಾಡಲು ಬಳಸಿಕೊಳ್ಳಲು ಹೊರಟಿದೆ. ಸೇನಾಕಾಂಕ್ಷಿ ಯುವಜನರು ಅಗ್ನಿಪಥ ಎಂಬ ಈ ಯೋಜನೆಯನ್ನು ವ್ಯಾಪಕವಾಗಿ ವಿರೋಧಿಸುತ್ತಿದ್ದಾರೆ.

ನಿತ್ಯಾನಂದಸ್ವಾಮಿ

2014 ರ ಸಾರ್ವತ್ರಿಕ ಚುನಾವಣೆಯ ಸಂದರ್ಭದಲ್ಲಿ ನರೇಂದ್ರ ಮೋದಿಯವರು ವರ್ಷಕ್ಕೆ 2 ಕೋಟಿ ಉದ್ಯೋಗ ಸೃಷ್ಟಿಸುವ ಭರವಸೆ ನೀಡಿದ್ದರು. ಈ ವಾಗ್ದಾನವನ್ನೇನು ಈಡೇರಿಸಲು ಅವರು ಪ್ರಯತ್ನ ಪಡಲಿಲ್ಲ. ಈಗ ಇನ್ನೊಂದು ಚುನಾವಣೆ ಸಮೀಪಿಸುತ್ತಿದೆ. ಮೋದಿಯವರು ಮತ್ತೆ ಚುನಾವಣಾ ರಣರಂಗದಲ್ಲಿ ಅದೇ ಉದ್ಯೋಗಕಾಂಕ್ಷಿ ನಿರುದ್ಯೋಗಿ ಯುವಜನರನ್ನು ಎದುರಿಸಬೇಕಾಗಲಿದೆ. ಇದರಿಂದಾಗಿ ಮೋದಿ ಮತ್ತು ಅವರ ಕ್ಯಾಂಪ್‌ನಲ್ಲಿ ನಡುಕ ಉಂಟಾಗಿದ್ದರೆ ಆಶ್ಚರ್ಯಪಡಬೇಕಾಗಿಲ್ಲ. ಇತ್ತೀಚೆಗೆ ಅಲ್ಲಲ್ಲಿ ನಡೆದ ಚುನಾವಣೆ ಉಪಚುನಾವಣೆಗಳ ಫಲಿತಾಂಶವು ಸಹ ಜನರು ಬದಲಾವಣೆ ಬಯಸುತ್ತಿರುವುದನ್ನೇ ಸೂಚಿಸುತ್ತಿದೆ. ಇದರಿಂದ ಗಾಬರಿಗೊಂಡ ಮೋದಿ ಸರ್ಕಾರ ಇನ್ನಷ್ಟು ಚುನಾವಣಾ ಭರವಸೆಗಳನ್ನು ಹರಿಸಲಾರಂಭಿಸಿದೆ. ಇತ್ತೀಚೆಗೆ ಕೇಂದ್ರ ಸರ್ಕಾರದ ವಿವಿಧ ಸಚಿವಾಲಯಗಳಲ್ಲಿ ಖಾಲಿ ಇರುವ 10 ಲಕ್ಷ ಹುದ್ದೆಗಳನ್ನು ಮುಂದಿನ ಒಂದೂವರೆ ವರ್ಷದಲ್ಲಿ ಭರ್ತಿ ಮಾಡಿಕೊಳ್ಳುವುದಾಗಿ ಮೋದಿರವರು ಘೋಷಣೆ ಮಾಡಿದ್ದಾರೆ. 17.5 ವರ್ಷದೊಳಗಿಂದ 21 ವರ್ಷದೊಳಗಿನ ಯುವಕರಿಗೆ ನಾಲ್ಕು ವರ್ಷಗಳವರೆಗೆ ಸೇನೆಯಲ್ಲಿ ಸೇವೆ ಸಲ್ಲಿಸಲು ಅವಕಾಶ ಕಲ್ಪಿಸುವ 'ಅಗ್ನಿ ಪಥ' ಎಂಬ ಯೋಜನೆಯನ್ನು ಘೋಷಿಸಲಾಗಿದೆ ಎಂದು ಹೇಳಲಾಗುತ್ತಿದೆ. 2019 ರಿಂದ ಈಚೆಗೆ ದೇಶದಲ್ಲಿ ನಿರುದ್ಯೋಗ ಪ್ರಮಾಣ ದಾಖಲೆಯ ಏರಿಕೆಯನ್ನು ಕಂಡಿದೆ. ನಿರುದ್ಯೋಗ ಪ್ರಮಾಣ ಶೇ. 7.60 ರಿಂದ ಶೇ. 7.83 ಕ್ಕೆ ಏರಿಕೆಯಾಗಿದೆ. ಈ ಹೊಸ ಸೇನಾ ನೇಮಕಾತಿ ಯೋಜನೆ ಜಾರಿಗೆ ತರುವುದರಿಂದ ನಿರುದ್ಯೋಗಿಗಳಿಗೆ ಉದ್ಯೋಗ ಸಿಗುವ ಸಾಧ್ಯತೆ ಇಲ್ಲ. ಆದ್ದರಿಂದಲೇ ದೇಶದ ಯುವ ಜನರು ಪಕ್ಷಾತೀತರಾಗಿ, ಮತಭೇದವೂ ಇಲ್ಲದೆ ಅಗ್ನಿಪಥವನ್ನು ವಿರೋಧಿಸುತ್ತಿರುವುದನ್ನು ಗಮನಿಸಿದರೆ ಮೋದಿ ಸರ್ಕಾರದ ವೈಫಲ್ಯಕ್ಕೆ ಇದು ಬಲವಾದ ಸಾಕ್ಷಿಯಾಗಲಿರುವ ಸಾಧ್ಯತೆಯೇ ಹೆಚ್ಚು. ಮೋದಿರವರ ಈ ಅಗ್ನಿಪಥ ಬೆಂಕಿಯೊಂದಿಗಿನ ಸರಸವಾಗಿ ಚರಿತ್ರೆಯಲ್ಲಿ ದಾಖಲಾಗಲಿದೆ.

ದೇಶದ ವಿವಿಧೆಡೆ ಕಳೆದೆರಡು ವರ್ಷಗಳಿಂದ ಕೊರೊನಾ ಸಾಂಕ್ರಾಮಿಕದಿಂದ ಸ್ಥಗಿತಗೊಂಡ ಸೇನಾ ರ್‍ಯಾಲಿಗಳ ಪುನರಾರಂಭಕ್ಕೆ ಬಡ ಕುಟುಂಬಗಳಿಂದ ಬಂದ ಯುವಜನರು ಕಾಯುತ್ತಿದ್ದರು. ಸೈನ್ಯಕ್ಕೆ ಸೇರಿ ದೇಶದ ಗಡಿ ರಕ್ಷಣೆ ಕಾರ್ಯದಲ್ಲಿ ತೊಡಗಿ ತಮ್ಮ ಜೀವದ ಹಂಗು ತೊರೆದು ಅತ್ಯಂತ ಪ್ರತಿಕೂಲ ಪರಿಸ್ಥಿತಿಯಲ್ಲಿ ದೇಶದ ಗಡಿಗಳನ್ನು ಕಾಯುವವರು ನಮ್ಮ ಯೋಧರು, ಇವರು ದೇಶ ಪ್ರೇಮದ ಪಾಠವನ್ನು ಕೋಮು ದ್ವೇಷವನ್ನು ಬಿತ್ತಿ ಬೆಳೆಸುತ್ತಿರುವ ಕೋಮುವಾದಿ ಸರ್ಕಾರದಿಂದ ಕಲಿಯುವುದೇನಿಲ್ಲ. ದೇಶ ಪ್ರೇಮದ ಹೆಸರಿನಲ್ಲಿ ಬಿಜೆಪಿ ಕೇಂದ್ರ ಸರ್ಕಾರ ಸೇನೆಯಲ್ಲಿ ಆರೆಸ್ಸೆಸ್ ಕರಾಳ ಮನಸ್ಸುಗಳನ್ನು ಬೆಳೆಸುವ ಆತುರದಲ್ಲಿದೆ ಎಂಬುದನ್ನು ದೇಶದ ಜನತೆ ಗುರುತಿಸದೆ ಇರಬಾರದು.

ಅಗ್ನಿಪಥವನ್ನು ವಿರೋಧಿಸುವ ಹೆಸರಿನಲ್ಲಿ ದೇಶದ ಅನೇಕ ರಾಜ್ಯಗಳಲ್ಲಿ ಸಂಭವಿಸಿದ ಹಿಂಸಾಚಾರ ಖೇದದ ಸಂಗತಿಯಾಗಿದೆ. ನೋಡು ನೋಡುತ್ತಿದ್ದಂತೆ ಜನರ ಆಕ್ರೋಶ ಬಿಹಾರ, ಉತ್ತರ ಪ್ರದೇಶ, ಮಧ್ಯಪ್ರದೇಶ, ಹರ್ಯಾಣ, ದೆಹಲಿ, ಜಮ್ಮು, ಜಾರ್ಖಂಡ್, ಒಡಿಶಾ, ರಾಜಸ್ಥಾನ, ಪಶ್ಚಿಮ ಬಂಗಾಳ, ತೆಲಂಗಾಣ, ಕರ್ನಾಟಕ ಮೊದಲಾದ ರಾಜ್ಯಗಳಿಗೆ ಹರಡಿಕೊಂಡಿತು. ಕಲ್ಲು ತೂರಾಟ, ಪೊಲೀಸರ ಲಾಠಿ ಪ್ರಹಾರದಿಂದ ಹಲವರು ಗಾಯಗೊಂಡರು. ತೆಲಂಗಾಣದಲ್ಲಿ ಪೊಲೀಸರು ನಡೆಸಿದ ಗೋಲಿಬಾರ್‌ನಲ್ಲಿ ಇಬ್ಬರು ಅಮಾಯಕರು ಅಸುನೀಗಿದ್ದಾರೆ. ಕೆಲವು ರೈಲು ಬೋಗಿಗಳಿಗೆ ಪ್ರತಿಭಟನಾಕಾರರು ಬೆಂಕಿ ಇಟ್ಟಿದ್ದಾರೆ. ಹಿಂಸಾಚಾರವನ್ನು ಒಳಗೊಂಡ ಪ್ರತಿಭಟನೆಗಳು ಸ್ವಯಂಪ್ರೇರಿತವಾಗಿ ಇನ್ನೂ ಮರುಕಳಿಸುತ್ತಿವೆ.

ಸರ್ಕಾರದಿಂದ ಈ ಸೇನಾ ನೇಮಕಾತಿ ಯೋಜನೆ ಯುವಜನರಲ್ಲಿ ಸೇನೆಗೆ ಸೇರುವ, ದೇಶಕ್ಕಾಗಿ ತ್ಯಾಗ ಮಾಡುವ ಯಾವ ಉತ್ಸಾಹವನ್ನು ಮೂಡಿಸುವುದಿಲ್ಲ. ಇದು ತರಬೇತಿಯನ್ನೂ ಒಳಗೊಂಡಂತೆ ಕೇವಲ 4 ವರ್ಷಗಳ ಒಪ್ಪಂದದ ಸೇವೆ, ಈ ಅವಧಿಯಲ್ಲಿ ಅವರಿಗೆ ಮಾಸಿಕ ತಲಾ 30,000 ರಿಂದ 40,000 ರೂ. ನೀಡಲಾಗುತ್ತದೆ. ಜತೆಗೆ ವೈದ್ಯಕೀಯ ಮತ್ತು ವಿಮಾ ಸೌಲಭ್ಯಗಳನ್ನು ನೀಡಲಾಗುತ್ತದೆ. ಆದರೆ 4 ವರ್ಷಗಳ ನಂತರ ಅವರು ನಿವೃತ್ತಿಯಾದಾಗ ಅವರಿಗೆ ಪಿಂಚಣಿ ಇರುವುದಿಲ್ಲ. "4 ವರ್ಷಗಳ ನಂತರ ನಾವೆಲ್ಲಿಗೆ ಹೋಗಬೇಕು" ಎಂದು ಪ್ರತಿಭಟನಾಕಾರರು ಆಕ್ರೋಶಭರಿತರಾಗಿ ಕೇಳುತ್ತಾರೆ. ಅವರಿಗೆ ಉತ್ತರ ಕೊಡುವವರು ಯಾರೂ ಇಲ್ಲದಿರುವುದರಿಂದ ಅವರು ಹಿಂಸಾಚಾರಕ್ಕೆ ಇಳಿಯುತ್ತಾರೆ. 4 ವರ್ಷಗಳ ಸೇನೆಯ ಸೇವೆಯ ನಂತರ ಇವರು ಬೇರೆ ಉದ್ಯೋಗಕ್ಕಾಗಿ ತಮ್ಮ ಅಧ್ಯಯನವನ್ನು ಮುಂದುವರೆಸಬೇಕು. ಹಾಗೆ ತಮ್ಮ ಓದನ್ನು ಮುಂದುವರೆಸಲು ಮುಂದಾದಾಗ ಅವರು ತಮ್ಮ ವಯಸ್ಸಿ ಇತರರಿಗಿಂದ ಹಿಂದೆ ಉಳಿಯುತ್ತಾರೆ. ಸೇನೆಯನ್ನು ಸೇರಲು ಇವರು ವರ್ಷಗಳಿಂದ

ಪುಟ 10 ಕ್ಕೆ









“ಹುಲು ಜೀವಿ”ಗಳು ಕಾನೂನು ವ್ಯವಸ್ಥೆಗೆ ಅತೀತರಾಗಿರುವ ಭಾರತ ದೇಶದಲ್ಲಿ....

ಭಾರತ, ತನ್ನ ಸ್ವಾತಂತ್ರ್ಯದ 75 ನೇ ವರ್ಷದಲ್ಲಿ, ಒಂದು ಜಾತ್ಯತೀತ ದೇಶದ ಶಕ್ತಿ ಮತ್ತು ವೈವಿಧ್ಯಮಯ ಜನತೆಯ ಸಾವಯುವ ಏಕತೆಯನ್ನು ಪ್ರದರ್ಶಿಸಲು ಸಾಧ್ಯವಾಗುವ ಬದಲು, ಜೀವನದ ಎಲ್ಲಾ ಕ್ಷೇತ್ರಗಳಲ್ಲಿ ಉತ್ತೇಜಿಸಿರುವ ಇಸ್ಲಾಮೋಭಯ ರೋಗಕ್ಕೆ ಮತ್ತು ಧರ್ಮಾಂಧತೆಯ ಸಿದ್ಧಾಂತ ಮತ್ತು ಸಂಸ್ಕೃತಿಗಳಿಗೆ ಭಾರತವು ಬಹಳಷ್ಟು ಬೆಲೆ ತೆರಬೇಕಾಗಿ ಬಂದಿದೆ. ಪ್ರಬಲವಾದ ಕೇಂದ್ರ ಸರ್ಕಾರವು ತಾನೇ “ಫ್ರಿಂಜ್ ಎಲಿಮೆಂಟ್ಸ್” ಅಂದರೆ “ಹುಲು ಜೀವಿ”ಗಳೆಂದು ವರ್ಣಿಸಿದ ಆಳುವ ಪಕ್ಷದ ವಕ್ತಾರದ್ವಯರನ್ನು ಕಾನೂನಿನ ವ್ಯಾಪ್ತಿಯನ್ನು ಮೀರಿ ನಿಲ್ಲುವ ಸ್ಥಾನಕ್ಕೆ ಏರಿಸಿದೆ ಎಂಬುದು ಭಾರತದ ಜಾಗತಿಕ ಇಮೇಜಿಗೆ ವಿಶ್ವಾಸಾರ್ಹತೆಯನ್ನೇನೂ ನೀಡುವುದಿಲ್ಲ.

ಬೃಂದಾ ಕಾರತ್



“ನೋಡಿ, ಹುಲುಜೀವಿ”–ವ್ಯಂಗ್ಯಚಿತ್ರ: ಸತೀಶ ಆಚಾರ್ಯ

ಭಾರತದಾದ್ಯಂತ ಬಿಜೆಪಿ ಆಳ್ವಿಕೆಯ ರಾಜ್ಯಗಳಲ್ಲಿ ಯಾವುದೇ ಕಾನೂನು ಪ್ರಕ್ರಿಯೆಯಿಲ್ಲದೇನೇ ಮುಸ್ಲಿಮರನ್ನು ‘ಗಲಭೆಕೋರರು’ ಎಂದು ಆರೋಪಿಸಿ ನಡೆಸುತ್ತಿರುವ ಅವರ ಮನೆಗಳ ಬುಲ್‌ಡೋಜರ್ ಧ್ವಂಸ ಕಾರ್ಯವನ್ನು ಹೋಲುವ ಕೆಲವು ನಿದರ್ಶನಗಳು ಚರಿತ್ರೆಯಲ್ಲಿ ಕಾಣಸಿಗುತ್ತವೆ. ನವಂಬರ್ 9–10, 1938ರಂದು ನಾಝೀ ಜರ್ಮನಿಯಲ್ಲಿ ಹಿಟ್ಲರನ ಪಕ್ಷದ ಫ್ಯಾಸಿಸ್ಟ್ ಗ್ಯಾಂಗುಗಳು ಚಮ್ಮಟಿಗೆಗಳನ್ನು ಹಿಡಿದು ಯೆಹೂದಿಗಳ ಸೊತ್ತುಗಳನ್ನು ಹಾಳುಗೆಡಹುವ ರಂಪಾಟ ನಡೆಸಿದರು, ‘ಕೃಪಾಳು’ ಪೋಲಿಸರ್ ಪಡೆ ನೋಡುತ್ತ ನಿಂತಿತ್ತು. ಆ ಭೀಕರ ದಿನಗಳನ್ನು ‘ಕ್ರಿಸ್ಟಲ್ನಾಖ್ಟ್’(ಅಂದರೆ ಒಡೆದ ಗಾಜುಗಳ ರಾತ್ರಿ) ಎಂದು ಕರೆಯಲಾಗುತ್ತದೆ. ಯೆಹೂದಿಯರ ಒಡೆತನದ ಅಂಗಡಿಗಳು, ಕಟ್ಟಡಗಳು, ಪ್ರಾರ್ಥನಾ ಮಂದಿರಗಳ ಕಿಟಕಿ, ಬಾಗಿಲುಗಳ ಗಾಜುಗಳು ಪುಡಿ–ಪುಡಿಯಾಗಿ ಬೀದಿಗಳಲ್ಲಿ ಹರಡಿ ಹೋಗಿದ್ದ ದಿನಗಳವು.

ಇಲ್ಲಿ, ಭಾರತದಲ್ಲಿ, ಗಲಭೆಕೋರರಲ್ಲ, ಪ್ರಭುತ್ವವೇ ಫಿರ್ಯಾದಿ, ವಕೀಲ, ನ್ಯಾಯಾಧೀಶ ಮತ್ತು ಗಲ್ಲಿಗೇರಿಸುವವನಾಗುವ ಹಕ್ಕನ್ನು ತಾನೇ ಆವಾಹಿಸಿಕೊಂಡಿದೆ, ಈ ದೇಶದ ಆಳ್ವಿಕೆ ಕಾಯ್ದೆ ಕಾನೂನುಗಳು ಅಥವ ಸಂವಿಧಾನದ ಮೂಲಕ ನಡೆಯದೆ, ದೈವಿಕ ಶಕ್ತಿಗಳುಳ್ಳ ಒಬ್ಬ ಸಾಮ್ರಾಟನಿಂದ ನಡೆಯುತ್ತಿದೆಯೋ ಎಂದನಿಸುವಂತಾಗಿದೆ. ಇದು ಅತ್ಯಂತ ಖಂಡನೀಯ.

ರಾಂಚಿ, ಹೌರಾ ಮತ್ತು ಇತರ ಕೆಲವು ಸ್ಥಳಗಳಲ್ಲಿ ಶುಕ್ರವಾರ ನಮಾಜ್ ನಂತರ ನಡೆದ ಪ್ರತಿಭಟನೆಯ ಸಮಯದಲ್ಲಿ ಭುಗಿಲೆದ್ದ ಹಿಂಸಾಚಾರವು ಹೆಚ್ಚು ಕಡಿಮೆ ನಿಯಂತ್ರಣಕ್ಕೆ ಬಂದಿದೆ. ಈ ಸಂದರ್ಭದಲ್ಲಿ ಕನಿಷ್ಠ ಮೂರು ಸಾವುಗಳು ಹಾಗೂ ಪೊಲೀಸರಿಗೆ ಮತ್ತು ಅನೇಕರಿಗೆ ಗಾಯಗಳಾಗಿರುವುದು ದುರದೃಷ್ಟಕರ. ಪ್ರವಾದಿ ಮೊಹಮ್ಮದ್ ವಿರುದ್ಧದ ಕೋಮುವಾದಿ, ಆಕ್ಷೇಪಾರ್ಹ ಹೇಳಿಕೆಗಳಿಗಾಗಿ ಬಿಜೆಪಿಯ ಮಾಜಿ ವಕ್ತಾರರುಗಳನ್ನು ಬಂಧಿಸದಿರುವುದರ ವಿರುದ್ಧದ ಪ್ರತಿಭಟನೆಗಳು ನ್ಯಾಯಸಮ್ಮತವಾಗಿವೆ ಮತ್ತು ಸಮುದಾಯದಲ್ಲಿನ ಕೋಪವನ್ನು ಪ್ರತಿಬಿಂಬಿಸುತ್ತವೆಯಾದರೂ, ಹಿಂಸಾಚಾರದ ಘಟನೆಗಳು ಕೆಲವೆಡೆಗಳಲ್ಲಿ ಮಾತ್ರ ನಡೆದಿದ್ದರೂ ಸಹ, ಧ್ರುವೀಕರಣ ಮತ್ತು ವಿಭಜನೆಯಲ್ಲಿಯೇ ತಮ್ಮ ಏಳಿಗೆ ಕಾಣುವ ಬಹುಸಂಖ್ಯಾತವಾದೀ ಕೋಮುವಾದಿ ಶಕ್ತಿಗಳ ಆಟದ ಗೊಂಬೆಯಾಗಿ ಬಿಡುತ್ತದೆ. ಇಲ್ಲಿಯವರೆಗೆ ಸಮುದಾಯದೊಳಗಿನ ವಿವೇಕಯುತ ಧ್ವನಿಗಳು ಮೇಲುಗೈ ಪಡೆದಿದ್ದು ಮೂಲಭೂತವಾದಿ ಉಗ್ರಗಾಮಿ ಗುಂಪುಗಳು ದುಷ್ಚೇಷ್ಟೆ ನಡೆಸದಂತೆ ತಡೆದಿವೆ.

ಆಳುವ ಮಂದಿಯ ಅಭಯ ಹಸ್ತ

ಸುಮಾರು ಎರಡು ವಾರ ಕಳೆದರೂ ಆ ಮಾಜಿ ವಕ್ತಾರರುಗಳನ್ನು ಬಂಧಿಸದಿರುವುದು ನಾಚಿಕೆಗೇಡಿನ ಸಂಗತಿ. ಇದಕ್ಕೆ ವ್ಯತಿರಿಕ್ತವಾಗಿ, ನೇರವಾಗಿ ಗೃಹ ಸಚಿವಾಲಯದ ಅಡಿಯಲ್ಲಿರುವ ದೆಹಲಿ ಪೊಲೀಸರು ಎರಡು ಎಫ್‌ಐಆರ್‌ಗಳನ್ನು ದಾಖಲಿಸಿದ್ದು, ಇದರಲ್ಲಿ ಈ ವಿಷಯಕ್ಕೆ ಯಾವುದೇ ಸಂಬಂಧವಿಲ್ಲದ ಪತ್ರಕರ್ತೆ ಸಬಾ ನಖ್ವಿ ಸೇರಿದಂತೆ 32 ವ್ಯಕ್ತಿಗಳ ಹೆಸರುಗಳನ್ನು ಕೂಡ ಸೇರಿಸಿದ್ದಾರೆ. ಪೊಲೀಸರ ಈ ಖಂಡನೀಯ ಪಕ್ಷಪಾತವು ಬಿಜೆಪಿಯ ವಕ್ತಾರರುಗಳು ಮಾಡಿದ ಅಪರಾಧದ ಅಗಾಧತೆಯನ್ನು ಕ್ಷುಲ್ಲಕಗೊಳಿಸಲು ಮತ್ತು ಅವರಿಗೆ ಹೆಚ್ಚುತ್ತಿರುವ ‘ಸಂಘ’ದ ಬೆಂಬಲದ ಗಾನ ಗೋಷ್ಠಿಯನ್ನು ತುಷ್ಟೀಕರಿಸುವ ಪ್ರಯತ್ನ ಎಂಬುದು ಸ್ಪಷ್ಟ. ಇನ್ನಷ್ಟು ವಿಳಂಬ ಮಾಡದೆ ಈ ವಕ್ತಾರದ್ವಯರ ವಿರುದ್ಧ ಕಾನೂನು ಕ್ರಮ ಕೈಗೊಳ್ಳಬೇಕು ಮತ್ತು ನಖ್ವಿ ಮತ್ತು ಇತರರ ವಿರುದ್ಧದ ಸುಳ್ಳು ಎಫ್‌ಐಆರ್ ನ್ನು ಹಿಂಪಡೆಯಬೇಕು.

ಬಿಜೆಪಿ ನಾಯಕರು ಭಾರತದ ಮುಸ್ಲಿಮರ ಸಮಾನ ಪೌರತ್ವವನ್ನು ಕಸಿದುಕೊಳ್ಳಬೇಕೆಂದು ಭಂಡತನದಿಂದ ಅತ್ಯಂತ ಅಸಹ್ಯಕರ ಮತ್ತು ಪ್ರಚೋದನಕಾರಿ ಹೇಳಿಕೆಗಳನ್ನು ನೀಡುತ್ತಲೇ ಇರುವುದು ಅವರಿಗೆ ಪ್ರಭುತ್ವದ, ಸರಕಾರದ ಮತ್ತು ಆಳುವ ಪಕ್ಷದ ಅಭಯ ಹಸ್ತ ಇದೆ ಎಂಬುದನ್ನು ತೋರಿಸುತ್ತದೆ. ಮಾಲೆಗಾಂವ್ ಭಯೋತ್ಪಾದಕ ಬಾಂಬ್ ದಾಳಿ ಪ್ರಕರಣದ ಆರೋಪಿ, ಬಿಜೆಪಿ ಸಂಸದೆ ಪ್ರಜ್ಞಾ ಠಾಕೂರ್ ಅವರು ಪ್ರವಾದಿ ಮೊಹಮ್ಮದ್ ವಿರುದ್ಧ ನೂಪುರ್ ಶರ್ಮಾ ಅವರ ಕೋಮುವಾದಿ ಆಕ್ರಮಣಕಾರಿ ಆರ್ಭಟವನ್ನು ಬೆಂಬಲಿಸಿದ್ದಲ್ಲದೆ, "ಕಮ್ಯುನಿಸ್ಟರು" ಮತ್ತು "ನಾಸ್ತಿಕರು" ಹಿಂದೂ ದೇವ–ದೇವತೆಗಳನ್ನು ಅವಮಾನಿಸುತ್ತಾರೆ ಎಂಬ ಅತ್ಯಂತ ವಿಲಕ್ಷಣವಾದ ಹೇಳಿಕೆ ನೀಡಿದ್ದಾರೆ. "ಈ ನಾಸ್ತಿಕರು ಯಾವಾಗಲೂ ಹೀಗೇಯೆ. ಅವರಿಗೆ ಕಮ್ಯುನಿಸ್ಟ್ ಇತಿಹಾಸವಿದೆ ... ಇದು ಭಾರತ, ಇದು ಹಿಂದೂಗಳಿಗೆ ಸೇರಿದ್ದು, ಮತ್ತು ಸನಾತನ ಧರ್ಮ ಮಾತ್ರ ಇಲ್ಲಿ ಉಳಿಯುತ್ತದೆ. ಅದನ್ನು ಜೀವಂತವಾಗಿಡುವುದು ನಮ್ಮ ಜವಾಬ್ದಾರಿ, ಅದನ್ನು ನಾವು ಖಂಡಿತವಾಗಿ ನಿಭಾಯಿಸುತ್ತೇವೆ" ಎಂದು ಈಕೆ ಹೇಳಿರುವುದಾಗಿ ವರದಿಯಾಗಿದೆ.

ಇಲ್ಲ, ಪ್ರಜ್ಞಾ ಠಾಕೂರ್ ಅವರೇ,

ಭಾರತವು ಯಾವುದೇ ಒಂದು ಧರ್ಮವನ್ನು ನಂಬುವವರಿಗೆ ಸೇರಿಲ್ಲ. ಇದು ನಮ್ಮ ಸಂವಿಧಾನ ಸೂಕ್ತವಾಗಿ ಹೇಳಿರುವಂತೆ "ನಾವು, ಭಾರತದ ಜನರು" ಇವರಿಗೆ ಸೇರಿದ್ದು. ಮತ್ತು ಪ್ರಜ್ಞಾ ಠಾಕುರ್ ಅವರೇ, "ಸನಾತನ ಧರ್ಮ" ಖಂಡಿತವಾಗಿಯೂ ಮುತ್ತಿಗೆಗೆ ಒಳಗಾಗಿಲ್ಲ. ಅದನ್ನು "ಜೀವಂತವಾಗಿ" ಇರಿಸಿಕೊಳ್ಳಲು ನಿಮ್ಮ ಮತ್ತು ನಿಮ್ಮ ಸಹವರ್ತಿಗಳ ಅಗತ್ಯವೇನೂ ಇಲ್ಲ. ಅದು ತಂತಮ್ಮ ಆಯ್ಕೆಯ ದೇವ–ದೇವತೆಗಳನ್ನು ಪೂಜಿಸುವ ಕೋಟ್ಯಂತರ ಶಾಂತಿ–ಪ್ರಿಯ ಹಿಂದೂಗಳ ಬಹುತ್ವದ ನಂಬಿಕೆಗಳು, ಆಚರಣೆಗಳು ಮತ್ತು ಸಂಸ್ಕೃತಿಗಳಲ್ಲಿ ಜೀವಂತವಾಗಿದೆಯೇ ವಿನಃ ನಿಮ್ಮ ಸಿದ್ಧಾಂತವು ಸೃಷ್ಟಿಸುವ ಮತ್ತು ನೀವು ಭಾರತದಲ್ಲೆಲ್ಲಾ ಹೇರಬಯಸುವ ಶ್ರೇಣಿವ್ಯವಸ್ಥೆಯ ಪ್ರಕಾರ ಅಲ್ಲ. ಸಾವರ್ಕರ್ ಪ್ರತಿಪಾದಿಸಿದ "ಹಿಂದುತ್ವವನ್ನು ಮಿಲಿಟರೀಕರಣಗೊಳಿಸುವುದು" ಮತ್ತು "ರಾಜಕೀಯವನ್ನು ಹಿಂದೂಕರಣಗೊಳಿಸುವುದು" ಎಂಬ ನಿಮ್ಮ ಸಿದ್ಧಾಂತದ ಅನುಷ್ಠಾನವೇ ಹಿಂದೂ ದೇವ– ದೇವತೆಗಳಿಗೆ ಮಾಡುತ್ತಿರುವ ಅತ್ಯಂತ ದೊಡ್ಡ ಅವಮಾನ. ಅವರಿಗೆ ಅವಮಾನವಾಗುವುದು, ಅವರನ್ನು ಕ್ಷುಲ್ಲಕಗೊಳಿಸುವುದು ನಿಮ್ಮಂತಹ ನಾಯಕರಿಂದ ಪ್ರೇರಿತರಾದ ಭಂಡರು ಬೀದಿಬದಿ ವ್ಯಾಪಾರಿಗಳು, ಫಕೀರರು, ಕೊಳೆಗೇರಿ ನಿವಾಸಿಗಳಂತಹ ಬಡ ಮುಸ್ಲಿಮರ ಮೇಲೆ ಹೇಡಿತನದಿಂದ ಹಲ್ಲೆ ನಡೆಸಿ "ಜೈ ಶ್ರೀ ರಾಮ್" ಎಂದು ಯುದ್ಧವೊಂದರ ವಿಜೇತರು ಬಂಧಿಗಳನ್ನು ಬಡಿದು ಹೇಳುವಂತೆ ಮಾಡುವಾಗ.

ನೀವು ಪ್ರತಿದಿನವೂ ಅವಮಾನಿಸುತ್ತಿರುವ ಧರ್ಮದ ರಕ್ಷಣೆಯ ಭಾರವನ್ನು ಹೊತ್ತಿದ್ದೇವೆ ಎಂದು ಅಹಂಕಾರ ಪಡುವುದನ್ನು ನಿಲ್ಲಿಸಿ. ಭಾರತದಲ್ಲಿ ಒಂದು ಮತೀಯ ಪ್ರಭುತ್ವವನ್ನು ಸಾಧಿಸುವ ನಿಮ್ಮ ಸಂವಿಧಾನ ವಿರೋಧಿ ಗುರಿಯನ್ನು ಸಾಧಿಸಲು ಅದನ್ನು ರಾಜಕೀಯ ಸಾಧನವಾಗಿ ಬಳಸಿಕೊಳ್ಳುತ್ತಿದ್ದೀರಿ ಅಷ್ಟೇ. ಭಾರತೀಯ ಮುಸ್ಲಿಮರು ಪಾಕಿಸ್ತಾನಕ್ಕೆ ಹೋಗಬೇಕು ಎಂದು ನೀವು ದ್ವೇಷಪೂರಿತ ಘೋಷಣೆಗಳನ್ನು ಹಾಕುತ್ತಿರುವುದು ಮತೀಯ ಗ್ರಂಥಗಳ ಮೇಲಿಂದ ಆಳುತ್ತಿರುವ ಅಂತಹ ಒಂದು ಸಮಾಜದ ಪ್ರತಿಬಿಂಬವನ್ನು ಇಲ್ಲಿ ಸೃಷ್ಟಿಸಲು ನೀವು ಬಯಸುತ್ತಿರುವುದರಿಂದಲೇ. ನೀವು, ನಮ್ಮ ಸಂವಿಧಾನದ ಮೂಲಕ ಸ್ವಲ್ಪ ಮಟ್ಟಿಗೆ ಸಾಕಾರಗೊಂಡಿರುವ, ಭಾರತದ ಸ್ವಾತಂತ್ರ್ಯಕ್ಕಾಗಿ ತಮ್ಮ ಸರ್ವಸ್ವವನ್ನೂ ತ್ಯಾಗ ಮಾಡಿದವರ ಆಶಯಗಳನ್ನು ಇಲ್ಲವಾಗಿಸ ಬಯಸುತ್ತಿದ್ದೀರಿ. ನೀವು ಮತ್ತು ನಿಮ್ಮ ಸೈದ್ಧಾಂತಿಕ ಪೂರ್ವಜರು ಭಾರತದ ಸ್ವಾತಂತ್ರ್ಯ ಸಮರದ ಸಮಯದಲ್ಲಿ ಭಾರತವನ್ನು ಯಾವ ಮನುಸ್ಮೃತಿಯ ಆಧಾರದ ರಾಷ್ಟ್ರವನ್ನಾಗಿ ಮಾಡುವಲ್ಲಿ ವಿಫಲರಾಗಿದ್ದೀರೋ, ಅದನ್ನು ಈಗ ಅನುಷ್ಠಾನಗೊಳಿಸ ಬಯಸುತ್ತಿದ್ದೀರಿ.. ದಯವಿಟ್ಟು, ಒಂದು ಧರ್ಮವನ್ನು ರಾಕ್ಷಸೀಕರಿಸುವ ಬದಲು, ಸತಿ ಪದ್ಧತಿ, ಬಾಲ್ಯವಿವಾಹ, ವಿಧವೆಯರಿಗೆ ಕ್ರೌರ್ಯ, ಸಾಮಾಜಿಕ ಬಹಿಷ್ಕಾರದಂತಹ ಇನ್ನೂ ಎಷ್ಟೋ ಆಚರಣೆಗಳನ್ನು ಅನೇಕ ನಾಯಕರು ಧರ್ಮದ ಹೆಸರಿನಲ್ಲಿ, ಎಲ್ಲ ಧರ್ಮಗಳಲ್ಲೂ ಹೇಗೆ ನಡೆಸುತ್ತಿದ್ದರು ಮತ್ತು ಸಮರ್ಥಿಸುತ್ತಿದ್ದರು ಎಂಬುದನ್ನು ಅರ್ಥಮಾಡಿಕೊಳ್ಳಲು ಇತಿಹಾಸವನ್ನು ಅಧ್ಯಯನ ಮಾಡಿ.

ಕಮ್ಯುನಿಸ್ಟರ ಹೆಮ್ಮೆಯ ದಾಖಲೆ

ಕಮ್ಯುನಿಸ್ಟರು ಧಾರ್ಮಿಕ ನಂಬಿಕೆಯ

ಪುಟ 10 ಕ್ಕೆ



ವ್ಯಂಗ್ಯಚಿತ್ರಕೃಪೆ: ಪಂಜು ಗಂಗೊಳಿ


ಪ್ರಯಾಗ್ ರಾಜ್‌ನಲ್ಲಿ ಬುಲ್‌ಡೋಜರ್ ಧ್ವಂಸ ಕಾರ್ಯ

ಅಗ್ನಿಪಥ್ ವಿರುದ್ಧ ಹೆಚ್ಚಿದ ರೋಷಾಗ್ನಿ; ದೇಶದ ಎಲ್ಲೆಡೆ ಹಬ್ಬುತ್ತಿರುವ ಕಾವು - ಹೈದರಾಬಾದ್‌ನಲ್ಲಿ ಯುವಕ ಬಲಿ

ಕೇಂದ್ರದ ಬಿಜೆಪಿ ಸರ್ಕಾರದ ನೂತನ ಘೋಷಣೆ ಅಗ್ನಿಪಥ ಯೋಜನೆ ವಿರುದ್ಧ ದೇಶದ ಹಲವು ಕಡೆಗಳಲ್ಲಿ ಪ್ರತಿಭಟನೆ ಉಗ್ರರೂಪ ಪಡೆದುಕೊಳ್ಳುತ್ತಿದೆ. ಇಂದು(ಜೂನ್ 17) ಬೆಳಗ್ಗೆಯಿಂದಲೇ ದೇಶದ ಹಲವಾರು ಭಾಗಗಳಲ್ಲಿ ತೀವ್ರತರವಾಗಿ ಪ್ರತಿಭಟನೆಗಳು ನಡೆಯುತ್ತಿವೆ. ಯುವ ಸಮುದಾಯಕ್ಕೆ ಮಾರಕವಾದ ಯೋಜನೆಯನ್ನು ಹಿಂಪಡೆಯಬೇಕೆಂದು ಯುವಕರು ಬೀದಿಗಿಳಿದು ಹೋರಾಡುತ್ತಿದ್ದಾರೆ. ಬಿಹಾರ್ ನಿಂದ ಹಿಡಿದು ತೆಲಂಗಾಣವರೆಗೆ ತೀವ್ರ ಪ್ರತಿಭಟನೆಗಳು ನಡೆಯುತ್ತಿವೆ.

ಯೋಜನೆ ರದ್ದುಗೊಳಿಸಬೇಕೆಂದು ಸಿಕಂದರಾಬಾದ್‌ನಲ್ಲಿ ಪ್ರತಿಭಟನೆ ನಡೆಸುತ್ತಿದ್ದ ಸಂದರ್ಭದಲ್ಲಿ ಪೊಲೀಸರ ಮೇಲೆ ಕಲ್ಲು ತೂರಾಟ ನಡೆಸಿದ್ದರಿಂದ ಪ್ರತಿಭಟನಾಕಾರರ ಮೇಲೆ ಗುಂಡು ಹಾರಿಸಿದರು. ಈ ವೇಳೆ ಘಟನೆಯಲ್ಲಿ ಒಬ್ಬರು ಸಾವನ್ನಪ್ಪಿದ್ದು, ಕನಿಷ್ಟ ಎಂಟು ಮಂದಿ ಗಾಯಗೊಂಡಿದ್ದಾರೆ ಎಂದು ತಿಳಿದು ಬಂದಿದೆ. ಗಾಯಾಳುಗಳನ್ನು ಚಿಕಿಯತ್ಸೆಗೆ ದಾಖಲಿಸಲಾಗಿದ್ದು, ಅವರಲ್ಲಿ ಇಬ್ಬರ ಸ್ಥಿತಿ ಚಿಂತಾಜನಕವಾಗಿದೆ ಎಂದು ಪೊಲೀಸರು ತಿಳಿಸಿದ್ದಾರೆ. ಮೃತಪಟ್ಟ ಯುವಕ ನಿರ್ಮಲ್ ನಿವಾಸಿ ದಾಮೋದರ ಕುರಷಿಯಾ ಎಂದು ಗುರುತಿಸಲಾಗಿದೆ.

ಪ್ರತಿಭಟನಾಕಾರರು ಪೊಲೀಸರು ಮತ್ತು ರೈಲುಗಳ ಮೇಲೆ ಕಲ್ಲು ತೂರಾಟ ನಡೆಸಿದ್ದರಿಂದ ಸಿಕಂದರಾಬಾದ್ ರೈಲ್ವೆ ನಿಲ್ದಾಣ ರಣರಂಗವಾಗಿದೆ. ಪ್ರತಿಭಟನಾಕಾರರನ್ನು ಚದುರಿಸಲು ಪೊಲೀಸರು ಗಾಳಿಯಲ್ಲಿ ಗುಂಡು ಹಾರಿಸಿದ್ದರಿಂದ, ನೂಕುನುಗ್ಗಲಾಗಿದ್ದು, ಹಲವಾರು ಯುವಕರು ಗಾಯಗೊಂಡಿದ್ದಾರೆ. ಅಗ್ನಿಪಥ್ ಯೋಜನೆ ರದ್ದುಗೊಳಿಸಿ ಎಂದಿನಂತೆ ಸೇನಾ ನೇಮಕಾತಿ ನಡೆಸಬೇಕು ಎಂದು ಯುವಕರು ಆಗ್ರಹಿಸುತ್ತಿದ್ದಾರೆ.

ತೆಲಂಗಾಣದ ಹೈದರಾಬಾದ್‌ನ ಸೇನಾ ನೇಮಕಾತಿ ಮಂಡಳಿಗೆ ತೆರಳಿ, ಅಲ್ಲಿಂದ ರೈಲ್ವೆ ನಿಲ್ದಾಣಕ್ಕೆ ಬಂದ ಪ್ರತಿಭಟನಾಕಾರರು ಹೋರಾಟಕ್ಕೆ ಮುಂದಾಗಿದ್ದಾರೆ. ಈ ಸಂದರ್ಭ ಹೋರಾಟದ ಕಾವು ಜೋರಾಗಿತ್ತು. ಸಿಕಂದರಾಬಾದ್ ರೈಲ್ವೆ ಸ್ಟೇಷನ್ ನಲ್ಲಿ ನಿಂತಿದ್ದ ರೈಲೊಂದಕ್ಕೆ ಬೆಂಕಿ ಹಚ್ಚಲಾಗಿದೆ. ಅಲ್ಲದೆ ರೈಲ್ವೆ ಸ್ಟೇಷನ್ ಗೆ ಹಾನಿ ಮಾಡಲಾಗಿದೆ.

ಸಿಕಂದರಾಬಾದ್ ಗಲಭೆ ಭುಗಿಲೆದ್ದ ನಂತರದಲ್ಲಿ ರಾಜ್ಯದ ಇತರ ರೈಲು ನಿಲ್ದಾಣಗಳಲ್ಲಿ ಭದ್ರತೆಗಾಗಿ ಪೊಲೀಸ್ ಪಡೆಗಳನ್ನು ನಿಯೋಜಿಸಲಾಗಿದೆ. ವಿಶೇಷವಾಗಿ ನಾಂಪಲ್ಲಿ, ವಾರಂಗಲ್, ಮಹಬೂಬಾಬಾದ್, ಕಾಜಿಪೇಟ್, ಜನಗಾಮ, ಡೋರ್ನಕಲ್ ರೈಲು ನಿಲ್ದಾಣಗಳಲ್ಲಿ ಬಿಗಿ ಭದ್ರತೆ ಕೈಗೊಳ್ಳಲಾಗಿದೆ. ಈ ನಿಲ್ದಾಣಗಳಲ್ಲಿ ರೈಲ್ವೆ ಪೊಲೀಸರು ಹಾಗೂ ಸಾಮಾನ್ಯ ಪೊಲೀಸರನ್ನು ನಿಯೋಜಿಸಲಾಗಿದ್ದು, ಹೈದರಾಬಾದ್‌ನ ಮುಖ್ಯವಾದ ನಾಂಪಲ್ಲಿ ರೈಲು ನಿಲ್ದಾಣಕ್ಕೆ ಪ್ರವೇಶ ನಿರಾಕರಿಸಲಾಗಿದೆ.

ಉತ್ತರಾಖಂಡ ರಾಜ್ಯದ ಹಲ್ದವಾನಿಯಲ್ಲಿ ಯೋಜನೆ ವಿರೋಧಿಸಿ ಬೀದಿಗಿಳಿದು ಪ್ರತಿಭಟನೆ ನಡೆಸುತ್ತಿದ್ದ ಯುವಕರ ಮೇಲೆ ಲಘು ಲಾಠಿ ಪ್ರಹಾರ ಮಾಡಲಾಗಿದೆ. ಇದರಿಂದ ಕೆಲ ಯುವಕರಿಗೆ ಸಣ್ಣ ಪುಟ್ಟ ಗಾಯಗಳಾಗಿವೆ. ಇನ್ನೂ ಕೆಲ ಯುವಕರನ್ನು ಪೊಲೀಸರು ವಶಕ್ಕೆ ಪಡೆದಿದ್ದಾರೆ.

ಬಿಹಾರ ರಾಜ್ಯದ ಲಖ್ಮಿನಿಯಾದಲ್ಲಿ ಯೋಜನೆ ವಿರೋಧಿಸಿ ಪ್ರತಿಭಟನೆ ನಡೆಸುತ್ತಿದ್ದ ಯುವಕರು ಲಖ್ಮಿನಿಯಾ ರೈಲ್ವೆ ಸ್ಟೇಷನ್ ಮೇಲೆ ದಾಳಿ ಮಾಡಿ ಬೆಂಕಿ ಹಚ್ಚಿದ್ದಾರೆ. ಘಟನೆಯಲ್ಲಿ ಸ್ಟೇಷನ್ ಬಹುತೇಕ ಸುಟ್ಟು ಹೋಗಿದೆ.

ಉತ್ತರ ಪ್ರದೇಶ ರಾಜ್ಯದ ಬಲಿಯಾದಲ್ಲಿ ಯೋಜನೆ ಹಿಂಪಡೆಯಲು ಆಗ್ರಹಿಸಿ ಪ್ರತಿಭಟನೆ ತೀವ್ರಗೊಂಡಿದೆ. ಇಲ್ಲಿನ ರೈಲ್ವೆ ನಿಲ್ದಾಣಕ್ಕೆ ನುಗ್ಗಿದ ಪ್ರತಿಭಟನಾಕಾರರು ರೈಲೊಂದಕ್ಕೆ ಬೆಂಕಿ ಹಚ್ಚಿದ್ದು, ರೈಲಿನ ಮೂರು ಬೋಗಿಗಳು ಸಂಪೂರ್ಣ ಸುಟ್ಟು ಹೋಗಿವೆ.

ಸಶಸ್ತ್ರ ಪಡೆಗಳಲ್ಲಿ ನೇಮಕಾತಿಗಾಗಿ ಕೇಂದ್ರ ಸರ್ಕಾರವು ಇತ್ತೀಚೆಗೆ ಘೋಷಣೆ ಮಾಡಿರುವ ಅಗ್ನಿಪಥ್ ಯೋಜನೆ ವಿರುದ್ಧ ದೇಶಾದ್ಯಂತ ಪ್ರಬಲವಾದ ಹೋರಾಟ ತೀವ್ರಗೊಳ್ಳುತ್ತಿದೆ. ಯೋಜನೆ ಘೋಷಣೆಯಾದಾಗಲೇ ಇದಕ್ಕೆ ವಿರೋಧ ವ್ಯಕ್ತವಾಗಿತ್ತು. ಪ್ರಮುಖ ಪ್ರತಿಪಕ್ಷಗಳು ಸೇರಿದಂತೆ ಹಲವಾರು ರಾಜಕೀಯ ಪಕ್ಷಗಳು ಯೋಜನೆಯನ್ನು ವಿರೋಧಿಸಿದ್ದವು. ಇದು ಸೇನೆಗೆ ಸೇರಬಯಸುವ ಗ್ರಾಮೀಣ ಯುವಕರ ಭವಿಷ್ಯಕ್ಕೆ ಕುತ್ತು ತರಲಿದೆ ಎಂದು ಎಚ್ಚರಿಸಿದವು. ಕೇಂದ್ರ ಸರ್ಕಾರ ಯೋಜನೆಯನ್ನು ತಕ್ಷಣವೇ ಮರುಪರಿಶೀಲಿಸಿ ಹಿಂಪಡೆಯಬೇಕೆಂದು ಆಗ್ರಹಿಸಿದರು.







"ಹುಲು ಜೀವಿ"ಗಳು ಕಾನೂನು ವ್ಯವಸ್ಥೆಗೆ ಅತೀತರಾಗಿರುವ ಭಾರತ ದೇಶದಲ್ಲಿ.... ಪುಟ 9 ರಿಂದ

ಆಯ್ಕೆಯ ಸ್ವಾತಂತ್ರ್ಯದ ಸಾಂವಿಧಾನಿಕ ಖಾತ್ರಿಯನ್ನು ಗೌರವಿಸಬೇಕೆಂಬ ನಂಬಿಕೆಯುಳ್ಳವರು. ಪ್ರಜ್ಞಾ ಠಾಕೂರ್ ಅವರಂತಹವರಿಗೆ ಇದು ಪರಕೀಯವಾದ ಸಂಗತಿ. ಹೌದು, ಕಮ್ಯುನಿಸ್ಟರು ಕಾನೂನು ಮತ್ತು ವಾಕ್‌ಸ್ವಾತಂತ್ರ್ಯದ ಸಾಂವಿಧಾನಿಕ ಹಕ್ಕಿನ ಚೌಕಟ್ಟಿನೊಳಗೆ ವೈಜ್ಞಾನಿಕ ಮನೋಭಾವವನ್ನು ಉತ್ತೇಜಿಸುತ್ತಾರೆ ಮತ್ತು ಸಾಮಾಜಿಕ ಮತ್ತು ಆರ್ಥಿಕ ಸಮಾನತೆಯ ಗುರಿಸಾಧನೆಗೆ ಅಸಹ್ಯವಾದ ಅತ್ಯಂತ ಪ್ರತಿಗಾಮಿ ಮತ್ತು ಅಮಾನವೀಯ ಆಚರಣೆಗಳಿಗೆ ಧಾರ್ಮಿಕ ಸಂಹಿತೆಗಳ ಅನುಮೋದನೆಯನ್ನು ಪಡೆದಿರುವ ಜಾತಿಯಂತಹ ಸಾಮಾಜಿಕ ಸಂಸ್ಥೆಗಳನ್ನು ಟೀಕಿಸುತ್ತಾರೆ. ರಾಜಕೀಯದಿಂದ ಧರ್ಮವನ್ನು ಪ್ರತ್ಯೇಕಿಸಬೇಕು ಎಂದು ಕಮ್ಯುನಿಸ್ಟರು ನಂಬುತ್ತಾರೆ ಎಂಬ ಕಾರಣದಿಂದಾಗಿ ಅವರು ಎಲ್ಲ ರೀತಿಗಳ ಉಗ್ರಗಾಮಿ ರಾಜಕೀಯವನ್ನು, ಅದು ಯಾವುದೇ ಧಾರ್ಮಿಕ ವೇಷ ತೊಟ್ಟಿದ್ದರೂ ಲೆಕ್ಕಿಸದೆ ವಿರೋಧಿಸುವ ಹೆಮ್ಮೆಯ ದಾಖಲೆಯನ್ನು ಹೊಂದಿದ್ದಾರೆ.

ಕೇರಳದ ಪಿ.ಎಫ್.ಐ. ಮತ್ತು ಎಸ್.ಡಿ.ಪಿ.ಐ. ಯಂತಹ ಮೂಲಭೂತವಾದಿ ಸಂಘಟನೆಗಳು ಕಮ್ಯುನಿಸ್ಟರ ವಿರುದ್ಧ ವಿಷವನ್ನು ಉಗುಳಲು ಇದು ಒಂದು ಕಾರಣವಾಗಿದೆ. ಜಾತ್ಯತೀತ ತತ್ವಗಳು ಮತ್ತು ಮೌಲ್ಯಗಳಿಗೆ ಹಾನಿಯನ್ನುಂಟುಮಾಡುವುದಷ್ಟೇ ಅಲ್ಲ,, ಸಂಘ ಪರಿವಾರವು ನಡೆಸುತ್ತಿರುವ ಬಹುಸಂಖ್ಯಾತವಾದೀ ಕೋಮುವಾದಕ್ಕೆ ಸಹಾಯ ಮಾಡುವ ಅವರ ಬ್ರಾಂಡಿನ ರಾಜಕೀಯದೊಂದಿಗೆ ಕಮ್ಯುನಿಸ್ಟರು ಎಂದೂ ರಾಜಿ ಮಾಡಿಕೊಳ್ಳುವುದಿಲ್ಲ ಎಂಬುದು ಅವರಿಗೆ ತಿಳಿದಿದೆ.

ಭಾರತದ ಸ್ವಾತಂತ್ರ್ಯದ 75 ನೇ ವರ್ಷದಲ್ಲಿ, ಒಂದು ಜಾತ್ಯತೀತ ದೇಶದ ಶಕ್ತಿ ಮತ್ತು ವೈವಿಧ್ಯಮಯ ಜನತೆಯ ಸಾವಯವ ಏಕತೆಯನ್ನು ಪ್ರದರ್ಶಿಸಲು ಸಾಧ್ಯವಾಗುವ ಬದಲು, ಜೀವನದ ಎಲ್ಲಾ ಕ್ಷೇತ್ರಗಳಲ್ಲಿ ಉತ್ತೇಜಿಸಿರುವ ಇಸ್ಲಾಮೋಭಯ ರೋಗಕ್ಕೆ ಮತ್ತು ಧರ್ಮಾಂಧತೆಯ ಸಿದ್ಧಾಂತ ಮತ್ತು ಸಂಸ್ಕೃತಿಗಳಿಗೆ ಭಾರತವು ಬಹಳಷ್ಟು ಬೆಲೆ ತೆರಬೇಕಾಗಿ ಬಂದಿದೆ. ಇದರಲ್ಲಿ ಅಧಿಕಾರದಲ್ಲಿರುವವರಿಂದ ಇತಿಹಾಸದ ಉತ್ಪಾದನೆ ಮತ್ತು ಅಳಿಸುವಿಕೆ ಕೂಡ ಸೇರಿದೆ. ನೂಪುರ್ ಶರ್ಮಾ ಅವರನ್ನು ಅಧಿಕೃತವಾಗಿ "ಫ್ರಿಂಜ್ ಎಲಿಮೆಂಟ್"(ಹುಲು ಜೀವಿ) ಎಂದು ವರ್ಣಿಸಲಾಗಿದೆ. ನಾಳೆ ಪ್ರಜ್ಞಾ ಠಾಕೂರ್ ಕೂಡ ಅದೇ ಆಗಬಹುದು. ಆದರೆ ಪ್ರಬಲವಾದ ಕೇಂದ್ರ ಸರ್ಕಾರವು ವಾರಗಟ್ಟಲೇ ಈ "ಹುಲು ಜೀವಿ"ಗಳನ್ನು ಕಾನೂನಿನ ವ್ಯಾಪ್ತಿಯನ್ನೂ ಮೀರಿ ನಿಲ್ಲುವ ಸ್ಥಾನಕ್ಕೆ ಏರಿಸಿದೆ ಎಂಬುದು ಭಾರತದ ಜಾಗತಿಕ ಬಿಂಬಕ್ಕೆ ವಿಶ್ವಾಸಾರ್ಹತೆಯನ್ನೇನೂ ನೀಡುವುದಿಲ್ಲ.

ಅನು: ಲವಿತ್ರ ವಸ್ತ್ರದ

ಸೇನಾಕಾಂಕ್ಷಿಗಳ ಕನಸುಗಳನ್ನು ಭಸ್ಮಮಾಡಲು ಬರುತ್ತಲಿದೆ ಅಗ್ನಿಪಥ್ .... ಪುಟ 8 ರಿಂದ

ಸಿದ್ಧತೆಗಳನ್ನು ನಡೆಸಿರುತ್ತಾರೆ. ಇಷ್ಟೇಲ್ಲಾ ಮಾಡಿ ಕೇವಲ 4 ವರ್ಷಗಳಿಗಾಗಿ ಸೇನೆಯನ್ನು ಸೇರಬೇಕೇ ಎಂಬ ಪ್ರಶ್ನೆ ಅವರನ್ನು ಕಾಡುತ್ತದೆ. ಆದ್ದರಿಂದ ಈ ಅಸಂಬದ್ಧ ಪದ್ಧತಿಯನ್ನು ಹಿಂತೆಗೆದುಕೊಳ್ಳುವಂತೆ ಒತ್ತಾಯಿಸಿ ಅವರು ತಮಗೆ ತಿಳಿಯುವುದನ್ನು ಮಾಡಲು ಮುಂದಾಗುತ್ತಾರೆ.

ನಾಲ್ಕು ವರ್ಷಗಳ ಅಲ್ಪಾವಧಿಯ ಸೇವೆ ಮುಗಿಸಿ ಇವರು ನಿವೃತ್ತಿಯಾಗಬೇಕಾದಾಗ ಅವರ ವಯಸ್ಸು ಕೇವಲ 21 ರಿಂದ 35 ವರ್ಷ ಮಾತ್ರ. ಅಲ್ಲಿಂದ ಮುಂದೆ ಬೇರೆ ಉದ್ಯೋಗ ಸಿಕ್ಕರೂ ಬರುವ ಆದಾಯ ತೀರಾ ಕನಿಷ್ಠ ಆಗಿರುತ್ತದೆ. ಅಥವ ನಿರುದ್ಯೋಗಕ್ಕೆ ಒಳಗಾಗಬೇಕಾಗುತ್ತದೆ. ಭವಿಷ್ಯ ತೀರಾ ಅನಿಶ್ಚಿತವಾಗಿರುವುದರಿಂದ ಅವರು ಸಹನೆ ಕಳೆದುಕೊಂಡು ಹಿಂಸಾಚಾರದ ಹೋರಾಟಕ್ಕೆ ಮುಂದಾಗುತ್ತಾರೆ. ಅವರ ಹಿಂಸಾಚಾರ ಪ್ರವೃತ್ತಿಯನ್ನು ಬೆಂಬಲಿಸಲಾಗದು. ಆದರೆ ಸಮಾಜ ಅಂತವರ ಬಗ್ಗೆ ಸಹಾನುಭೂತಿ ತೋರಬೇಕಾಗುತ್ತದೆ. ಸರ್ಕಾರ ಅವರ ದಾರಿತಪ್ಪಿಸುವುದನ್ನು ತಡೆಯಬೇಕಾಗುತ್ತದೆ.

ಸರ್ಕಾರದ ನಡೆಯನ್ನು ಸರ್ವತಾ ಒಪ್ಪಲಾಗದು. ಗುತ್ತಿಗೆ ಆಧಾರದ ನೇಮಕಾತಿಯಿಂದ ಸರ್ಕಾರ ಅಕುಶಲ ಕೆಲಸಗಾರರ ಶ್ರಮದ ಶೋಷಣೆ ಮಾಡುತ್ತದೆ. ಕೆಲಸಗಾರರಿಗೆ ಕೊಡಬೇಕಾದ ಜೀವನಾವಶ್ಯಕ ವೇತನ, ಗ್ರಾಚುಯಿಟಿ, ಪಿಂಚಣಿ ಮೊದಲಾದವುಗಳ ಹಣವನ್ನು ಉಳಿತಾಯ ಮಾಡಿಕೊಳ್ಳುತ್ತದೆ.

ಅಷ್ಟು ಮಾತ್ರವಲ್ಲ ಸೇನೆಯಲ್ಲಿ ಸೇವೆಸಲ್ಲಿಸುತ್ತಿರುವ ಯೋಧರ ಹಣವನ್ನು ಅವರಿಗೆ ಸಂದಾಯ ಮಾಡುವ ಬದಲು ಶಸ್ತ್ರಾಸ್ತ್ರಗಳನ್ನು ಕೊಂಡುಕೊಳ್ಳಲು ಬಳಸಿಕೊಳ್ಳುತ್ತದೆ. ಸೈನಿಕರಿಗೆ ತಮ್ಮ ತಲೆ, ಮುಖ, ಕೈ ಕಾಲು ಹಾಗೂ ದೇಹವನ್ನು ರಕ್ಷಿಸಿಕೊಳ್ಳಲು ನೀಡಬೇಕಾದ ಸೌಲಭ್ಯಗಳನ್ನು ಅಗತ್ಯ ಪ್ರಮಾಣದಲ್ಲಿ ಕಾಲಕಾಲಕ್ಕೆ ಒದಗಿಸಲು ಹಿಂದೇಟು ಹಾಕಲಾಗುತ್ತದೆ. ಈಗ ಈ ಹೊಸ ನೇಮಕಾತಿ ವಿಧಾನದ ಮೂಲಕ ಸೈನ್ಯದ ಗುಣಮಟ್ಟವನ್ನೇ ದುರ್ಬಲಗೊಳಿಸಲಾಗುತ್ತಿದೆ. ಇದರಿಂದ ದೇಶವನ್ನೇ ಅಪಾಯಕ್ಕೆ ಗುರಿಪಡಿಸಿದಂತಾಗಲಿದೆ.

ಅಗ್ನಿಪಥದ ಮೂಲಕ ಮೋದಿ ಸರ್ಕಾರ ದೇಶದ ಯುವಜನರ ಭವಿಷ್ಯದ ಜತೆಗೆ ಚೆಲ್ಲಾಟವಾಡುತ್ತಿದೆ. ದೇಶದ ಯುವ ಜನ ಸಂಘಟನೆಗಳೊಂದಿಗೆ ಚರ್ಚೆ ಮಾಡದೆ ಜಾರಿಗೆ ತರಲು ಹೊರಟಿರುವ ಈ ಅಪಾಯಕಾರಿ ಸೇನಾ ನೇಮಕಾತಿಯನ್ನು ನಿಲ್ಲಿಸಬೇಕೆಂದು ಎಡ ಪಕ್ಷಗಳು ಆಗ್ರಹಿಸಿವೆ. ಪ್ರಗತಿಪರ ವಿದ್ಯಾರ್ಥಿ ಹಾಗೂ ಯುವಜನ ಸಂಘಟನೆಗಳು ಪ್ರತಿಭಟನೆಗಳಲ್ಲಿ ಭಾಗವಹಿಸಿ ಪೊಲೀಸರ ದೌರ್ಜನ್ಯ ದಬ್ಬಾಳಿಕೆಯನ್ನು ಅನುಭವಿಸಿದ್ದಾರೆ. ಅಗ್ನಿಪಥವನ್ನು ವಾಪಸ್ ತೆಗೆದುಕೊಂಡು ಸೇನೆಯ ಖಾಲಿ ಇರುವ ಹುದ್ದೆಗಳನ್ನು ವಿಳಂಬ ಮಾಡದೆ ಭರ್ತಿ ಮಾಡಬೇಕೆಂದು ಎಲ್ಲ ದೇಶಪ್ರೇಮಿ ಶಕ್ತಿಗಳ ಒತ್ತಾಯವಾಗಬೇಕಾಗಿದೆ.

‘ಅಗ್ನಿಪಥ್’ ಬಿಜೆಪಿ ಸರಕಾರದ ಹುಸಿ ರಾಷ್ಟವಾದ ಮತ್ತು ನಕಲಿ ದೇಶಪ್ರೇಮವನ್ನು ಬಯಲಿಗೆಳೆದಿದೆ- ಸಿಐಟಿಯು

‘ಅಗ್ನಿಪಥ್’ ಎಂದು ಹೆಸರಿಸಿರುವ ಬಿಜೆಪಿ ಸರಕಾರದ ತೀರಾ ಇತ್ತೀಚಿನ ಯೋಜನೆ ದೇಶದ ಸಶಸ್ತ್ರ ಪಡೆಗಳಲ್ಲಿ ಕೂಡ ನಿಗದಿತ ಅವಧಿಯ ಒಪ್ಪಂದದ ಮೇಲೆ, ಅದೂ, ಯಾವುದೇ ಪಿಂಚಣಿಯಿಲ್ಲದೆ, ನೇಮಕಾತಿ ಮಾಡುವ ತಂತ್ರ ಎಂದು ದೇಶದ ಪ್ರಮುಖ ಕಾರ್ಮಿಕ ಸಂಘಟನೆ ಸಿಐಟಿಯು ತೀವ್ರ ಕಳವಳ ಮತ್ತು ಆಘಾತವನ್ನು ವ್ಯಕ್ತ ಪಡಿಸಿದೆ. ಇದು ನವ ಉದಾರವಾದಿ ಸರ್ಕಾರ ಒಟ್ಟಾರೆಯಾಗಿ ಉದ್ಯಮಗಳು ಮತ್ತು ಸೇವೆಗಳಲ್ಲಿನ ನೇಮಕಾತಿಗಳಲ್ಲಿ ಜೋರಾಗಿ ಪ್ರೋತ್ಸಾಹಿಸುತ್ತಿರುವ ಕಾಂಟ್ರಾಕ್ಟೀಕರಣ/ ಕ್ಯಾಶುವಲೀಕರಣದ ಅದೇ ಪ್ರಕ್ರಿಯೆಯನ್ನು ಸೇನಾಪಡೆಗಳಲ್ಲೂ ತರುವ ಧೈರ್ಯಮಾಡುತ್ತದೆ. ಇದರ ಅಪಾಯಕಾರಿ ಪರಿಣಾಮಗಳ ಪರಿವೆಯೇ ಅದಕ್ಕೆ ಇದ್ದಂತಿಲ್ಲ. ಇದು ಹುಸಿ ರಾಷ್ಟವಾದ ಮತ್ತು ನಕಲಿ ದೇಶಭಕ್ತಿಯನ್ನು ಉತ್ತೇಜಿಸಲು ಮೋದಿ ಸರಕಾರ 'ನಮ್ಮ ಜವಾನರು' ಎಂದು ವ್ಯಕ್ತಪಡಿಸುತ್ತಿರುವ ಕಾಳಜಿ ಕೇವಲ ಬೂಟಾಟಿಕೆ ಎಂಬುದನ್ನು ಬಯಲಿಗೆಳೆಯುತ್ತಿದೆ ಎಂದು ಸಿಐಟಿಯು ಕಟುವಾಗಿ ಟೀಕಿಸಿದೆ.

ಇಂತಹ ಪ್ರತಿಗಾಮಿ ಕ್ರಮವು ನಮ್ಮ ಸಶಸ್ತ್ರ ಪಡೆಗಳಲ್ಲಿ ಉದ್ಯೋಗದ ಗುಣಮಟ್ಟ ಮತ್ತು ದಕ್ಷತೆಯನ್ನು ತೀವ್ರವಾಗಿ ತಟ್ಟುತ್ತದೆ, ಅವುಗಳ ಮೇಲೆ ನಕಾರಾತ್ಮಕ ಪರಿಣಾಮ ಬೀರುತ್ತದೆ, ಒಟ್ಟಾರೆಯಾಗಿ ದೇಶದ ಭದ್ರತೆಯ ವಿರುದ್ಧದ ಮತ್ತು ಅದರಲ್ಲಿ ಉದ್ಯೋಗದ ಗುಣಮಟ್ಟ, ದೃಢತೆ ಮತ್ತು ವೃತ್ತಿಪರತೆಯನ್ನು ಬಾಧಿಸುವ ತೀವ್ರ ಕ್ರಮವಾಗುತ್ತದೆ, ಇದೆಲ್ಲ ರಾಷ್ಟ್ರೀಯ ಹಿತಾಸಕ್ತಿಗಳಿಗೆ ತೀವ್ರ ಹಾನಿಯುಂಟು ಮಾಡುತ್ತದೆ.

ಇದಲ್ಲದೆ, ಸಶಸ್ತ್ರ ಪಡೆಗಳ ಮಟ್ಟದ ತರಬೇತಿ ಪಡೆದ ಮತ್ತು ‘ಅಗ್ನಿಪಥ್’ ಯೋಜನೆಯಡಿ ನಿಯೋಜಿಸಲಾದ ಯುವ ಸೈನಿಕರನ್ನು ನಾಲ್ಕು ವರ್ಷಗಳ ನಂತರ ಅನಿಶ್ಚಿತ ಭವಿಷ್ಯದತ್ತ ಎಸೆಯಲಾಗುತ್ತದೆ. ಇದು ಪ್ರಸಕ್ತ ನಿರಂಕುಶ ಮತ್ತು ವಿಭಜನಕಾರೀ ಶೈಲಿಯ ಆಳ್ವಿಕೆಯ ಅಡಿಯಲ್ಲಿ ಇಡೀ ಸಮಾಜಕ್ಕೆ ಗಂಭೀರ ಕೇಡುಂಟುಮಾಡುತ್ತದೆ.

ಇಂತಹ, ರಾಷ್ಟ್ರೀಯ ಹಿತಾಸಕ್ತಿಗಳಿಗೆ ವಿರುದ್ಧವಾಗಿರುವ "ಅಗ್ನಿಪಥ್" ಎಂಬುದು ಪ್ರತಿಗಾಮಿ ಹುನ್ನಾರ ಎಂದು ಸಿಐಟಿಯು ಖಂಡಿಸಿದೆ. ಮತ್ತು ದೇಶದ ವಿವಿಧ ಭಾಗಗಳಲ್ಲಿ ಅದರ ವಿರುದ್ಧ ಸ್ವಯಂಪ್ರೇರಿತ ಪ್ರತಿಭಟನೆಗಳು ನಡೆಯುತ್ತಿರುವುದನ್ನು ಸ್ವಾಗತಿಸಿದೆ. ದೇಶದ ಸಶಸ್ತ್ರ ಪಡೆಗಳಿಗೆ ಸಂಬಂಧಪಟ್ಟಂತೆ ಇಂತಹ ವಿನಾಶಕಾರಿ ಪ್ರಯೋಗಗಳನ್ನು ಸರ್ಕಾರವು ತಕ್ಷಣವೇ ಹಿಂತೆಗೆದುಕೊಳ್ಳಬೇಕು ಎಂದು ಆಗ್ರಹಿಸಿರುವ ಅದು ದೇಶಾದ್ಯಂತ ಇಂತಹ ದೇಶವಿರೋಧಿ ಹುನ್ನಾರದ ವಿರುದ್ಧ ದೇಶಪ್ರೇಮಿಗಳು ಪ್ರತಿಭಟನೆ ಮತ್ತು ಅಸಮ್ಮತಿಯ ಧ್ವನಿ ಎತ್ತಬೇಕೆಂದು ಕರೆ ನೀಡಿದೆ.



ಅಗ್ನಿಪಥ್ ಯೋಜನೆ ವಿರೋಧಿಸಿ–ಭಾರತದ ಸಾರ್ವಭೌಮತ್ವ ರಕ್ಷಿಸಿ: ಎಸ್.ಎಫ್.ಐ.

ಪ್ರಸ್ತುತ ಕೇಂದ್ರ ಸರ್ಕಾರದ ಹೊಸ ಸೇನಾ ನೇಮಕಾತಿ ಮತ್ತು ಅದರ ಪ್ರಕ್ರಿಯೆ ದೇಶದ ಸಾರ್ವಭೌಮತೆಗೆ ಗಂಡಾಂತರ ತಂದೊಡ್ಡಿದೆ. ಕಳೆದೆರಡು ವರ್ಷಗಳಿಂದ ಸೇನಾ ನೇಮಕಾತಿಯೇ ನಡೆದಿಲ್ಲ. 2021 ರ ಅಂಕಿ ಅಂಶಗಳ ಪ್ರಕಾರ ಭಾರತೀಯ ಸೇನೆಯಲ್ಲಿ 1,04,653 ಸೈನಿಕ ಸಿಬ್ಬಂದಿಗಳ ಕೊರತೆಯಿದೆ. ಆದರೂ ಹೊಸದಾಗಿ ಗುತ್ತಿಗೆ ಮಾದರಿಯ ಹೊಸ ಯೋಜನೆ ಪ್ರಕಟಿಸಿರುವುದನ್ನು ಎಸ್ಎಫ್ಐ ಸಂಘಟನೆ ಖಂಡಿಸಿದೆ.

ಈ ಬಗ್ಗೆ ಹೇಳಿಕೆಯನ್ನು ಬಿಡುಗಡೆಗೊಳಸಿರುವ ಭಾರತ ವಿದ್ಯಾರ್ಥಿ ಫೆಡರೇಷನ್(ಎಸ್ಎಫ್ಐ) ರಾಷ್ಟ್ರೀಯ ಅಧ್ಯಕ್ಷ ವಿ.ಪಿ ಸಾನು ಅವರು, ಗಾಯದ ಮೇಲೆ ಬರೆ ಎಳೆದಂತೆ, ಕ್ರೇಂದ್ರ ಸರ್ಕಾರ ಪ್ರಸ್ತುತ ಉದ್ದೇಶಿತ ನೇಮಕಾತಿಯಲ್ಲಿ ಸ್ಥಳೀಯ ಕೋಟಾವನ್ನು ರದ್ದು ಮಾಡಿದಂತಾಗಿದೆ. ಆರು ತಿಂಗಳ ತರಬೇತಿಯೂ ಸೇರಿದಂತೆ ನಾಲ್ಕು ವರ್ಷಗಳ ಅಲ್ಪಕಾಲಿಕ ನೇಮಕಾತಿ ಮಾಡಲು ನಿರ್ಧರಿಸಿದೆ. ಈ ಸೇವೆಗೆ ಯಾವುದೇ ರೀತಿಯ ಪಿಂಚಣಿ ಮತ್ತು ಗ್ರಾಜ್ಯುಟಿ ಇಲ್ಲದಿರುವುದು ಉದ್ಯೋಗ ಭದ್ರತೆಯಲ್ಲಿ ಸ್ಪಷ್ಟ ಉಲ್ಲಂಘನೆಯಾಗಿದೆ ಎಂದು ತಿಳಿಸಿದ್ದಾರೆ.

ಎಸ್ಎಫ್ಐ ರಾಜ್ಯಾಧ್ಯಕ್ಷ ಅಮರೇಶ ಕಡಗದ ಅವರು, ಕೇಂದ್ರ ಬಿಜೆಪಿ ಸರ್ಕಾರದ ಅಗ್ನಿಫಥ್ ಯೋಜನೆಯು ಮುಂದೆ ಪ್ರತಿ ವರ್ಷ ಶಸ್ತ್ರಾಸ್ತ್ರ ತರಬೇತಿ ಪಡೆದ 35,000 ನಿರುದ್ಯೋಗಿಗಳನ್ನು ಸೃಷ್ಟಿಸಲಿದೆ. ಸರ್ಕಾರದ ಈ ನಡೆಯಲ್ಲಿ ಇಡೀ ಸಮಾಜವನ್ನೇ ಮಿಲಿಟರೀಕರಣಗೊಳಿಸುವ ಅಪಾಯವಿದೆ. ಈ ಯೋಜನೆಯು ದೇಶದ ಸಾರ್ವಭೌಮತೆಯ ಸಂಕೇತವಾದ ಸೇನೆಯ ಗಣತೆ, ನೈತಿಕತೆ ಮತ್ತು ವೃತ್ತಿಪರತೆಯ ಮೇಲೆ ಋಣಾತ್ಮಕ ಪರಿಣಾಮ ಉಂಟು ಮಾಡಲಿದೆ ಎಂದಿದ್ದಾರೆ.

ಎಸ್ಎಫ್ಐ ರಾಜ್ಯ ಕಾರ್ಯದರ್ಶಿ ವಾಸುದೇವರೆಡ್ಡಿ ಕೆ. ಅವರು ಸಶಸ್ತ್ರ ನೇಮಕಾತಿಯೊಂದಿಗೆ ಪ್ರತೀ ವರ್ಷ ದೇಶದ ಲಕ್ಷಗಟ್ಟಲೆ ಯುವಕ, ಯುವತಿಯರಿಗೆ ಭದ್ರತೆಯ ಮತ್ತು ಧೀರ್ಘಕಾಲದ ಉದ್ಯೋಗ ಒದಗಿಸುವ ಮೂಲಗಳಾಗಿದ್ದವು. ಆದರೆ, ಈಗಿನ ಈ ಯೋಜನೆ ನವ ಉದಾರಿಕರಣ ನೀತಿಗಳನ್ನು ಅನುಸರಿಸುತ್ತಿರುವ ಕೇಂದ್ರ ಸರ್ಕಾರ ಪ್ರತಿಯೊಂದು ಉದ್ಯೋಗ ಕ್ಷೇತ್ರವನ್ನು ಗುತ್ತಿಗೆಯವರಿಗೆ ಒಪ್ಪಿಸುವಂತದ್ದೇ ಹೊಸ ಯೋಜನೆಯಾಗಿದೆ. ಈ ನಡೆ ದೇಶದ ದುಡಿವ ಜನರ ಉದ್ಯೋಗ ಭದ್ರತೆ ಮತ್ತು ಆರ್ಥಿಕ ಸ್ವಾವಲಂಬನೆಯನ್ನು ಸಂಪೂರ್ಣವಾಗಿ ಇಲ್ಲದಂತಾಗಿಸುತ್ತಿದೆ. ಜೊತೆಗೆ ಈ ಯೋಜನೆಯ ಮೂಲಕ ಕೇಂದ್ರ ಸರ್ಕಾರ ತರಭೇತಿ ಹೊಂದಿದ ನಿರುದ್ಯೋಗಿ ಸೈನಿಕರು ಜಗತ್ತಿನ ಸಾಮ್ರಾಜ್ಯಶಾಹಿ ಶಕ್ತಿಗಳ ಕೂಲಿಕಾರರಾಗಿಸುವ ಅವಕಾಶದ ಹೆಬ್ಬಾಗಿಲನ್ನೂ ತೆರೆದಿಡಲಿದೆ ಎಂದಿದ್ದಾರೆ.

ಭಾರತ ವಿದ್ಯಾರ್ಥಿ ಫೆಡರೇಶನ್ ಎಸ್ಎಫ್ಐ ಕೇಂದ್ರ ಕಾರ್ಯಕಾರಿ ಸಮಿತಿ ಜನತೆ ಮತ್ತು ದೇಶದ ಸಾರ್ವಭೌಮತೆಯ ಮೇಲೆ ನವ ಉದಾರಿಕರಣ ದಾಳಿಯನ್ನು ಖಂಡಿಸಿದೆ ಮತ್ತು ತಕ್ಷಣವೇ ಈ ಮಾರಕ ಅಗ್ನಿಪಥ ಯೋಜನೆಯನ್ನು ರದ್ದುಪಡಿಸಿ ಈಗಾಗಲೇ ಚಾಲ್ತಿಯಲ್ಲಿದ್ದಂತೆಯೇ ಸೇನಾ ನೇಮಕಾತಿ ಮಾಡಬೇಕೆಂದು ಒತ್ತಾಯಿಸಿದೆ.

ಸೇನೆಗೆ ಗುತ್ತಿಗೆಯಾಧಾರಿತ ನೇಮಕ– ಅಗ್ನಿಪಥ್ ಯೋಜನೆಗೆ ಡಿ.ವೈ.ಎಫ್.ಐ. ಖಂಡನೆ

ಭಾರತೀಯ ಸೇನೆಗೆ ಹೊಸದಾಗಿ ಸೈನಿಕರನ್ನು ಆಯ್ಕೆ ಮಾಡಲು ನೇಮಕಾತಿ ಅಭಿಯಾನ ನಡೆದು ಈಗಾಗಲೇ ಎರಡು ವರ್ಷಗಳಿಗಿಂತ ಹೆಚ್ಚು ಸಮಯ ಕಳೆದಿದೆ. ಆದರೆ ರಕ್ಷಣಾ ಸಚಿವಾಲಯದ ಮಾಹಿತಿಯಂತೆ ಸೇನೆಯಿಂದ ನಿವೃತ್ತರಾಗುವ ಸೈನಿಕರ ಸಂಖ್ಯೆ ಕಡಿಮೆಯಾಗಿಲ್ಲ. ಈ ಸಂದರ್ಭದಲ್ಲಿ ನರೇಂದ್ರ ಮೋದಿ ಸರ್ಕಾರವು ವೃತ್ತಿಪರ ಸೈನ್ಯವನ್ನು ಬೆಳೆಸುವ ಬದಲು, ಪಿಂಚಣಿ ಹಣವನ್ನು ಉಳಿಸಲು ‘ಒಪ್ಪಂದದ ಮೇಲೆ ಸೈನಿಕರನ್ನು ನೇಮಕ’ ಪ್ರಸ್ತಾಪಿಸುವ ರಾಷ್ಟವಿರೋಧಿ ಯೋಜನೆಯನ್ನು ಡಿವೈಎಫ್ಐ ಖಂಡಿಸಿದೆ.

ಭಾರತ ಪ್ರಜಾಸತ್ತಾತ್ಮಕ ಯುವಜನ ಫೆಡರೇಷನ್(ಡಿವೈಎಫ್ಐ) ಕರ್ನಾಟಕ ರಾಜ್ಯ ಅಧ್ಯಕ್ಷ ಮುನೀರ್ ಕಾಟಿಪಳ್ಳ ಹೇಳಿಕೆಯನ್ನು ಬಿಡುಗಡೆಗೊಳಿಸಿದ್ದು, ರಕ್ಷಣಾ ಸಚಿವ ರಾಜನಾಥ್ ಸಿಂಗ್ ‘ಅಗ್ನಿಪಥ್’ ಯೋಜನೆಯನ್ನು ಘೋಷಿಸಿದ್ದು, ಅದರ ಮೂಲಕ ಸಶಸ್ತ್ರ ಪಡೆಗಳಿಗೆ ಯುವಕರನ್ನು ನೇಮಿಸಿಕೊಳ್ಳಲಾಗುವುದು. ಆದರೆ ಈ ಕ್ರಮ ದೇಶದ ಯುವಕರು ಎದುರಿಸುತ್ತಿರುವ ಸಮಸ್ಯೆಗಳಿಗೆ ನೈಜ ಪರಿಹಾರ ಸಿಗಲು ಸಾಧ್ಯವೇ ಇಲ್ಲವೆಂಬುದನ್ನು ಈ ಯೋಜನೆಯೇ ಸಾರುತ್ತಿದೆ. ಮುಂದಿನ 1.5 ವರ್ಷಗಳಲ್ಲಿ 10 ಲಕ್ಷ ಜನರ ನೇಮಕಾತಿಯನ್ನು ಸರ್ಕಾರವು ‘ಮಿಷನ್ ಮೋಡ್’ನಲ್ಲಿ ಮಾಡಲಿದೆ ಎಂದು ಪ್ರಧಾನಿ ನರೇಂದ್ರ ಮೋದಿ ಘೋಷಿಣೆ ಮಾಡಿದ್ದಾರೆ. ಆದರೆ ಈ ಹಿಂದೆ ನರೇಂದ್ರ ಮೋದಿಯವರು ನೀಡಿದ ಭರವಸೆಗಳ ಈಡೇರದೆ ಹಾಗೇ ಉಳಿದಿವೆ. ಇದು ಈಗಾಗಲೇ ಉದ್ಯೋಗ ಸಿಗದೇ ಹತಾಶೆಗೊಂಡಿರುವ ಯುವಜನರನ್ನು ಅಣಕಿಸುವ ಹೇಳಿಕೆಯಂತೆ ಕಾಣುತ್ತದೆಯೇ ವಿನಃ, ದೇಶದ ನಿರುದ್ಯೋಗಿ ಯುವಜನರ ಮೇಲಿನ ನೈಜ ಕಾಳಜಿಯ ಹಾಗೂ ಕಾರ್ಯಗತವಾಗುವ ಯೋಜನೆಯಾಗಿಯಂತೂ ಅಲ್ಲ ಎಂದು ಆರೋಪಿಸಿದ್ದಾರೆ.

ಭಾರತೀಯ ಸೇನೆಯು ರಾಷ್ಟದ ಸಾರ್ವಭೌಮತ್ವವನ್ನು ರಕ್ಷಿಸುವ ಪ್ರತಿಷ್ಠಿತ ಸಂಸ್ಥೆಯಾಗಿದ್ದು, ಅದರ ಜೊತೆಗೆ, ಪ್ರತಿ ವರ್ಷ ಲಕ್ಷಾಂತರ ಜನರಿಗೆ ಉದ್ಯೋಗವನ್ನು ಒದಗಿಸುವ ಜವಾಬ್ದಾರಿಯನ್ನು ಹೊಂದಿದೆ. ಕಳೆದ ವರ್ಷಗಳಲ್ಲಿ ನೇಮಕಾತಿಯಲ್ಲಿನ ವಿಫಲತೆಯಿಂದಾಗಿ ಭಾರತೀಯ ಸೇನೆಯ ಕಾರ್ಯಾಚರಣೆಗಳಲ್ಲಿ ಅಪಾಯಗಳು ಎದುರಾದವು. ಮಾತ್ರವಲ್ಲದೆ, ವರ್ಷಗಟ್ಟಲೇ ಉದ್ಯೋಗದ ಹುಡುಕಾಟ ಹಾಗೂ ಸೇನೆ ಸೇರುವ ತಯಾರಿ ನಡೆಸುತ್ತಿದ್ದ ವಿದ್ಯಾರ್ಥಿಗಳು ಮತ್ತು ಯುವ ಅಭ್ಯರ್ಥಿಗಳಿಗೆ ಬಹಳ ಅನ್ಯಾಯವಾಗಿದೆ ಎಂದು ತಿಳಿಸಿದ್ದಾರೆ.

ಡಿವೈಎಫ್ಐ ಪ್ರಧಾನ ಕಾರ್ಯದರ್ಶಿ ಬಸವರಾಜ ಪೂಜಾರ್ ಅವರು, ಘೋಷಣೆ ಮಾಡಲಾಗಿರುವ ಅಗ್ನಿಪಥ್ ಯೋಜನೆಯ ಮೂಲಕ ಸಶಸ್ತ್ರ ಪಡೆಗಳಲ್ಲಿ ಗುತ್ತಿಗೆ ಉದ್ಯೋಗಗಳನ್ನು ಪರಿಚಯಿಸಲು ಕೇಂದ್ರ ಸಂಪುಟವು ಆಸಕ್ತಿ ತೋರುತ್ತಿದೆ. ಅಗ್ನಿವೀರ್‌ಗಳನ್ನು 4 ವರ್ಷಗಳ ಅವಧಿಗೆ ಮಾತ್ರ ಆಯಾ ಸೇವಾ ಕಾಯಿದೆಗಳ ಅಡಿಯಲ್ಲಿ ನೋಂದಾಯಿಸಲಾಗುತ್ತದೆ ಎಂದಿದ್ದಾರೆ.

ಅದರೊಂದಿಗೆ, ನೇಮಕಗೊಂಡವರಿಗೆ ಒಂದು ಬಾರಿ ‘ಸೇವಾನಿಧಿ’ ಪ್ಯಾಕೇಜ್ ಅನ್ನು ಪಾವತಿಸಲಾಗುತ್ತಾದರೂ, ಅದು ಅವರಿಂದ ತಡೆಹಿಡಿಯಲಾಗುವ ಸಂಬಳದ ಒಂದು ಭಾಗವನ್ನು ಮತ್ತು ಸರ್ಕಾರದಿಂದ ಕೊಡುಗೆಯಾಗಿ ನೀಡುವ ಭಾಗವನ್ನು ಕೂಡ ಒಳಗೊಂಡಿರುತ್ತದೆ. ಗ್ರಾಚ್ಯುಟಿ ಮತ್ತು ಪಿಂಚಣಿ ಪ್ರಯೋಜನಗಳಿಗೆ ಯಾವುದೇ ಅರ್ಹತೆ ಇರುವುದಿಲ್ಲ ಎಂಬುದನ್ನು ಗಮನಿಸಬೇಕು. ಯಾವುದೇ ಕ್ಷೇತ್ರದಲ್ಲಿ ಉದ್ಯೋಗಿಗಳ ಗುತ್ತಿಗೆ ಪದ್ಧತಿಯು ಕಾರ್ಮಿಕರಿಗೆ ಖಾತರಿಪಡಿಸಬೇಕಾದ ಹಕ್ಕುಗಳಿಗೆ ಬೆದರಿಕೆಯಾಗಿ ನೋಡುವ ಸ್ಥಿತಿಯಾಗಿದೆ. ಸಶಸ್ತ್ರ ಪಡೆಗಳ ವಿಷಯದಲ್ಲಿ ವರ್ಷಗಳ ತರಬೇತಿ ಮತ್ತು ಬಲವಾದ ಇಚ್ಛಾಶಕ್ತಿಯನ್ನು ಬೇಡುವ ಕೆಲಸವು ಗುತ್ತಿಗೆಯಾಧಾರದಲ್ಲಿ ನೇಮಕಾತಿ ನಡೆದರೆ ಪಡೆಗಳ ಗುಣಮಟ್ಟ ಕುಸಿಯಲು ಕಾರಣವಾಗುತ್ತದೆ. ಅದರೊಂದಿಗೆ ನೇಮಕಗೊಂಡವರ ಹಕ್ಕುಗಳೂ ಪ್ರಶ್ನಾರ್ಥಕ ಚಿಹ್ನೆಯಾಗಿರುತ್ತವೆ ಎಂದರು.

ದೇಶದ ಯುವಜನರ ಕಲ್ಯಾಣ ಮತ್ತು ರಾಷ್ಟದ ಸಾರ್ವಭೌಮತ್ವದ ಹಿತದೃಷ್ಟಿಯಿಂದ ಒಕ್ಕೂಟ ಸರಕಾರವು ಅಗ್ನಿಪಥ್ ಯೋಜನೆಯನ್ನು ತಕ್ಷಣವೇ ಹಿಂಪಡೆಯಬೇಕು. ಸಶಸ್ತ್ರ ಪಡೆಗಳ ಘನತೆಯನ್ನು ಖಾತ್ರಿಪಡಿಸುವಂತೆ ನೇಮಕಾತಿಯನ್ನು ನಡೆಸಲು ಕ್ರಮ ಕೈಗೊಳ್ಳಬೇಕು ಎಂದು ಡಿವೈಎಫ್ಐ ರಾಜ್ಯ ಸಮಿತಿ ಒತ್ತಾಯಿಸಿದೆ. ರಾಷ್ಟದ ಸಾರ್ವಭೌಮತ್ವಕ್ಕೆ ಸವಾಲಾಗುವ ಈ ಯೋಜನೆಯನ್ನು ಪ್ರತಿರೋಧಿಸಲು ದೇಶದ ಯುವಜನರು ಮುಂದಾಗಬೇಕೆಂದು ಕರೆ ನೀಡಿದೆ.

8 ವರ್ಷಗಳಲ್ಲಿ ಭರ್ತಿಮಾಡದ ಹುದ್ದೆಗಳ ಸಂಖ್ಯೆ 11 ಲಕ್ಷಕ್ಕೇರಿದ ನಂತರ 18 ತಿಂಗಳಲ್ಲಿ 10 ಲಕ್ಷ ನೇಮಕಾತಿಯ 'ಮಿಷನ್' !

"ಪ್ರಧಾನಿ ನರೇಂದ್ರ ಮೋದಿ ಎಲ್ಲ ಇಲಾಖೆಗಳು ಮತ್ತು ಸಚಿವಾಲಯಗಳಲ್ಲಿ ಮಾನವ ಸಂಪನ್ಮೂಲಗಳ ಸ್ಥಿತಿ–ಗತಿಯನ್ನು ಪರಾಮರ್ಶಿಸಿದರು ಮತ್ತು ಮುಂದಿನ 1.5 ವರ್ಷಗಳಲ್ಲಿ 10 ಲಕ್ಷ ಜನಗಳ ನೇಮಕಾತಿಯನ್ನು ಮಿಷನ್ ವಿಧಾನದಲ್ಲಿ ಮಾಡಬೇಕೆಂದು ಸೂಚನೆ ನೀಡಿದ್ದಾರೆ" ಎಂದು ಜೂಬ್ಬ 14ರ ಬೆಳಿಗ್ಯೆ ಪ್ರಧಾನ ಮಂತ್ರಿಗಳ ಕಚೇರಿ ಟ್ವೀಟ್ ಮಾಡಿತು. ಈ ಸೂಚನೆಯ ಬೆನ್ನ ಹಿಂದೆಯೇ. ಆಗಲೇ ಗೃಹ ಮಂತ್ರಾಲಯದಲ್ಲಿ ಈ 'ಮಿಷನ್' ಆರಂಭವಾಗಿದೆ ಎಂದೂ ಸುದ್ದಿ ಬಂದಿದೆ.

ದೇಶದಲ್ಲಿ ಹೆಚ್ಚುತ್ತಿರುವ ನಿರುದ್ಯೋಗದ ಬಗ್ಗೆ ಬರುತ್ತಿರುವ ವಿಶ್ಲೇಷಣೆ–ವಿಮರ್ಶೆಗಳು ಮತ್ತು ಈ ಬಗ್ಗೆ ಪ್ರತಿಪಕ್ಷಗಳ ಸತತ ಟೀಕೆ–ಟಿಪ್ಪಣಿಗಳ ಹಿನ್ನೆಲೆಯಲ್ಲಿ ಪ್ರಧಾನ ಮಂತ್ರಿಗಳ ಈ ನಿರ್ದೇಶನ ಬಂದಿದೆ; ಅಂದರೆ, 2024ರ ಲೋಕಸಭೆ ಚುನಾವಣೆಯ ಸಮಯದಲ್ಲಿ ನಿರುದ್ಯೋಗ ಸಮಸ್ಯೆಯ ಕುರಿತು ತನ್ನ ಸರ್ಕಾರದ ವಿರುದ್ಧ ಪ್ರತಿಪಕ್ಷಗಳ ಟೀಕೆಗಳನ್ನು ಎದುರಿಸಲು ಆಡಳಿತಾರೂಢ ಭಾರತೀಯ ಜನತಾ ಪಕ್ಷವು (ಬಿಜೆಪಿ) ಏನಾದರೂ ಗಟ್ಟಿಯಾಗಬೇಕೆಂದು ಆಶಿಸುತ್ತಿದೆ ಎಂದು ರಾಜಕೀಯ ವೀಕ್ಷಕರು ಹೇಳುತ್ತಿದ್ದಾರೆ.

2014ರಲ್ಲಿ ಬಿಜೆಪಿ ಪ್ರತಿವರ್ಷ 2 ಕೋಟಿಯಂತೆ ಉದ್ಯೋಗಗಳನ್ನು ಸೃಷ್ಟಿಸುತ್ತದೆ ಎಂದು ಆಶ್ವಾಸನೆ ನೀಡಿತ್ತು. ಇದರ ಪ್ರಕಾರ ಇದುವರೆಗೆ 16 ಕೋಟಿ ಹೊಸ ಉದ್ಯೋಗಗಳು ಸೃಷ್ಟಿಯಾಗಬೇಕಿತ್ತು. ಹಾಗಾಗಿಲ್ಲೆಂಬುದೇ ಈ ಟೀಕೆ–ಟಿಪ್ಪಣಿಗಳಿಗೆ ಕಾರಣ.

ಸಹಜವಾಗಿಯೇ ಈ 'ಮಿಷನ್' ಪ್ರಕಟಣೆಗೆ ಪ್ರತಿಪಕ್ಷಗಳ ತೀಕ್ಷ್ಣ ಟಿಪ್ಪಣಿಗಳು ಬಂದಿವೆ.

ಪ್ರತಿವರ್ಷ ಕೋಟ್ಯಂತರ ಉದ್ಯೋಗಳ ತನ್ನ ಆಶ್ವಾಸನೆ ಈಡೇರಿಸುವಲ್ಲಿ ವಿಫಲರಾಗಿರುವ ಮೋದಿ ಈಗ, ದಾಖಲೆ ಮಟ್ಟದ ನಿರುದ್ಯೋಗದ ಎದುರಲ್ಲಿ ತನ್ನ ಶೋಚನೀಯ ದಾಖಲೆಯಿಂದ ಟೀಕೆಯನ್ನು ಬೇರೆಡೆ ತಿರುಗಿಸಲಿಕ್ಕಾಗಿ ಇದನ್ನು ಪ್ರಕಟಿಸಿದ್ದಾರೆ ಎಂದು ಸಿಪಿಐ(ಎಂ) ಟೀಕಿಸಿದೆ.

ಮೋದಿ ಸರಕಾರ ಅಧಿಕಾರಕ್ಕೆ ಬಂದಾಗ, 2014ರಲ್ಲಿ ಕೇಂದ್ರ ಸರಕಾರದಲ್ಲಿ ಖಾಲಿ ಹುದ್ದೆಗಳ ಸಂಖ್ಯೆ 4.21ಲಕ್ಷ ಇತ್ತು. ಈಗ 8 ವರ್ಷಗಳ ನಂತರ ಖಾಲಿ ಇರುವ ಹುದ್ದೆಗಳ ಸಂಖ್ಯೆ 11 ಲಕ್ಷಕ್ಕೆ ಏರಿದೆ. ಪ್ರಧಾನಿಗಳು ತನ್ನ ಈ ಹೊಸ ಭರ್ತಿ ಮಿಷನ್‌ಗೆ ಬೆನ್ನು ತಟ್ಟಿಕೊಳ್ಳುವ ಮೊದಲು, ಇದುವರೆಗೆ ನೇಮಕಾತಿಯ ಮೇಲೆ ನಿಷೇದವಿತ್ತೇ ಎಂದು ವಿವರಣೆ ನೀಡಬೇಕಾಗಿದೆ ಎಂದು ಕೇರಳದ ಮಾಜಿ ಹಣಕಾಸು ಮಂತ್ರಿ ಪ್ರೊ. ಥಾಮಸ್ ಐಸ್ಯಾಕ್ ಹೇಳಿದ್ದಾರೆ.

ಎಂದಿನ ವರೆಗೆ ಈ 'ಜುಮ್ಲಾಬಾಜಿ' ಎಂದು ಕಾಂಗ್ರೆಸ್ ವಕ್ತಾರ ಕೇಳಿದ್ದಾರೆ.

ಆಗಾಗ ನಿರುದ್ಯೋಗದ ಪ್ರಶ್ನೆಯನ್ನು ಎತ್ತುತ್ತಿರುವ ಬಿಜೆಪಿಯ ನಾಯಕ ವರುಣ್ ಗಾಂಧಿ ಕೂಡ ನಿರುದ್ಯೋಗಿ ಯುವಜನರ "ನೋವು ಮತ್ತು ವೇದನೆ"ಯನ್ನು ಅರ್ಥ ಮಾಡಿಕೊಂಡಿದ್ದಾರೆ ಎಂದು ಈ ಪ್ರಕಟಣೆಯನ್ನು ಸ್ವಾಗತಿಸುತ್ತಲೇ, ನಿರುದ್ಯೋಗವು ದೇಶದ ಅತ್ಯಂತ ಜ್ವಲಂತ ಸಮಸ್ಯೆಯಾಗಿರುವುದರಿಂದ ಹೊಸ ಉದ್ಯೋಗಾವಕಾಶಗಳನ್ನು ಸೃಷ್ಟಿಸಲು ಮತ್ತು ಒಂದು ಕೋಟಿಗೂ ಹೆಚ್ಚು "ಮಂಜೂರಾದ" ಖಾಲಿಹುದ್ದೆಗಳನ್ನು ಭರ್ತಿ ಮಾಡಲು ಅರ್ಥಪೂರ್ಣ ಪ್ರಯತ್ನಗಳನ್ನು ಮಾಡಬೇಕಾಗಿದೆ ಎಂದು ಟ್ವೀಟ್ ಮಾಡಿದ್ದಾರೆ.

ಅಂಕಿ ಅಂಶಗಳ ಪ್ರಕಾರ– ಭಾರತದಲ್ಲಿ ಕೊವಿಡ್ ಮಹಾಸೋಂಕಿನಿಂದಾಗಿ ಉದ್ಯೋಗ ಕಳೆದುಕೊಂಡ ಒಟ್ಟು ಸಂಬಳದಾರರ ಸಂಖ್ಯೆ 1.89 ಕೋಟಿ. ಅನೌಪಚಾರಿಕ ವಲಯದ ಚಟುವಟಿಕೆಗಳಿಂದಾಗಿ, ಒಟ್ಟಾರೆ ಉದ್ಯೋಗ ದರದಲ್ಲಿ ಚೇತರಿಕೆಯ ಹೊರತಾಗಿಯೂ ಇದು ಸಂಭವಿಸಿದೆ ಎಂದು ಸಿ.ಎಂ.ಐ.ಇ. ಕಲೆ ಹಾಕಿದ ಮಾಹಿತಿಗಳು ಹೇಳುತ್ತವೆ.

ಸುಮಾರು 80% ಕಾರ್ಮಿಕರು ನಗರ ಪ್ರದೇಶಗಳಲ್ಲಿ ಮತ್ತು 56% ಗ್ರಾಮೀಣ ಪ್ರದೇಶಗಳಲ್ಲಿ ತಮ್ಮ ಉದ್ಯೋಗವನ್ನು ಕಳೆದುಕೊಂಡಿದ್ದಾರೆ ಎಂದು 'ಸೆಂಟರ್ ಫಾರ್ ಸಸ್ಟೈನಬಲ್ ಎಂಪ್ಲಾಯ್ಮೆಂಟ್'ನ ಮತ್ತೊಂದು ಅಧ್ಯಯನವು ಹೇಳುತ್ತದೆ.

ವೇತನ ಮತ್ತು ಭತ್ಯೆಗಳ ಮೇಲಿನ ವೆಚ್ಚದ ಇಲಾಖೆಯ ಇತ್ತೀಚಿನ ವಾರ್ಷಿಕ ವರದಿಯ ಪ್ರಕಾರ, ಮಾರ್ಚ್ 1, 2020 ರ ವೇಳೆಗೆ ಒಟ್ಟು ಸಾಮಾನ್ಯ ಕೇಂದ್ರ ಸರ್ಕಾರಿ ಸಿವಿಲಿಯನ್ ಉದ್ಯೋಗಿಗಳ ಸಂಖ್ಯೆ 31.91 ಲಕ್ಷ. ಆದರೆ ಮಂಜೂರಾಗಿರುವ ಉದ್ಯೋಗಳ ಸಂಖ್ಯೆ 40.78 ಲಕ್ಷ. ಅಂದರೆ 21.75% ಹುದ್ದೆಗಳು ಖಾಲಿ ಇವೆ.

ಈ ವರದಿಯ ಪ್ರಕಾರ ಒಟ್ಟು ಮಾನವಶಕ್ತಿಯ ಸುಮಾರು 92% ರೈಲ್ವೇ, ರಕ್ಷಣಾ (ಸಿವಿಲಿಯನ್), ಗೃಹ ವ್ಯವಹಾರಗಳು, ಅಂಚೆ ಮತ್ತು ರೆವಿನ್ಯೂ ಈ ಐದು ಪ್ರಮುಖ ಸಚಿವಾಲಯಗಳು ಅಥವಾ ಇಲಾಖೆಗಳಲ್ಲೇ ಇವೆ.

ಒಟ್ಟು 31.33 ಲಕ್ಷ (ಕೇಂದ್ರಾಡಳಿತ ಪ್ರದೇಶಗಳನ್ನು ಹೊರತುಪಡಿಸಿ) ಉದ್ಯೋಗಳಲ್ಲಿ, ರೈಲ್ವೆಯ ಶೇಕಡಾವಾರು ಪಾಲು 40.55, ಗೃಹ ವ್ಯವಹಾರಗಳು 30.5, ರಕ್ಷಣಾ (ಸಿವಿಲಿಯನ್) 12.31, ಹುದ್ದೆಗಳು 5.66, ಕಂದಾಯ 3.26 ಮತ್ತು ಇತರ ಎಲ್ಲಾ ಸಚಿವಾಲಯಗಳು ಮತ್ತು ಇಲಾಖೆಗಳು 7.72.

ಈ ವರದಿಯ ಪ್ರಕಾರ, ಕೇಂದ್ರ ಪೊಲೀಸ್ ಪಡೆಗಳಲ್ಲಿ ಮಾರ್ಚ್ 1, 2020 ರ ವೇಳೆಗೆ ಮಂಜೂರಾದ ಬಲ 10.16 ಲಕ್ಷ, ಆದರೆ ಉದ್ಯೋಗಿಗಳ ಸಂಖ್ಯೆ 9.05 ಲಕ್ಷ.

ಒಟ್ಟಿನಲ್ಲಿ, ಮುಂದಿನ 1.5 ವರ್ಷಗಳಲ್ಲಿ 10ಲಕ್ಷ ಯುವಜನರ ನೇಮಕಾತಿ ನಡೆದರೂ(ಈ ಬಗ್ಗೆಯೇ ಹಲವರಿಗೆ ಸಂದೇಹಗಳಿವೆ) ಅದು ಹೊಸ ಉದ್ಯೋಗಗಳ ಸೃಷ್ಟಿಯಂತೂ ಅಲ್ಲ.

ಅಮೃತ ಕಾಲವಿದು!



ವ್ಯಂಗ್ಯಚಿತ್ರ: ಸಂದೀಪ ಅಧ್ವರ್ಯು, ಟೈಂಸ್ ಆಫ್ ಇಂಡಿಯ

ಕಾರ್ಪೊರೇಟ್–ಕೋಮುವಾದ ಮೈತ್ರಿ
ಐದು ಸುದ್ದಿಗಳಲ್ಲಿ ಒಂದು ಚಿತ್ರ

1. ಡಿಸೆಂಬರ್27, 2021ರ ಸುದ್ದಿ
   ಅದಾನಿ ಗುಂಪು ಆಸ್ಟ್ರೇಲಿಯಾದ ಗಣಿಯಿಂದ ಕಲ್ಲಿದ್ದಲು ರಫ್ತು ಆರಂಭಿಸಲಿದೆ. ಇದು ಸುಮಾರಾಗಿ ಎಲ್ಲವೂ ಭಾರತಕ್ಕೆ ಹೋಗುತ್ತದೆ.
2. ಎಪ್ರಿಲ್ 4, 2022ರ ಸುದ್ದಿ
   ಹೊಸ ಮುಕ್ತ ವ್ಯಾಪಾರ ಒಪ್ಪಂದದ ಅಡಿಯಲ್ಲಿ ಭಾರತಕ್ಕೆ ಆಸ್ಟ್ರೇಲಿಯಾದಿಂದ ಕಲ್ಲಿದ್ದಲು ಆಮದಿಗೆ ಶೂನ್ಯ ಸುಂಕ
3. ಮೇ 21, 2022 ರ ಸುದ್ದಿ
   ಭಾರತ ಕಲ್ಲಿದ್ದಲು ಮೇಲಿನ ಆಮದು ಸುಂಕವನ್ನು 2.5% ದಿಂದ 0% ಕ್ಕೆ ಇಳಿಸಿದೆ.
4. ಜೂನ್ 4, 2022 ರ ಸುದ್ದಿ
   1.2 ಕೋಟಿ ಟನ್ ಕಲ್ಲಿದ್ದಲು ಆಮದು ಮಾಡಲು ಸಿದ್ಧವಾಗಿರಬೇಕು ಎಂದು ಕೋಲ್ ಇಂಡಿಯಾಕ್ಕೆ ಭಾರತ ಸರಕಾರ ಹೇಳಿದೆ.
5. ಜೂನ್ 6, 2022 ರ ಸುದ್ದಿ
   ಎನ್‌ಟಿಪಿಸಿ ರೂ. 8308 ಕೋಟಿಯ ಕಲ್ಲಿದ್ದಲು ಆಮದು ಟೆಂಡರನ್ನು ಅದಾನಿ ಎಂಟರ್‌ಪ್ರೈಸಸ್ ಗೆ ಕೊಟ್ಟಿದೆ.

(ಕೃಪೆ: ಬಿಸಿನೆಸ್ ಸ್ಟಾಂಡರ್ಡ್)



'ಕ್ಯಾ ಹುಕುಂ ಹೈ ಮೇರೇ ಆಕಾ?'

ಏನಪ್ಪಣೆ ಬುದ್ಧೀ?

ವ್ಯಂಗ್ಯಚಿತ್ರ: ರಿಮಿಕ್ಸ್‌ಕಾಮಿಕ್ಸ್

ಭೀಮ–ಕೊರೆಗಾಂವ್ ಆರೋಪಿಗಳ ವಿರುದ್ಧ ಸಾಕ್ಷ್ಯ ನೆಡುವಲ್ಲಿ ಪುಣೆ ಪೋಲೀಸ್ ಪಾತ್ರವಿದೆಯೇ?!

ಭೀಮ–ಕೊರೆಗಾಂವ್ ಪ್ರಕರಣದಲ್ಲಿ ಪುಣೆ ಪೊಲೀಸರು ಬಂಧಿಸಿರುವ ಕನಿಷ್ಟ ಇಬ್ಬರ – ರಾನ ವಿಲ್ಸನ್ ಮತ್ತು ವರವರ ರಾವ್–ಲ್ಯಾಪ್‌ಟಾಪ್‌ಗಳಲ್ಲಿ ಅವರ ವಿರುದ್ಧ ಸಾಕ್ಷ್ಯಗಳನ್ನು ಕೆಲವು ಅನಾಮಧೇಯ ಹ್ಯಾಕರ್‌ಗಳು ನೆಟ್ಟಿದಾರೆ ಎಂದು ಅಪರಾಧ ಪತ್ತೆ ವಿಶ್ಲೇಷಕರು (ಫೊರೆನ್ಸಿಕ್ ಅನಾಲಿಸ್ಟ್) ಹೇಳಿದ್ದರು ಎಂದು ಒಂದು ವರ್ಷದ ಹಿಂದೆ ವರದಿಯಾಗಿತ್ತು.

ಇಂತಹ ಕೆಲಸ ಮಾಡಲು ನೆರವಾಗುವ ಪೆಗಸಸ್ ಗೂಢಚರ್ಯೆ ತಂತ್ರಾಂಶವನ್ನು ತಾನು ಸರಕಾರೀ ಸಂಸ್ಥೆಗಳಿಗೆ ಮಾತ್ರ ಮಾರುವುದು ಎಂದು ಆ ತಂತ್ರಾಂಶದ ಮಾಲಕ ಕಂಪನಿ ಎನ್‌ಎಸ್‌ಒ ಗ್ರುಪ್ ಹೇಳಿದ್ದರೂ, ಭಾರತದಲ್ಲಿ ಯಾವ ಸರಕಾರೀ ಸಂಸ್ಥೆಯೂ ಅದನ್ನು ಖರೀದಿಸಿದ ದಾಖಲೆ ಇಲ್ಲ ಎನ್ನಲಾಗಿತ್ತು. ಅದೇ ರೀತಿ ಆ ಅನಾಮಧೆಯ ಹ್ಯಾಕರ್‌ಗಳು ಯಾವುದೇ ಸರಕಾರೀ ಸಂಸ್ಥೆಯೊಂದಿಗೆ ಸಂಪರ್ಕ ಹೊಂದಿದ್ದಾರೆಯೇ ಎಂದು ತಿಳಿದಿರಲಿಲ್ಲ.

ಈಗ ಬಂದಿರುವ ಸುದ್ದಿಯ ಪ್ರಕಾರ, 'ಸೆಂಟಿನೆಲ್ ಒನ್' ಎಂಬ ಭದ್ರತಾ ಕಂಪನಿಯ ಸಂಶೋಧಕರ ತಂಡದ ಒಬ್ಬರು ಆ ಹ್ಯಾಕರ್‌ಗಳು ಒಂದು ಭಾರತೀಯ ಸರಕಾರೀ ಸಂಸ್ಥೆಯೊಂದಿಗೆ ಸಂಪರ್ಕದಲ್ಲಿದ್ದರು ಎಂದು ಕಂಡು ಬಂದಿರುವುದಾಗಿ ಹೇಳಿದ್ದಾರೆ. ಆ ಸಂಸ್ಥೆ ಬೇರಾವುದೇ ಅಲ್ಲ, ಸ್ವತಃ ಪುಣೆ ಪೋಲೀಸ್, ಇಂತಹ ಸಾಕ್ಷ್ಯದ ಆಧಾರದಲ್ಲೇ ಈ ಪ್ರಕರಣದಲ್ಲಿ ಆರೋಪಿಗಳೆಂದು ಬಂಧಿಸಿದ್ದ ಪುಣೆ ಪೋಲಿಸರು! (ವೈರ್ಡ್.ಕಾಂ, ಜೂನ್26)

ಈ 'ಆರೋಪಿ'ಗಳನ್ನು ಬಂಧಿಸಿದ ವ್ಯಕ್ತಿಗಳು ಮತ್ತು ಅದಕ್ಕೆ ಆಧಾರವಾದ ಸಾಕ್ಷ್ಯವನ್ನು ನೆಟ್ಟ ವ್ಯಕ್ತಿಗಳ ನಡುವೆ ಸಾಬೀತು ಮಾಡಬಹುದಾದ ಸಂಪರ್ಕ ಇತ್ತು ಎಂದು ಈ ಸಂಶೋಧಕರಲ್ಲಿ ಒಬ್ಬರಾದ ಯುವಾನ್ ಆಂದ್ರೆಸ್ ಗುವೆರೋ ಸಾದೆ ಎಂಬವರು ಹೇಳಿರುವುದಾಗಿ ವರದಿಯಾಗಿದೆ.

ಅಂದರೆ ಈ 16ಮಂದಿಯನ್ನು ಬಂಧಿಸುವ ಒಂದು ಪಿತೂರಿ ಇತ್ತೇ, ಪುಣೆ ಪೋಲೀಸರು ಸಾಕ್ಷ್ಯ ಎಂದು ಸಲ್ಲಿಸಿರುವುದು ಸುಳ್ಳು ಎಂದು ಗೊತ್ತಿದ್ದೂ ಈ ರೀತಿ ಉದ್ದೇಶಪೂರ್ವಕವಾಗಿ ದುಷ್ಟತನದಿಂದ ವರ್ತಿಸಿದ್ದಾರೆಯೇ? ಮೇಲ್ನೋಟಕ್ಕೆ ಹಾಗೆಂದೇ ಕಾಣುತ್ತದೆ. ಆದರೆ ಇದನ್ನು ಸ್ವತಂತ್ರವಾಗಿ ಪುಷ್ಟೀಕರಿಸಬೇಕಾಗಿದೆ ಎಂದು ಈ 'ಆರೋಪಿ'ಗಳಲ್ಲಿ ಹಲವರ ಪರವಾಗಿ ವಾದಿಸುತ್ತಿರುವ ಮಿಹಿರ್ ದೇಸಾಯಿ ಹೇಳಿದ್ದಾರೆ.

ಇದು ಪೋಲೀಸ್ ಮುಂತಾದ ಕಾನೂನು ಅನುಷ್ಠಾನ ಸಂಸ್ಥೆಗಳ ಕೈಗಳಲ್ಲಿ ಇಂತಹ ಹ್ಯಾಕಿಂಗ್ ಸಾಧನಗಳ ಅಪಾಯದ ಹೊಸ ಕಳವಳಕಾರಿ ಉದಾಹರಣೆ, ಎನ್ನುವ ಈ ಸಂಶೋಧಕರು, ಇಂತಹ, ಕಂಪ್ಯೂಟರ್‌ಗಳಿಂದ ಪೊಲೀಸರು ಪಡೆಯುವ ಸಾಕ್ಷ್ಯಗಳು ನಂಬಲರ್ಹವೇ ಎಂದೂ ಕೇಳುತ್ತಾರೆ.

ಸಗಟು ಹಣದುಬ್ಬರ ಮೇ ನಲ್ಲಿ 15.88% – ದಾಖಲೆ ಏರಿಕೆ

ಆಹಾರ ಪದಾರ್ಥಗಳು ಮತ್ತು ಕಚ್ಚಾ ತೈಲದ ಬೆಲೆ ಏರಿಕೆಯಿಂದಾಗಿ ಸಗಟು ಬೆಲೆ ಆಧಾರಿತ ಹಣದುಬ್ಬರವು ಮೇ ತಿಂಗಳಲ್ಲಿ ದಾಖಲೆಯ ಗರಿಷ್ಟ 15.88% ಕ್ಕೆ ಏರಿದೆ. ಏಪ್ರಿಲ್‌ನಲ್ಲಿ ಇದು 15.08% ಮತ್ತು ಕಳೆದ ವರ್ಷ ಮೇನಲ್ಲಿ 13.11% ಆಗಿತ್ತು. 2011–12ರ ಬೆಲೆಗಳ ಸರಣಿಯಲ್ಲಿ ಇದು ಅತೀ ಹೆಚ್ಚು ಏರಿಕೆ ಎನ್ನಲಾಗಿದೆ.

"ಮೇ, 2022 ರಲ್ಲಿ ಹೆಚ್ಚಿನ ಹಣದುಬ್ಬರ ದರವು ಪ್ರಾಥಮಿಕವಾಗಿ ಖನಿಜ ತೈಲಗಳು, ಕಚ್ಚಾ ಪೆಟ್ರೋಲಿಯಂ ಮತ್ತು ನೈಸರ್ಗಿಕ ಅನಿಲ, ಆಹಾರ ಪದಾರ್ಥಗಳು, ಮೂಲ ಲೋಹಗಳು, ಆಹಾರೇತರ ವಸ್ತುಗಳು, ರಾಸಾಯನಿಕ ಉತ್ಪನ್ನಗಳು ಮತ್ತು ಆಹಾರ ಉತ್ಪನ್ನಗಳು ಇತ್ಯಾದಿಗಳ ಬೆಲೆಗಳಲ್ಲಿ ಏರಿಕೆಯಾಗಿದೆ" ಎಂದು ವಾಣಿಜ್ಯ ಮತ್ತು ಕೈಗಾರಿಕಾ ಸಚಿವಾಲಯ ಹೇಳಿಕೆಯಲ್ಲಿ ತಿಳಿಸಿದೆ.

ಕಳೆದ ವರ್ಷ ಏಪ್ರಿಲ್‌ನಂದ ಸತತ 14ನೇ ತಿಂಗಳಿಗೆ ಸಗಟು ಹಣದುಬ್ಬರ ಎರಡಂಕಿಯಲ್ಲಿಯೇ ಮುಂದುವರೆದಿದೆ. ಮತ್ತು ಸತತ ಮೂರು ತಿಂಗಳುಗಳಿಂದ ಏರುತ್ತಲೇ ಇದೆ. ಮೇ ತಿಂಗಳಲ್ಲಿ ಆಹಾರ ವಸ್ತುಗಳ ಹಣದುಬ್ಬರವು 12.34% ರಷ್ಟಿತ್ತು, ಏಕೆಂದರೆ ತರಕಾರಿಗಳು, ಗೋಧಿ, ಹಣ್ಣುಗಳು ಮತ್ತು ಆಲೂಗೆಡ್ಡೆಗಳ ಬೆಲೆಗಳು ಹಿಂದಿನ ವರ್ಷದ ಅವಧಿಯಲ್ಲಿ ತೀವ್ರ ಏರಿಕೆ ಕಂಡವು.

ತರಕಾರಿಗಳ ಬೆಲೆ ಏರಿಕೆ ದರವು 56.36%, ಗೋಧಿಯಲ್ಲಿ ಇದು 10.55% ಮತ್ತು ಮೊಟ್ಟೆ, ಮಾಂಸ ಮತ್ತು ಮೀನುಗಳಲ್ಲಿ ಹಣದುಬ್ಬರವು 7.78%.ಇಂಧನ ಮತ್ತು ವಿದ್ಯುತ್ ವಲಯದಲ್ಲಿ ಹಣದುಬ್ಬರವು 40.62%, ತಯಾರಿಸಿದ ಉತ್ಪನ್ನಗಳು ಮತ್ತು ಎಣ್ಣೆ ಬೀಜಗಳಲ್ಲಿ ಇದು ಕ್ರಮವಾಗಿ 10.11% ಮತ್ತು 7.08% ರಷ್ಟಿದೆ.



ಅರ್ಥವ್ಯವಸ್ಥೆಯು ಸಂಪೂರ್ಣವಾಗಿ ಒಂದು ನಿಶ್ಚಲ ಸ್ಥಿತಿಯಲ್ಲಿದ್ದಾಗ, ಅಲ್ಲಿಂದ ಹೊರಬರುವುದು ಬಹಳ ಕಷ್ಟ. ಅದಕ್ಕೆ ಕಾರಣವೂ ಸಹ ಸರಳವಾಗಿದೆ... ಅರ್ಥವ್ಯವಸ್ಥೆಯು ಒಂದು ಸ್ಥಗಿತತೆಗೆ ಒಳಗಾದರೆ, ಬಳಕೆಯು ಹೆಚ್ಚಲು ಕಾರಣವೇ ಇರುವುದಿಲ್ಲ. ಬಳಕೆಯು ಮೂಲತಃ ಆದಾಯಗಳ ಮಟ್ಟವನ್ನು ಅವಲಂಬಿಸಿರುವುದರಿಂದ, ಅರ್ಥವ್ಯವಸ್ಥೆಯು ಸ್ಥಗಿತದ ಸ್ಥಿತಿಯಲ್ಲೇ ಉಳಿಯುತ್ತದೆ. ಹೂಡಿಕೆಯೂ ಸಹ ಹೆಚ್ಚಾಗುವುದಿಲ್ಲ. ಏಕೆಂದರೆ, ಉತ್ಪಾದಕರು ತಮ್ಮ ಉತ್ಪಾದನಾ ಸಾಮರ್ಥ್ಯವನ್ನು ವಿಸ್ತರಿಸುವ ಗೋಜಿಗೆ ಹೋಗುವುದಿಲ್ಲ. ನವ-ಉದಾರವಾದದ ಆಳ್ವಿಕೆಯಲ್ಲಿ ಭಾರತದ ಅರ್ಥವ್ಯವಸ್ಥೆಯ ನಿಶ್ಚಲತೆಯ ಪ್ರವೃತ್ತಿಯು, ನವ-ಉದಾರವಾದವು ಭಾರತದಲ್ಲಿ ಮಾತ್ರವಲ್ಲ, ಇಡೀ ವಿಶ್ವದಲ್ಲಿ ದಾರಿ ಕಾಣದ ಹಂತವನ್ನು ತಲುಪಿದೆ ಎಂಬ ಅಂಶವನ್ನು ಸೂಚಿಸುತ್ತದೆ.

ಪ್ರೊ. ಪ್ರಭಾತ್ ಪಟ್ನಾಯಕ್ ಅನು: ಕೆ.ಎಂ. ನಾಗರಾಜ್

ನಿಂತಲ್ಲೇ ನಿಲ್ಲಲಿದೆ ಭಾರತದ ಅರ್ಥವ್ಯವಸ್ಥೆ

ಬಂಡವಾಳಶಾಹಿ ಅರ್ಥವ್ಯವಸ್ಥೆಯು ಒಂದು "ನಿಶ್ಚಲ ಸ್ಥಿತಿ"ಯಲ್ಲಿ (ಅಂದರೆ, ದೀರ್ಘಾವಧಿಯ ಶೂನ್ಯ ಬೆಳವಣಿಗೆಯ ಸ್ಥಿತಿಯಲ್ಲಿ ಎಂಬ ಅರ್ಥದಲ್ಲಿ) ಪರ್ಯವಸಾನವಾಗುತ್ತದೆ ಎಂಬ ಒಂದು ಆಲೋಚನೆಯು ಅರ್ಥಶಾಸ್ತ್ರಜ್ಞರಾದ ಆಡಮ್ ಸ್ಮಿತ್ ಮತ್ತು ಡೇವಿಡ್ ರಿಕಾರ್ಡೋ ಅವರನ್ನು ಕಾಡಿತ್ತು. ಇಂಥಹ ಒಂದು ಪರಿಸ್ಥಿತಿಯನ್ನು, ಅಂದರೆ, ಉತ್ಪಾದನಾ ಸಾಮರ್ಥ್ಯಕ್ಕೆ ಎಳ್ಳಷ್ಟೂ ಹೊಂದಿರದ ರೀತಿಯಲ್ಲಿ ಅರ್ಥವ್ಯವಸ್ಥೆಯ ಗಾತ್ರವು ಒಂದು ನಿರ್ದಿಷ್ಟ ವರ್ಷದಲ್ಲಿ ಎಷ್ಟಿತ್ತೋ ಅದರ ಮುಂದಿನ ವರ್ಷವೂ ಅಷ್ಟೇ ಮಟ್ಟದಲ್ಲಿ ಬಹಳ ವರ್ಷಗಳ ಕಾಲ ಮುಂದುವರಿಯುವ ಪರಿಸ್ಥಿತಿಯನ್ನು ವಿವರಿಸಲು ಮಾರ್ಕ್ಸ್ "ಸರಳ ಪುನರುತ್ಪತ್ತಿ" ಎಂಬ ಪದವನ್ನು ಬಳಸಿದ್ದರು. ಭಾರತದ ಅರ್ಥವ್ಯವಸ್ಥೆಯು ಈಗ ಅಂತಹ ಒಂದು ಪರಿಸ್ಥಿತಿಯತ್ತ ಸಾಗುತ್ತಿದೆ ಎಂದು ತೋರುತ್ತದೆ.

ಮೋದಿ ಸರ್ಕಾರದ ಪ್ರಚಾರ ಯಂತ್ರವು, ಎಂದಿನಂತೆ, ಅರ್ಥವ್ಯವಸ್ಥೆಯ ಪರಿಸ್ಥಿತಿ ಆಶಾದಾಯಕವಾಗಿದೆ ಎಂದು ಬಿಂಬಿಸಲು ಶತಪ್ರಯತ್ನ ಮಾಡುತ್ತಿದ್ದರೂ ಸಹ, ವಾಸ್ತವ ಪರಿಸ್ಥಿತಿ ಅದಕ್ಕೆ ತದ್ವಿರುದ್ಧವಾಗಿಯೇ ಇದೆ. ಮೋದಿ ಸರ್ಕಾರದ ಈ ಪ್ರಚಾರವು ಅಂಕಗಣಿತದ ಒಂದು ಸರಳವಾದ ಚಮತ್ಕಾರವನ್ನು ಬಳಸಿಕೊಳ್ಳುತ್ತದೆ: ಉತ್ಪಾದನೆಯು 100 ರಿಂದ 90 ಕ್ಕೆ ಕುಸಿದಿದೆ ಎಂದುಕೊಳ್ಳೋಣ. ಆಗ, ಕುಸಿತದ ಪ್ರಮಾಣವನ್ನು ಲೆಕ್ಕ ಹಾಕಿದಾಗ ಅದು ಶೇ.10 ಆಗುತ್ತದೆ. ಮುಂದಿನ ವರ್ಷ ಉತ್ಪಾದನೆಯು ಚೇತರಿಸಿಕೊಂಡು 100ನ್ನು ತಲುಪಿದರೆ, ಆಗ, ಹೆಚ್ಚಳವನ್ನು ಲೆಕ್ಕ ಹಾಕಿದಾಗ ಅದು ಶೇ. 11.1 ಆಗುತ್ತದೆ (ಮೂಲದ ಮೊತ್ತವು ಕಡಿಮೆ ಇದ್ದುದರಿಂದಾಗಿ). ಇಲ್ಲಿರುವ ಏರಿಕೆಯ ದರವು (11.1%) ಕುಸಿತದ ದರಕ್ಕಿಂತ (10%) ಹೆಚ್ಚಾಗಿರುವುದರಿಂದ, ಅರ್ಥವ್ಯವಸ್ಥೆಯು ಬೆಳವಣಿಗೆಯ ಹಾದಿಯಲ್ಲಿದೆ ಎಂಬ ಸುಳ್ಳು ಹೇಳಿಕೆಗೆ ಅವಕಾಶ ಕಲ್ಪಿಸುತ್ತದೆ. ವಾಸ್ತವವಾಗಿ ನೋಡಿದರೆ, ಎರಡು ವರ್ಷಗಳ ಅವಧಿಯಲ್ಲಿ ಯಾವುದೇ ಬೆಳವಣಿಗೆಯಾಗಿಲ್ಲ. ಮೋದಿ ಸರ್ಕಾರವು ಮಾಡುತ್ತಿರುವುದು ಇಂತಹ ಚಮತ್ಕಾರವನ್ನೇ, ನೀಡುತ್ತಿರುವುದು ಇಂತಹ ಸುಳ್ಳು ಹೇಳಿಕೆಗಳನ್ನೇ.

ಹೋಲಿಕೆಯ ಉದ್ದೇಶಕ್ಕಾಗಿ, ಕೊರೊನಾ ತೀವ್ರವಾಗಿದ್ದ 2020-21 ವರ್ಷವನ್ನು ನಾವು ಬಿಟ್ಟುಬಿಡೋಣ. ಕೊರೊನಾದ ಹಿಂದಿನ ಮತ್ತು ಅದರ ಮುಂದಿನ ವರ್ಷಗಳನ್ನು ಗಣನೆಗೆ ತೆಗೆದುಕೊಳ್ಳೋಣ. 2019-20 ಮತ್ತು 2021-22ರ ನಡುವೆ, ಜಿಡಿಪಿಯು ಕೇವಲ 1.5%ನಷ್ಟು ಹೆಚ್ಚಾಗಿದೆ. ಈ ಹೆಚ್ಚಳವು ಈ ಎರಡು ವರ್ಷಗಳ ನಡುವೆ ಆಗಿರುವ ಜನಸಂಖ್ಯೆಯ 2% ಹೆಚ್ಚಳಕ್ಕಿಂತಲೂ ಕೆಳಗಿದೆ. 2019-20ಕ್ಕೆ ಹೋಲಿಸಿದರೆ, ತಲಾವಾರು ನೈಜ ಜಿಡಿಪಿಯು 2021-22ರಲ್ಲಿ ಇಳಿಕೆಯಾಗಿದೆ.

ಸ್ಥಗಿತತೆಯ ಹಿಂದಿರುವ ಅಂಶಗಳು

ಅರ್ಥವ್ಯವಸ್ಥೆಯ ಈ ಸ್ಥಗಿತತೆಯ ಹಿಂದಿರುವ ಅಂಶಗಳು ಪರೀಕ್ಷಾರ್ಹವಾಗಿವೆ. 2019-20ಕ್ಕೆ ಹೋಲಿಸಿದರೆ, 2021-22ರಲ್ಲಿ ಬಳಕೆಯು (ಅಂದರೆ, ಖಾಸಗಿ ಬಳಕೆಯ ಅಂತಿಮ ವೆಚ್ಚಗಳು) ಸುಮಾರು 1.5% ಹೆಚ್ಚಾಗಿದೆ, ನಿಜ. ಒಟ್ಟು ಸ್ಥಿರ ಬಂಡವಾಳ ಹೂಡಿಕೆಯೂ 3.75% ರಷ್ಟು ಹೆಚ್ಚಾಗಿದೆ, ನಿಜ. ಆದರೆ, ಬಳಕೆಯ ಹೆಚ್ಚಳದ ದರಕ್ಕೆ ಹೋಲಿಸಿದರೆ, ಹೂಡಿಕೆಯ ಬೆಳವಣಿಗೆಯ ದರವು ತುಸು ಹೆಚ್ಚಿನ ಮಟ್ಟದಲ್ಲಿರುವುದು ಕಂಡುಬರುತ್ತದೆ. ಅದಕ್ಕೆ ಕಾರಣವೆಂದರೆ, ಲಾಕ್‌ಡೌನ್ ದಿನಗಳಿಂದಲೂ ಹೂಡಿಕೆಯ ಅನೇಕ ಯೋಜನೆಗಳು ಮುಂದೂಡಲ್ಪಟ್ಟಿದ್ದವು. ಹೂಡಿಕೆಯ ಈ ಹೆಚ್ಚಳವು ಬಹುಶಃ ಕೆಲವು ವಲಯಗಳಲ್ಲಿ ಆಧುನೀಕರಣದ ವೆಚ್ಚಗಳಿಂದಲೂ ಆಗಿರಬಹುದು. ಈ ಎರಡೂ ಸಂದರ್ಭಗಳಲ್ಲೂ ಹೂಡಿಕೆಯ ಈ ಹೆಚ್ಚಿನ ದರವನ್ನು ದೀರ್ಘಾವಧಿಯಲ್ಲಿ ಉಳಿಸಿಕೊಳ್ಳಲಾಗದು. ಹೂಡಿಕೆಯ ಬೆಳವಣಿಗೆ ದರ ಕಡಿಮೆಯಾದಂತೆಯೇ, ಬಳಕೆಯ ಬೆಳವಣಿಗೆ ದರವೂ ಕಡಿಮೆಯಾಗುತ್ತದೆ. ಇದನ್ನು ಅರ್ಥಶಾಸ್ತ್ರಜ್ಞರು "ಗುಣಕ" ಪರಿಣಾಮ ಎಂದು ಕರೆಯುತ್ತಾರೆ. ಅಂದರೆ, ತಗ್ಗಿದ ಹೂಡಿಕೆಯು ಉತ್ಪಾದನೆಯನ್ನು ಕಡಿಮೆ ಮಾಡುತ್ತದೆ ಮತ್ತು ಅದರ ಪರಿಣಾಮವಾಗಿ ಉದ್ಯೋಗಗಳು ಇಳಿಯುತ್ತವೆ ಮತ್ತು ಬಳಕೆಗಾಗಿ ಬೇಡಿಕೆಯೂ ಇಳಿಯುತ್ತದೆ. ಈ ವಿದ್ಯಮಾನವು ಒಟ್ಟಿನಲ್ಲಿ ಅರ್ಥವ್ಯವಸ್ಥೆಯನ್ನು ಒಂದು ನಿಶ್ಚಲ ಸ್ಥಿತಿಯತ್ತ ಅಥವಾ ಸರಳ ಪುನರುತ್ಪತ್ತಿಯತ್ತ ಇನ್ನಷ್ಟು ಬಲವಾಗಿ ತಳ್ಳುತ್ತದೆ. ವಾಸ್ತವಿಕವಾಗಿ ಅರ್ಥವ್ಯವಸ್ಥೆಯು ಈಗಾಗಲೇ ನಿಶ್ಚಲವಾಗಿದೆ. ತಲಾವಾರು ಲೆಕ್ಕಾಚಾರದಲ್ಲಿ ನೋಡಿದರೆ, ಹಿಮ್ಮುಖ ಚಲನೆ ಕಂಡುಬರುತ್ತದೆ. ಹೀಗೆ, ಅರ್ಥವ್ಯವಸ್ಥೆಯು ಒಂದು ನಿಶ್ಚಲ ಸ್ಥಿತಿಯತ್ತ ಚಲಿಸುತ್ತಿದೆ. ಮತ್ತು, ತಲಾವಾರು ಲೆಕ್ಕಾಚಾರದಲ್ಲಿ ನೋಡಿದಾಗ, ಅರ್ಥವ್ಯವಸ್ಥೆಯ ಹಿಮ್ಮುಖ ಚಲನೆಯನ್ನು ಸ್ಪಷ್ಟವಾಗಿ ಗಮನಿಸಬಹುದಾಗಿದೆ.

ಅರ್ಥವ್ಯವಸ್ಥೆಯು ಸಂಪೂರ್ಣವಾಗಿ ಒಂದು ನಿಶ್ಚಲ ಸ್ಥಿತಿಯಲ್ಲಿದ್ದಾಗ, ಅಲ್ಲಿಂದ ಹೊರಬರುವುದು ಬಹಳ ಕಷ್ಟ. ಅದಕ್ಕೆ ಕಾರಣವೂ ಸಹ ಸರಳವಾಗಿದೆ. ಜಿಡಿಪಿ = ಖಾಸಗಿ ಬಳಕೆಯ ವೆಚ್ಚಗಳು+ಒಟ್ಟು ಹೂಡಿಕೆಗಳು+ ನಿವ್ವಳ ರಫ್ತುಗಳು (ಅಂದರೆ, ಒಟ್ಟು ರಫ್ತುಗಳಿಂದ ಆಮದು ಮಾಡಿಕೊಂಡ ಸರಕುಗಳು ಮತ್ತು ಸೇವೆಗಳನ್ನು ಕಳೆದ ನಂತರ ದೊರಕುವ ಮೊತ್ತ) + ಸರ್ಕಾರದ ಬಳಕೆಯ ವೆಚ್ಚಗಳು. ಕೊನೆಯ ಎರಡು ಅಂಶಗಳನ್ನು ಸದ್ಯದ ಮಟ್ಟಿಗೆ ನಾವು ನಿರ್ಲಕ್ಷಿಸೋಣ. ರಫ್ತು ಉದ್ದೇಶಕ್ಕಾಗಿಯೇ ಉತ್ಪಾದಿಸಿದ ಸರಕು/ಸೇವೆಗಳಿಗಾಗಿ ಮಾಡಿದ ಹೂಡಿಕೆಯನ್ನೂ ಸಹ ನಾವು ಸದ್ಯದ ಮಟ್ಟಿಗೆ ನಿರ್ಲಕ್ಷಿಸೋಣ. ಆನಂತರವೂ, ಅರ್ಥವ್ಯವಸ್ಥೆಯು ಒಂದು ಸ್ಥಗಿತತೆಗೆ ಒಳಗಾದರೆ, ಬಳಕೆಯು ಹೆಚ್ಚಲು ಕಾರಣವೇ ಇರುವುದಿಲ್ಲ. ಬಳಕೆಯು ಮೂಲತಃ ಆದಾಯಗಳ ಮಟ್ಟವನ್ನು ಅವಲಂಬಿಸಿರುವುದರಿಂದ, ಅರ್ಥವ್ಯವಸ್ಥೆಯು ಸ್ಥಗಿತದ ಸ್ಥಿತಿಯಲ್ಲೇ ಉಳಿಯುತ್ತದೆ. ಹೂಡಿಕೆಯೂ ಸಹ ಹೆಚ್ಚಾಗುವುದಿಲ್ಲ. ಏಕೆಂದರೆ, ಉತ್ಪಾದಕರು ತಮ್ಮ ಉತ್ಪಾದನಾ ಸಾಮರ್ಥ್ಯವನ್ನು ವಿಸ್ತರಿಸುವ ಗೋಜಿಗೆ ಹೋಗುವುದಿಲ್ಲ. ಏಕೆಂದರೆ, ಅರ್ಥವ್ಯವಸ್ಥೆಯು ಅಥವಾ ಆಂತರಿಕ ಮಾರುಕಟ್ಟೆಯು ಜಡವಾಗಿರುತ್ತದೆ. ಆದ್ದರಿಂದ, ನಾವು ನಿರ್ಲಕ್ಷಿಸಿದ ಮೂರು ನಿರ್ದಿಷ್ಟ ರೀತಿಯ ವೆಚ್ಚಗಳಲ್ಲಿ ಕನಿಷ್ಠ ಒಂದು ರೀತಿಯ ವೆಚ್ಚದಲ್ಲಾದರೂ ಸ್ವಾಯತ್ತವಾಗಿ ಏರಿಕೆಯಾಗದಿದ್ದರೆ, ಅಂದರೆ, ಆಂತರಿಕ ಮಾರುಕಟ್ಟೆಯಲ್ಲಿ ಸ್ವಾಯತ್ತವಾಗಿ ಒಂದು ಹಠಾತ್ ಏರಿಕೆಯಾಗದ ಹೊರತು, ಅರ್ಥವ್ಯವಸ್ಥೆಯು ಒಂದು ನಿಶ್ಚಲ ಸ್ಥಿತಿಯಲ್ಲೇ (ಅಥವಾ ನಿಶ್ಚಲತೆಯ ಸ್ಥಿತಿಯನ್ನು ತಲುಪುವವರೆಗೂ ಬೆಳವಣಿಗೆಯು ನಕಾರಾತ್ಮಕವಾಗಿರುತ್ತದೆ) ಉಳಿಯುತ್ತದೆ.

ಇಡೀ ವಿಶ್ವ ಅರ್ಥವ್ಯವಸ್ಥೆಯು ಸ್ಥಗಿತತೆಗೆ ಒಳಗಾಗಿರುವುದರಿಂದಾಗಿ ನಮ್ಮ ನಿವ್ವಳ ರಫ್ತುಗಳೂ ಇದ್ದಕ್ಕಿದ್ದಂತೆ ಏರಿಕೆಯ ಲಕ್ಷಣವನ್ನು ತೋರಿಸುವುದಿಲ್ಲ. ಹಾಗಾಗಿ, ಭಾರತದ ಸರಕುಗಳಿಗೆ ಹೊರ ದೇಶಗಳಿಂದ ಬೇಡಿಕೆ ಇದ್ದಕ್ಕಿದ್ದಂತೆ ಏರಿಕೆಯಾಗಲು ಅವಕಾಶವಿಲ್ಲ. ಮತ್ತು, ನವ-ಉದಾರವಾದಿ ಆಳ್ವಿಕೆಯಲ್ಲಿ ಭಾರತದ ಸರ್ಕಾರವು ತನ್ನ ಆಮದುಗಳನ್ನು ತಗ್ಗಿಸಿಕೊಳ್ಳುವ ಸಲುವಾಗಿ ಹೆಚ್ಚಿನ ಸುಂಕಗಳನ್ನು ವಿಧಿಸುವ ಅಥವಾ ಇತರ ರಕ್ಷಣಾತ್ಮಕ ಕ್ರಮಗಳನ್ನು ಕೈಗೊಳ್ಳುವ ಅವಕಾಶವೂ ಇಲ್ಲ. ಕರಾರುವಾಕ್ಕಾಗಿ ಇದೇ ಕಾರಣದಿಂದಾಗಿ, ರಫ್ತುಗಳನ್ನು ಹೆಚ್ಚಿಸುವುದಕ್ಕಾಗಲಿ ಅಥವಾ ಆಮದು ವಸ್ತುಗಳನ್ನು ದೇಶೀಯವಾಗಿ ಉತ್ಪಾದಿಸುವುದಕ್ಕಾಗಲಿ ಹೂಡಿಕೆಯನ್ನು ಹೆಚ್ಚಿಸುವುದು ಸಾಧ್ಯವಾಗುವುದಿಲ್ಲ. ಮತ್ತು, ಸರ್ಕಾರದ ಖರ್ಚು-ವೆಚ್ಚಗಳ ಹೆಚ್ಚಳಕ್ಕೆ ಸಂಬಂಧಿಸಿದಂತೆ ಹೇಳುವುದಾದರೆ, ವಿತ್ತೀಯ ಕೊರತೆಯನ್ನು ಜಿಡಿಪಿಯ ಅನುಪಾತಕ್ಕನುಗುಣವಾಗಿ ನಿಯಂತ್ರಣದಲ್ಲಿಡಲು ಸರ್ಕಾರ ಬದ್ಧವಾಗಿರುವುದರಿಂದ, ಜಿಡಿಪಿಯ ಅನುಪಾತವಾಗಿ ತೆರಿಗೆ ಆದಾಯವು ಇದ್ದಕ್ಕಿದ್ದಂತೆ ಹೆಚ್ಚಾಗದ ಹೊರತು, ಸರ್ಕಾರದ ಖರ್ಚು-ವೆಚ್ಚಗಳ ಹೆಚ್ಚಳದ ಸಾಧ್ಯತೆಯು ಜಿಡಿಪಿಗಿಂತ ಭಿನ್ನವಾದ ಪ್ರವೃತ್ತಿಯನ್ನು ತೋರಿಸುವುದು ಸಾಧ್ಯವಿಲ್ಲ. ಇಲ್ಲಿಯೂ ಸಹ ಖಾಸಗಿ ಬಳಕೆಯ ಮೇಲೆ ಹೆಚ್ಚು ಪರಿಣಾಮ ಬೀರುವ ಪರೋಕ್ಷ ತೆರಿಗೆಗಳ ಮೂಲಕ ಜಿಡಿಪಿಯ ಅನುಪಾತಕ್ಕನುಗುಣವಾಗಿ ತೆರಿಗೆ ಆದಾಯವು ಹೆಚ್ಚಾದರೂ ಸಹ, ಒಟ್ಟು ಬೇಡಿಕೆಗೆ ನಿವ್ವಳ ಸೇರ್ಪಡೆ ಇರುವುದಿಲ್ಲ: ಸರ್ಕಾರದ ಬಳಕೆಯ ಖರ್ಚುಗಳ ಹೆಚ್ಚಳವು ಜಿಡಿಪಿಯ ಒಂದು ಅನುಪಾತವಾಗಿ ಖಾಸಗಿ ಬಳಕೆಯಲ್ಲಿನ ಕುಸಿತದೊಂದಿಗೆ ಬಹುತೇಕ ಸರಿದೂಗಿಸಲ್ಪಡುತ್ತದೆ. ತನ್ನ ಆದಾಯದ ಬಹುಪಾಲನ್ನು ಬಳಸಿಕೊಳ್ಳುವ ಜನ ವಿಭಾಗದ ಮೇಲೆ ಹೇರಿದ ದೊಡ್ಡ ಪ್ರಮಾಣದ ನೇರ ತೆರಿಗೆಗಳ ಮೂಲಕ ಹಣ ಹೊಂದಿಸಿಕೊಂಡು ಸರ್ಕಾರವು ಕೈಗೊಳ್ಳುವ ವೆಚ್ಚಗಳಿಗೂ ಇದು ಅನ್ವಯಿಸುತ್ತದೆ.

ಸ್ಥಗಿತತೆಯಿಂದ ಹೊರಬರಲಾರದು ಏಕೆ?

ಆದ್ದರಿಂದ, ದೊಡ್ಡ ಪ್ರಮಾಣದ ವಿತ್ತೀಯ ಕೊರತೆಯ ಮೂಲಕ ಅಥವಾ ಶ್ರೀಮಂತರ ಮೇಲೆ ಹೆಚ್ಚಿನ ದರದ ನೇರ ತೆರಿಗೆಗಳನ್ನು ಹೇರುವ ಮೂಲಕ ಒದಗಿಸಿಕೊಂಡ ಆದಾಯದ ಹೆಚ್ಚಳ ಮಾತ್ರ ಸ್ಥಗಿತ ಸ್ಥಿತಿಯಿಂದ ಹೊರಬರುವ ಪರಿಣಾಮವನ್ನು ಬೀರುತ್ತದೆ. ಶ್ರೀಮಂತರ ಮೇಲೆ ವಿಧಿಸಬಹುದಾದ ನೇರ ತೆರಿಗೆಗಳು ಎಂದಾಗ ಅವು ಕಾರ್ಪೊರೇಟ್‌ಗಳ ಆದಾಯದ ಮೇಲೆ ಮತ್ತು ಖಾಸಗಿ ಸಂಪತ್ತಿನ ಮೇಲೆ ವಿಧಿಸುವ ತೆರಿಗೆಗಳನ್ನು ಒಳಗೊಂಡಿರುತ್ತವೆ. ಆದರೆ, ಇಂಥಹ ತೆರಿಗೆಗಳನ್ನು ಹೇರಲು ಸರ್ಕಾರವು ದೃಢವಾಗಿ ನಿರಾಕರಿಸುತ್ತದೆ. ವಿತ್ತೀಯ ಕೊರತೆಯ ಮಿತಿಗೆ ಅದು ಬದ್ಧವಾಗಿದೆ. ಮತ್ತು, ಶ್ರೀಮಂತರ ಮೇಲೆ ಹೆಚ್ಚು ತೆರಿಗೆಗಳನ್ನು ವಿಧಿಸುವುದರ ಬದಲು, ತೆರಿಗೆ ರಿಯಾಯಿತಿಗಳು ಹೂಡಿಕೆಯನ್ನು ಹೆಚ್ಚಿಸುವ ಮೂಲಕ ಅರ್ಥವ್ಯವಸ್ಥೆಯನ್ನು ಚೇತನಗೊಳಿಸುತ್ತವೆ ಎಂಬ ಒಂದು ಸಂಪೂರ್ಣ ತಪ್ಪು ನಂಬಿಕೆಯಲ್ಲಿ ಸರ್ಕಾರವು ಕಾರ್ಪೊರೇಟ್ ವಲಯಕ್ಕೆ ತೆರಿಗೆ-ರಿಯಾಯಿತಿಗಳನ್ನು ನೀಡುತ್ತಿದೆ.

ಈ ನಂಬಿಕೆಯು ಎರಡು ಕಾರಣಗಳಿಂದಾಗಿ ತಪ್ಪಾಗಿದೆ. ಮೊದಲನೆಯದು, ತೆರಿಗೆ ರಿಯಾಯಿತಿಗಳ ಕಾರಣದಿಂದಾಗಿ ಕಾರ್ಪೊರೇಟ್‌ಗಳು ಹೂಡಿಕೆಯನ್ನು ಹೆಚ್ಚಿಸುತ್ತವೆ ಎಂದು ವಾದಕ್ಕಾಗಿ ಊಹಿಸಿಕೊಂಡರೂ ಸಹ, ತೆರಿಗೆ ರಿಯಾಯ್ತಿ ಕೊಟ್ಟದ್ದರಿಂದಾಗಿ ಸರ್ಕಾರದ ಆದಾಯವು ಕಡಿಮೆಯಾಗುತ್ತದೆ. ಅದನ್ನು ಸರ್ಕಾರದ ಖರ್ಚು-ವೆಚ್ಚಗಳ ಕಡಿತದ ಮೂಲಕ ಸರಿದೂಗಿಸಲಾಗುತ್ತದೆ ಮತ್ತು ಈ ಕ್ರಮವು ಒಟ್ಟು ಬೇಡಿಕೆಯಲ್ಲಿ ನಿವ್ವಳ ಹೆಚ್ಚಳವನ್ನು ತಡೆಯುತ್ತದೆ ಮತ್ತು ಆ ಮೂಲಕ ಅರ್ಥವ್ಯವಸ್ಥೆಯ ಪುನಶ್ಚೇತನವನ್ನೂ ತಡೆಯುತ್ತದೆ. ಎರಡನೆಯದಾಗಿ, ಕಾರ್ಪೊರೇಟ್‌ಗಳು ಮಾಡಬಹುದಾದ ಹೂಡಿಕೆಗಳು ಅರ್ಥವ್ಯವಸ್ಥೆಯಲ್ಲಿ ಉಂಟಾಗುವ ಬೇಡಿಕೆಯ ಬೆಳವಣಿಗೆಯನ್ನು ಅವಲಂಬಿಸುತ್ತವೆಯೇ ವಿನಹ, ತೆರಿಗೆ ರಿಯಾಯಿತಿಗಳನ್ನಲ್ಲ. ಅರ್ಥವ್ಯವಸ್ಥೆಯಲ್ಲಿ ಒಂದು ವೇಳೆ ಬೇಡಿಕೆ ಹೆಚ್ಚದಿದ್ದರೆ, ಆಗ, ಬಂಡವಾಳಗಾರರು ತಮಗೆ ನೀಡಲಾದ ತೆರಿಗೆ ರಿಯಾಯಿತಿಗಳನ್ನು ತಮ್ಮ ಜೇಬಿಗೆ ಇಳಿಸಿಕೊಳ್ಳುತ್ತಾರೆ; ಹೂಡಿಕೆಯನ್ನು ಕೈಗೊಳ್ಳುವುದಿಲ್ಲ.

ಈ ಎಲ್ಲವುಗಳಿಂದಾಗಿ ಅರ್ಥವ್ಯವಸ್ಥೆಯು ಒಂದು ಸರಳ ಪುನರುತ್ಪತ್ತಿಯ ಸುಳಿಯಲ್ಲಿ ಸಿಕ್ಕಿಹಾಕಿಕೊಂಡರೆ, ನವ-ಉದಾರವಾದಿ ಆಳ್ವಿಕೆಯ ಸಂದರ್ಭದಲ್ಲಿ, ಅದರಿಂದ ಹೊರಬರುವುದು ಬಹಳ ಕಷ್ಟವಾಗುತ್ತದೆ. ನಿರ್ದಿಷ್ಟವಾಗಿ ಇದು ಎಡಪಂಥೀಯ ವಾದವಲ್ಲ. ಸೈದ್ಧಾಂತಿಕ ಸ್ಪಷ್ಟತೆಯುಳ್ಳವರು ಒಪ್ಪಿಕೊಳ್ಳಬಹುದಾದ ವಾದವಿದು. ಕೆಲವು ಪ್ರಾಮಾಣಿಕ ಉದಾರವಾದಿ ಅರ್ಥಶಾಸ್ತ್ರಜ್ಞರೂ ಸಹ ಇದೇ ಅಂಶವನ್ನು ಹೇಳುತ್ತಾರೆ ಮತ್ತು ಅದು ಆಶ್ಚರ್ಯದ ಸಂಗತಿಯೂ ಅಲ್ಲ.

ಒಂದು ಪರಿಶೀಲನಾರ್ಹ ವಿಚಾರವನ್ನು ಪ್ರಸ್ತಾಪಿಸಬಹುದಾದರೆ, ಕೃಷಿ ವಲಯದ ಉತ್ಪಾದನೆಯು ಬೇಡಿಕೆ-ಬದಿಯ ಪರಿಗಣನೆಗಳಿಂದ ನಿರ್ಧರಿಸಲ್ಪಡುವುದಿಲ್ಲ, ಅದು ಸ್ವಾಯತ್ತವಾಗಿ ನಿರ್ಧರಿಸಲ್ಪಡುತ್ತದೆ. ಮೇಲಾಗಿ, ಬೇಡಿಕೆಗಿಂತ ಅಧಿಕವಾದ ಉತ್ಪಾದನೆಯನ್ನು ಸರ್ಕಾರವು ಪುಟ 14 ಕ್ಕೆ

ಆಹಾರ ಹಕ್ಕು ನಿಷೇಧದ ಹಿನ್ನೋಟ...

ಪುಟ 6 ರಿಂದ

ನಮ್ಮ ರಾಜ್ಯದ ಅತ್ಯಂತ ಹಿಂದುಳಿದ ಪ್ರದೇಶವಾಗಿದೆ. ಇಲ್ಲಿನ ಬಹುಸಂಖ್ಯೆಯ ದುಡಿಯುವ ಜನ ಭೂ ರಹಿತ ಕುಟುಂಬಗಳಾಗಿದ್ದು ಕೃಷಿ ಕೂಲಿಕಾರರಾಗಿ ದುಡಿಯುತ್ತಾರೆ. ಇಲ್ಲವೇ ಮಹಾರಾಷ್ಟ್ರ, ತೆಲಂಗಾಣ ಅಥವಾ ಕರ್ನಾಟಕದ ಉಳಿದ ಜಿಲ್ಲೆಗಳಿಗೆ ವಲಸೆ ಹೋಗುತ್ತಾರೆ.

ಮೊಟ್ಟೆ ಸೇವನೆಯ ವಿರುದ್ಧ ಪ್ರತಿಭಟನೆಯ ಸಮಯದಲ್ಲಿ, ಈ ರೀತಿಯ ಪ್ರಯತ್ನಗಳನ್ನು ಈ ಹಿಂದೆಯೂ ಯಶಸ್ವಿಯಾಗಿ ತಾವು ತಡೆಹಿಡಿದಿದ್ದೇವೆ ಎಂದು ಹೇಳುವ ಮೂಲಕ ಈ ಬಾರಿಯೂ ಹಾಗೇ ಆಗಬೇಕು ಎನ್ನುವ ಸುಳಿವನ್ನು ಧಾರ್ಮಿಕ ಗುರುಗಳು ನೀಡುತ್ತಿದ್ದಾರೆ. ಆದರೆ ಈವರೆಗೂ ಸರ್ಕಾರ ಈ ಸುತ್ತೋಲೆಯನ್ನು ಹಿಂಪಡೆದಿಲ್ಲ. ಇದಕ್ಕೆ ಎರಡು ಕಾರಣಗಳಿವೆ. ಮೊದಲನೆಯದು; ಕೆಲವು ಲಿಂಗಾಯತ ಗುಂಪುಗಳ ಒಳಗೊಂಡಂತೆ ಮೊಟ್ಟೆ ನೀಡುವ ಕುರಿತು ಬಂದಿರುವ ವ್ಯಾಪಕ ಬೆಂಬಲ, ಎರಡನೆಯದು; ಮೊಟ್ಟೆ ನೀಡುತ್ತಿರುವುದರಿಂದ ದಾಖಲಾತಿಯಲ್ಲಾಗುತ್ತಿರುವ ಹೆಚ್ಚಳ. ಮೊಟ್ಟೆ ನೀಡಿದ ನಂತರ ಶಾಲೆಗಳಲ್ಲಿ ಮೂಡಿಬಂದಿರುವ ಸಂಭ್ರಮ ಮತ್ತು ಮಕ್ಕಳೇ ಸ್ವಯಂ ತಾವೇ ಇದಕ್ಕೆ ಪೂರಕವಾಗಿ ದನಿ ಸೇರಿಸಿರುವುದು.

ಬೀದರ್‌ನಲ್ಲಿ ಮೊಟ್ಟೆ ಸೇವನೆ ವಿರುದ್ಧ ಪ್ರತಿಭಟನೆ ನಡೆದ ದಿನದಂದೇ ಹಲವು ಎಡ, ದಲಿತ ಮತ್ತು ಬಹುಜನ ಸಂಘಟನೆಗಳು ಪ್ರತಿಭಟನೆಗಳ ಮೂಲಕ ಸರ್ಕಾರದ ಈ ಘೋಷಣೆಗೆ ಬೆಂಬಲ ಸೂಚಿಸಿದವು ಮತ್ತು ಈ ಕ್ರಮವನ್ನು ಜಾತಿ ಮತ್ತು ಧರ್ಮದ ಸಂಕುಚಿತ ದೃಷ್ಟಿಕೋನದಲ್ಲಿ ನೋಡಬಾರದು ಎಂದು ಆಗ್ರಹಿಸಿದವು. ಬಹುಜನ ಜಾಗೃತಿ ವೇದಿಕೆಯ ಮುಖಂಡರೊಬ್ಬರು ಶಾಲೆಗಳಲ್ಲಿ ಮೊಟ್ಟೆ ವಿರೋಧಿಸುತ್ತಿರುವ ಧರ್ಮ ಗುರುಗಳಿಗೆ ಮೊಟ್ಟೆ ಸೇವಿಸುವ ಅನುಯಾಯಿಗಳಿಂದ ದೇಣಿಗೆ ಸ್ವೀಕರಿಸದಿರುವಂತೆ ಹೇಳಿದರು. ಧರ್ಮಗುರುಗಳು ಮತ್ತು ಅವರ ಅನುಯಾಯಿಗಳ ಆಹಾರ ಪದ್ಧತಿಯ ವಿವಿಧತೆಯನ್ನು ಈ ಹೇಳಿಕೆ ತೋರಿಸುತ್ತಿದೆ. ಸುಮಾರು 15 ಜಿಲ್ಲೆಗಳಲ್ಲಿ ಹಲವು ತಳಮಟ್ಟದ ಸಂಘಟನೆಗಳು ಪ್ರತಿಭಟನೆಗಳನ್ನು ನಡೆಸಿ, ಈ ಯೋಜನೆ ಮುಂದುವರೆಯಬೇಕು ಮತ್ತು ಎಲ್ಲಾ ಜಿಲ್ಲೆಗಳಿಗೆ ವಾರಕ್ಕೆ 5–6 ಮೊಟ್ಟೆಗಳನ್ನು ನೀಡುವ ಹಾಗೆ, ವಿಸ್ತರಿಸಬೇಕು ಎಂದು ಆಗ್ರಹಿಸಿ ಜಿಲ್ಲಾಧಿಕಾರಿಗಳಿಗೆ ಮನವಿ ಸಲ್ಲಿಸಿದವು.

ಇದೇ ಸಮಯದಲ್ಲಿ ಹಲವು ಲಿಂಗಾಯತ ವಿದ್ವಾಂಸರು ಮತ್ತು ಸಂಘಟನೆಗಳು, ಎಲ್ಲಾ ಲಿಂಗಾಯತರು "ಸಸ್ಯಾಹಾರಿಗಳು" ಅಥವಾ ಲಿಂಗಾಯತ ನಂಬಿಕೆಗಳು ಮೊಟ್ಟೆ ಸೇವನೆಯನ್ನು ನಿಷೇಧಿಸುತ್ತವೆ ಎಂಬ ನಿರೂಪಣೆಯನ್ನೂ ಅಲ್ಲಗಳೆಯಲು ಮುಂದಾದರು. ಲಿಂಗಾಯತರಿಗೆ ಪ್ರತ್ಯೇಕ ಧರ್ಮದ ಸ್ಥಾನ ನೀಡಬೇಕು ಎಂದು ಒತ್ತಾಯಿಸಿ ಚಳುವಳಿ ನಡೆಸುತ್ತಿರುವ ಜಾಗತಿಕ ಲಿಂಗಾಯತ ಮಹಾಸಭಾದ ಮುಖಂಡರು ಮತ್ತು ಮಾಜಿ ಸರ್ಕಾರಿ ಅಧಿಕಾರಿಯಾದ ಎಸ್.ಎಂ. ಜಾಮದಾರ್ ಸಹ ಸರ್ಕಾರದ ಕ್ರಮವನ್ನು ಸ್ವಾಗತಿಸುತ್ತಾ "ಸಸ್ಯಾಹಾರಿ ವಿದ್ಯಾರ್ಥಿಗಳಿಗೆ ಬಾಳೇಹಣ್ಣು ಮತ್ತು ಮಾಂಸಾಹಾರಿ ವಿದ್ಯಾರ್ಥಿಗಳಿಗೆ ಮೊಟ್ಟೆ ನೀಡುವುದಾಗಿ ಸರ್ಕಾರಿ ಆದೇಶ ಹೇಳುತ್ತಿದೆ. ಇದರಲ್ಲಿ ತಪ್ಪೇನಿಲ್ಲ, ಜೆಎಲ್‌ಎಂ ಈ ನಿರ್ಧಾರದ ವಿರುದ್ಧವಾಗಿಲ್ಲ" ಎಂದು ಹೇಳಿದರು. ಮುಂದುವರೆದೂ "ಲಿಂಗಾಯತರಲ್ಲಿ ಬ್ರಾಹ್ಮಣರ ರೀತಿಯ ಮೇಲ್ಜಾತಿಯವರು ಸಸ್ಯಹಾರಿಗಳು, ಆದರೆ ತಳ ಹಂತದವರಿಗೆ ಹೀಗೆ ಹೇಳಲಾಗದು. ಒಂದೆಡೆ ಕೆಲವು ವಚನಕಾರರು ಸಸ್ಯಹಾರವನ್ನು ಉತ್ತೇಜಿಸಿದರೆ, ಇನ್ನೊಂದೆಡೆ ಬಸವಣ್ಣ ಮತ್ತು ಅಲ್ಲಮರ ಹಲವು ವಚನಗಳು ಮಾಂಸ ಸೇವನೆಯನ್ನು ನಿಷೇಧಿಸಿಲ್ಲ"ಎಂದಿದ್ದಾರೆ. ಪ್ರಾರಂಭದಲ್ಲಿ ಮೊಟ್ಟೆ ನೀಡುವ ವಿಚಾರವನ್ನು ಪ್ರತಿಭಟಿಸಿದ ಕೆಲವು ಮಠಾಧಿಶರು ನಂತರದಲ್ಲಿ ಪರ್ಯಾಯವಾಗಿ ಸಸ್ಯಹಾರ ನೀಡುವುದಾದಲ್ಲಿ ಮೊಟ್ಟೆ ನೀಡುವ ವಿಷಯದಲ್ಲಿ ತನ್ನ ಅಭ್ಯಂತರ ಇಲ್ಲ ಎಂದು ಹೇಳಿದರು.

ಎಲ್ಲಕ್ಕೂ ಮಿಗಿಲಾಗಿ ವಿದ್ಯಾರ್ಥಿಗಳು ಮತ್ತು ಪೋಷಕರಿಂದ ಮೊಟ್ಟೆಯ ಬಗ್ಗೆ ಬಲವಾದ ಸಕಾರಾತ್ಮಕ ಅಭಿಪ್ರಾಯ ಬಂದಿತು. ಮೊಟ್ಟೆಯ ಬದಲು ಬಾಳೇಹಣ್ಣನ್ನು ಆಯ್ಕೆ ಮಾಡಿದವರು ಉಳಿದವರಿಗೆ ಮೊಟ್ಟೆ ನೀಡುವುದನ್ನು ವಿರೋಧಿಸಲಿಲ್ಲ ಎನ್ನುವುದನ್ನೂ ಹಲವು ವರದಿಗಳು ತಿಳಿಸುತ್ತಿವೆ. ಮೊಟ್ಟೆ ನೀಡಿದ ಮೊದಲ ದಿನ ಶಾಲೆಗಳಲ್ಲಿ ಸಂಭ್ರಮದ ವಾತಾವರಣ ಇತ್ತು. ಮೊಟ್ಟೆ ನೀಡುವ ದಿನದಂದು ಮಕ್ಕಳ ಹಾಜರಾತಿಯಲ್ಲಿ ಹೆಚ್ಚಳವೂ ಆಯಿತು. ಗುಲ್ಬರ್ಗದ ಡಿಡಿಪಿಐ ರವರು, "ಶಾಲೆಗಳಲ್ಲಿ ಬಾಳೇಹಣ್ಣು ಮತ್ತು ಮೊಟ್ಟೆ ನೀಡಿದಾಗಿನಿಂದ ಸರ್ಕಾರಿ ಶಾಲೆಗಳಲ್ಲಿ ಶೇ. 10 ರಿಂದ ಶೇ. 12 ಹಾಜರಾತಿ ಹೆಚ್ಚಳವಾಗಿದೆ" ಎಂದಿದ್ದಾರೆ. ಹಲವು ಶಾಲೆಗಳ ಶಾಲಾಭಿವೃದ್ಧ ಮತ್ತು ಆಡಳಿತ ಸಮಿತಿಗಳು 9ನೇ ಮತ್ತು 10ನೇ ತರಗತಿಗೂ ಈ ಯೋಜನೆ ವಿಸ್ತರಿಸುವಂತೆ ಕೇಳಿದ್ದಾರೆ. ರಾಜ್ಯದ ಹಲವು ಎಸ್ಡಿಎಂಸಿಗಳ ಸಮನ್ವಯ ಸಮಿತಿ ಸಹ ಸರ್ಕಾರದ ಈ ಯೋಜನೆಯನ್ನು ಸ್ವಾಗತಿಸಿ ಹೇಳಿಕೆ ನೀಡಿದೆ. ಕೊಪ್ಪಳ ಜಿಲ್ಲೆಯ ಗಂಗಾವತಿಯ ಶಾಲಾ ಬಾಲಕಿಯೊಬ್ಬಳು ಮೊಟ್ಟೆ ನೀಡುವುದನ್ನು ವಿರೋಧಿಸಿದ ಮಠಾಧೀಶರನ್ನು ತೀವ್ರವಾಗಿ ತರಾಟೆಗೆ ತೆಗೆದುಕೊಂಡಿದ್ದು ರಾಜ್ಯದ ಗಮನ ಸೆಳೆದಿದೆ.

ಈ ಎಲ್ಲ ಬೃಹತ್ ಬೆಂಬಲದ ಪ್ರತಿಕ್ರಿಯೆಗಳಿಂದಾಗಿ, ರಾಜ್ಯದ ಆಳುವ ಸರ್ಕಾರ ಮತ್ತು ಅದರ ಮುಖಂಡರ ಮೇಲೆ ವ್ಯಾಪಕ ಪ್ರಭಾವ ಹೊಂದಿರುವ ಕೆಲವು ಧಾರ್ಮಿಕ ಸಂಸ್ಥೆಗಳ ಒತ್ತಡದ ನಡುವೆಯೂ ಈ ಯೋಜನೆಗೆ ಬಂದಿರುವ ಕುತ್ತು ಪ್ರಾಯಶಃ ಸದ್ಯಕ್ಕೆ ದೂರವಾದಂತಿದೆ. ವಿಶೇಷವಾಗಿ ಶಿಕ್ಷಣ ಇಲಾಖೆಯು ಮೊಟ್ಟೆ ಮತ್ತು ಬಾಳೇಹಣ್ಣು ನೀಡುವ ಯೋಜನೆಯನ್ನು ಇನ್ನೂ ನಾಲ್ಕು ಜಿಲ್ಲೆಗಳಿಗೆ ವಿಸ್ತರಿಸುವಂತೆ ಸರ್ಕಾರಕ್ಕೆ ಪ್ರಸ್ತಾಪ ಸಲ್ಲಿಸಿದೆ. ಹೀಗಿದ್ದರೂ ಈ ಉತ್ತಮ ಸಾಂಸ್ಕೃತಿಕ, ಪ್ರಜಾಸತ್ತಾತ್ಮಕ, ನಿರ್ಧಾರವು ಇಂದಿನ ಸಂದರ್ಭದಲ್ಲಿ 'ರಾಜಕೀಯಕರಣ'ಕ್ಕೆ ತುತ್ತಾಗತ್ತದೋ ಎಂಬುದನ್ನು ಕಾದು ನೋಡಬೇಕು.

ಈರುಳ್ಳಿ ಮತ್ತು ಬೆಳ್ಳುಳ್ಳಿ ವಿವಾದ

2018ರಲ್ಲಿ ಅಕ್ಷಯ ಪಾತ್ರೆ ಫೌಂಡೇಷನ್ನೊಡನೆ ಕರ್ನಾಟಕದಲ್ಲಿಯೂ ಬಿಸಿಯೂಟ ಸರಬರಾಜು ಮಾಡಲು ತಯಾರಾಗಿದ್ದ ಒಪ್ಪಂದ ಪತ್ರವನ್ನು ಅನುಮೋದಿಸಲು ಬೆಂಗಳೂರು ನಗರ ಜಿಲ್ಲಾ ಪಂಚಾಯತ್ನ ಮುಖ್ಯ ಕಾರ್ಯನಿರ್ವಾಹಕರು ವಿರೋಧಿಸಿದರು. ಈ ಸಂಸ್ಥೆಯು ಶಾಲೆಗಳಲ್ಲಿ ತಾನು ಕಳುಹಿಸುವ ಊಟದಲ್ಲಿ ಈರುಳ್ಳಿ ಮತ್ತು ಬೆಳ್ಳುಳ್ಳಿಯನ್ನು ಸೇರಿಸಲು ಒಪ್ಪುತ್ತಿಲ್ಲ ಎಂಬ ಆತಂಕದ ಹಿನ್ನೆಲೆಯಲ್ಲಿ ಈ ನಿರ್ಧಾರಕ್ಕೆ ಬರಲಾಗಿತ್ತು.

ಕೆಲವು ಜಾತಿ ಸಮೂಹಗಳನ್ನುಹೊರತುಪಡಿಸಿದರೆ ಕರ್ನಾಟಕದ ಬಹುತೇಕ ಕುಟುಂಬಗಳು ಅಡುಗೆಯಲ್ಲಿ ಈರುಳ್ಳಿ ಮತ್ತು ಬೆಳ್ಳುಳ್ಳಿ ಬಳಸುತ್ತವೆ. ಇವು ಆಹಾರಕ್ಕೆ ಹೆಚ್ಚಿನ ರುಚಿ ನೀಡುತ್ತವೆ. ಜೊತೆಗೆ ತಯಾರಾದ ಆಹಾರದಲ್ಲಿರುವ ಮತ್ತು ಹೆಚ್ಚಿನ ಆರೋಗ್ಯ ಮಹತ್ವ ಹೊಂದಿರುವ ಎರಡುವ ಪೌಷ್ಟಿಕಾಂಶಗಳಾದ ಕಬ್ಬಿಣ ಮತ್ತು ಸತು ವನ್ನು ಈರುಳ್ಳಿ ಮತ್ತು ಬೆಳ್ಳುಳ್ಳಿ ಹೆಚ್ಚಿನ ಪ್ರಮಾಣದಲ್ಲಿ ಹೀರುತ್ತವೆ ಎಂದು ಮೈಸೂರಿನಲ್ಲಿರುವ ಕೇಂದ್ರ ಆಹಾರ ತಂತ್ರಜ್ಞಾನ ಸಂಶೋಧನಾ ಸಂಸ್ಥೆ (ಸಿಎಫ್ಟಿಆರ್‌ಐ)ಯು ಸಂಶೋಧಿಸಿದೆ. ಸಸ್ಯ ಆಹಾರಗಳಲ್ಲಿ ಜೈವಿಕವಾಗಿ ಕಬ್ಬಿಣ ಮತ್ತು ಸತು ಸಿಗುವುದು ಸಾಮಾನ್ಯವಾಗಿ ಬಹಳ ಕಡಿಮೆ ಇರುವಾಗ ಈ ಅಂಶ ಬಹಳ ಮಹತ್ವದ್ದಾಗಿದೆ. ಭಾರತ ದೇಶದಲ್ಲಿ ಮಾನವರಲ್ಲಿ ಕುಬ್ಜರಾದ ಕೊರತೆಗೆ ಪೌಷ್ಟಿಕತೆಯೇ ದೊಡ್ಡ ಕಾರಣವಾಗಿದೆ. 2016–18ರ ಪರಿಪೂರ್ಣ ರಾಷ್ಟ್ರೀಯ ಪೌಷ್ಟಿಕತೆಯ ಸರ್ವೆಯ ಅಂದಾಜಿನ ಪ್ರಕಾರ ಶಾಲೆಗೆ ಹೋಗದ ಮಕ್ಕಳಲ್ಲಿ ಶೇ. 20.2, ಶಾಲೆಗೆ ಹೋಗುವ ವಯಸ್ಸಿನ ಮಕ್ಕಳಲ್ಲಿ ಶೇ. 19.8 ಮತ್ತು ಹದಿಹರೆಯದವರಲ್ಲಿ ಶೇ. 46.8 ಪ್ರಮಾಣದವರು ನಮ್ಮ ರಾಜ್ಯದಲ್ಲಿ ಸತುವಿನ ಕೊರತೆ ಹೊಂದಿದ್ದಾರೆ.

ಅಕ್ಷಯ ಪಾತ್ರೆ ಫೌಂಡೇಶನ್ ತನ್ನ ಆಹಾರದಲ್ಲಿ ಈರುಳ್ಳಿ ಮತ್ತು ಬೆಳ್ಳುಳ್ಳಿಯನ್ನು ಸೇರಿಸದಿರುವುದರಿಂದ ಆಹಾರವು ಸಪ್ಪೆಯಾಗಿ, ಏಕರೀತಿಯಲ್ಲಿ ಇದ್ದು, ಮಕ್ಕಳು ಈ ಆಹಾರವನ್ನೂ ಸೇವಿಸಲು ಒಪ್ಪುತ್ತಿಲ್ಲ ಎಂದು ಕರ್ನಾಟಕ ರಾಜ್ಯ ಆಹಾರ ಆಯೋಗದ ಹೇಳಿದೆ. ಈ ನಿಲುವನ್ನು ನೇರ ವರದಿಗಳು ಸ್ಪಷ್ಟೀಕರಿಸಿದವು.

ಶಾಲೆಗಳಿಗೆ ಆಹಾರ ಸರಬರಾಜು ಮಾಡುವ ಎನ್ಜಿಓಗಳು ತಮ್ಮದೇ ಆದ ಸ್ಥಳೀಯ ಸೂಕ್ತವಲ್ಲದ ಆಹಾರ ಆಯ್ಕೆಗಳನ್ನೂ ಮಕ್ಕಳ ಮೇಲೆ ಹೇರುವ ಮೂಲಕ ಮಕ್ಕಳು ತಿನ್ನುವ ಆಹಾರದ ಪ್ರಮಾಣ ಕಡಿಮೆಯಾಗಿದೆ ಎಂಬ ಕಾರಣಕ್ಕಾಗಿಯೇ ಕರ್ನಾಟಕದಲ್ಲಿ ಬಿಸಿಯೂಟ ಯೋಜನೆಗೆ ಒಂದು ಸಮಾನ (ಮೆನು) ಆಹಾರ ಪಟ್ಟಿಯನ್ನೂ ನಿಗದಿಗೊಳಿಸಿದ್ದು, ಹೀಗಾಗಿ ಸರ್ಕಾರವು ನಿಗದಿಗೊಳಿಸಿದ ವಾರದ ಆಹಾರ ಪಟ್ಟಿಯಲ್ಲಿ ಬೆಳ್ಳುಳ್ಳಿಯನ್ನು ಮಸಾಲೆಯಾಗಿ ಮತ್ತು ಈರುಳ್ಳಿಯನ್ನು ಆಹಾರದಂಶವಾಗಿ ಸೇರಿಸಲಾಗಿದೆ.

ಮೇಲಾಗಿ ಕರ್ನಾಟಕದ ಸರ್ಕಾರಿ ಶಾಲೆಗಳು ಮತ್ತು ನೆರವು ಪಡೆದ ಶಾಲೆಗಳಲ್ಲಿ ಓದುವ ಮಕ್ಕಳಲ್ಲಿ ಶೇ. 96 ಪ್ರಮಾಣದ ಮಕ್ಕಳು ಈರುಳ್ಳಿ ಮತ್ತು ಬೆಳ್ಳುಳ್ಳಿಯನ್ನು ತಮ್ಮ ಆಹಾರದಲ್ಲಿ ಸೇವಿಸುವ ದಲಿತ, ಆದಿವಾಸಿ ಮತ್ತು ಒಬಿಸಿ ಜಾತಿಗಳಿಗೆ ಸೇರಿದವರಾಗಿದ್ದಾರೆ.

ಅಕ್ಷಯ ಪಾತ್ರೆ ಫೌಂಡೇಷನ್ ತನ್ನ ಆಹಾರದಲ್ಲಿ ಈರುಳ್ಳಿ ಮತ್ತು ಬೆಳ್ಳುಳ್ಳಿ ಸೇರಿಸದಂತೆ ವಿನಾಯಿತಿ ನೀಡಬೇಕು ಎಂದು ಕೇಳಿ, ಇನ್ನೊಂದು ವಿಭಿನ್ನ ಆಹಾರ ಪಟ್ಟಿ ನೀಡುವುದಾಗಿ ಹೇಳಿದಾಗ, ರಾಜ್ಯ ಸರ್ಕಾರವು ಪೌಷ್ಟಿಕತೆಯ ರಾಷ್ಟ್ರೀಯ ಸಂಸ್ಥೆ (ಎನ್‌ಐಎನ್), ಹೈದರಾಬಾದ್ ಮತ್ತು ಸಿಎಫ್ಟಿಆರ್‌ಐ, ಮೈಸೂರು ಇವುಗಳಿಂದ ಅಭಿಪ್ರಾಯ ಕೇಳಿತು. ಈ ಬದಲಿ ಆಹಾರ ಪಟ್ಟಿಯ ಪೌಷ್ಟಿಕಾಂಶದ ಇರುವಿಕೆಯ ಪ್ರಮಾಣವನ್ನೂ ನೇರವಾಗಿ ಅಧ್ಯಯನ ಮಾಡದೆ ಹೇಳಲಾಗದು ಎಂದು ಸಿಎಫ್ಟಿಆರ್‌ಐ ಹೇಳಿತು. ಆದರೆ, ಶಾಲೆಗಳಿಗೆ ಹೋಗುವ ಮಕ್ಕಳೊಂದಿಗೂ ಚರ್ಚಿಸದೆ, ಈ ಆಹಾರ ಪಟ್ಟಿ ಅನುಸಾರ ಆಹಾರ ನೀಡಲಾಗುತ್ತಿದೆಯೇ ಇಲ್ಲವೇ ಎಂಬ ವಾಸ್ತವ ಅಧ್ಯಯನವನ್ನು ಮಾಡದೆ, ಹೈದರಾಬಾದ್ನ ಎನ್‌ಐಎನ್ ಅಕ್ಷರ ಪಾತ್ರೆ ಫೌಂಡೇಷನ್ನ ಆಹಾರ ಪಟ್ಟಿಯನ್ನು ಅನುಮೋದಿಸಿತು. ಅಂದಿನ ರಾಜ್ಯ ಸರ್ಕಾರವು ಸಿಎಫ್ಟಿಆರ್‌ಐ ನೀಡಿದ ಪ್ರಸ್ತಾವನೆಯನ್ನು ಕಡೆಗಣಿಸಿತು ಮತ್ತು ಅಕ್ಷಯ ಪಾತ್ರೆ ಫೌಂಡೇಷನ್ಗೆ ಈರುಳ್ಳಿ ಮತ್ತು ಬೆಳ್ಳುಳ್ಳಿ ಸೇರಿಸದಿರುವಂತೆ ವಿನಾಯತಿ ನೀಡಿತು. ಈರುಳ್ಳಿ ಮತ್ತು ಬೆಳ್ಳುಳ್ಳಿ ಒಳಗೊಂಡ ಆಹಾರದ ಉಪಯೋಗ ಕುರಿತ ವೈಜ್ಞಾನಿಕ ಪುರಾವೆ ಮತ್ತು ಸಾಂಸ್ಕೃತಿಕ ಆಹಾರ ಆಯ್ಕೆಗಳ ಬಹುಪ್ರಮಾಣದ ಅಭಿಪ್ರಾಯವನ್ನೂ ಕಡೆಗಣಿಸಲಾಯಿತು. ●

ನಿಂತಲ್ಲೇ ನಿಲ್ಲಲಿದೆ ಭಾರತದ ಅರ್ಥವ್ಯವಸ್ಥೆ.......

ಪುಟ 13 ರಿಂದ

ತನ್ನ ಸಂಗ್ರಹಕ್ಕೆ ತೆಗೆದುಕೊಳ್ಳುವುದರಿಂದ, ಕೃಷಿ ಉತ್ಪಾದನೆಯಲ್ಲಿನ ಹೆಚ್ಚಳವು ಒಟ್ಟಾರೆಯಾಗಿ ಅರ್ಥವ್ಯವಸ್ಥೆಯು ಒಂದು ಸ್ವಾಯತ್ತ ಬೆಳವಣಿಗೆಯ ಮೂಲವನ್ನು ಕಂಡುಕೊಳ್ಳುವಲ್ಲಿ ನೆರವಾಗುತ್ತದೆ ಮತ್ತು ಈ ಕ್ರಮವು ಸರಳ ಪುನರುತ್ಪತ್ತಿಯು ನೆಲೆಗೊಳ್ಳುವುದನ್ನೂ ತಡೆಯುತ್ತದೆ. ಖಂಡಿತವಾಗಿಯೂ ಇದು ಒಂದು ತಾರ್ಕಿಕ ಸಾಧ್ಯತೆ. ಆದರೆ, ಈಗಾಗಲೇ ತಿಳಿಸಿರುವ ಹಾಗೆ 2019–20 ಮತ್ತು 2021–22ರ ನಡುವಿನ ಜಿಡಿಪಿ ಬೆಳವಣಿಗೆಯ ಅಂಕಿಅಂಶಗಳು ಕೃಷಿ ವಲಯದ ಬೆಳವಣಿಗೆ ದರವನ್ನು ಒಳಗೊಂಡಿವೆ. ಆದ್ದರಿಂದ, ಕೃಷಿ ವಲಯದ ಬೆಳವಣಿಗೆ ದರದಲ್ಲಿ ಹಠಾತ್ ವೇಗೋತ್ಕರ್ಷವಾಗದ ಹೊರತು, ಅರ್ಥವ್ಯವಸ್ಥೆಯು ಸ್ಥಗಿತತೆಯಿಂದ ಹೊರಬರುವುದು ಸಾಧ್ಯವಿಲ್ಲ. ಆದರೆ, ನವ–ಉದಾರವಾದಿ ಆಳ್ವಿಕೆಯಲ್ಲಿ, ರೈತ ಕೃಷಿಯ ಹಿಂಡುವಿಕೆಯೇ ಅದರ ಒಂದು ಮುಖ್ಯ ಗುಣಲಕ್ಷಣವಾಗಿರುವಾಗ, ಕೃಷಿ ವಲಯದ ಬೆಳವಣಿಗೆ ದರದಲ್ಲಿ ಸ್ವಾಯತ್ತ ವೇಗೋತ್ಕರ್ಷವನ್ನು ನಿರೀಕ್ಷಿಸಲಾಗದು. ಆದ್ದರಿಂದ, ಅರ್ಥವ್ಯವಸ್ಥೆಯು ಒಂದು ಸರಳ ಪುನರುತ್ಪತ್ತಿಯ ಸ್ಥಿತಿಯಲ್ಲಿ ನೆಲೆಗೊಳ್ಳುವ ಪ್ರವೃತ್ತಿಯು ಅಡೆತಡೆಯಿಲ್ಲದೆ ಮುಂದುವರೆಯುತ್ತದೆ.

ದಾರಿ ಕಾಣದ ಹಂತದಲ್ಲಿ

ಕೆಲವು ಕಾರಣಗಳಿಂದಾಗಿ, ಅರ್ಥವ್ಯವಸ್ಥೆಯು ಸರಳ ಪುನರುತ್ಪತ್ತಿಯ ಸ್ಥಿತಿಯಲ್ಲಿರುವಾಗ, ಆದಾಯ ವಿತರಣೆಯಲ್ಲಿ ಒಂದು ವೇಳೆ ಪ್ರತಿಕೂಲ ಬದಲಾವಣೆ ಉಂಟಾದರೆ, ಆಗ, ಅದು ಅರ್ಥವ್ಯವಸ್ಥೆಯನ್ನು ಸರಳ ಪುನರುತ್ಪತ್ತಿಯ ಸ್ಥಿತಿಯಿಂದ ಮೇಲೆತ್ತುವ ಬದಲು, ಆರ್ಥಿಕ ಹಿಂಜರಿತ ಉಂಟಾಗಲು ಕಾರಣವಾಗುತ್ತದೆ. ಅಂದರೆ, ಬೆಳವಣಿಗೆಯ ದರವು ನಕಾರಾತ್ಮಕವಾಗಿರುತ್ತದೆ. ಅಂತಿಮವಾಗಿ ಇದು ಅರ್ಥವ್ಯವಸ್ಥೆಯನ್ನು ಮತ್ತೊಂದು, ಹೊಸ, ಸರಳ ಪುನರುತ್ಪತ್ತಿಯ ಸ್ಥಿತಿಗೆ ಕೊಂಡೊಯ್ಯುತ್ತದೆ, ನಿರುದ್ಯೋಗ ದರದ ಏರಿದ ಮಟ್ಟದೊಂದಿಗೆ. ಹೀಗಾಗುತ್ತದೆ ಏಕೆಂದರೆ, ಆದಾಯ ಹಂಚಿಕೆಯ ಪ್ರತಿಕೂಲ ಬದಲಾವಣೆಯು ಬಳಕೆಯನ್ನು ಕಡಿಮೆ ಮಾಡುವ ಮೂಲಕ ಒಟ್ಟು ಬೇಡಿಕೆಯ ಮಟ್ಟವನ್ನು ಇಳಿಕೆ ಮಾಡುತ್ತದೆ. ಏಕೆಂದರೆ, ಪ್ರತಿ ಯೂನಿಟ್ ಆದಾಯದ ಲೆಕ್ಕಾಚಾರದಲ್ಲಿ ಬಡವರು ಶ್ರೀಮಂತರಿಗಿಂತ ಹೆಚ್ಚಿನ ಪಾಲನ್ನು ಬಳಸಿಕೊಳ್ಳುತ್ತಾರೆ.

ನವ–ಉದಾರವಾದದ ಆಳ್ವಿಕೆಯಲ್ಲಿ ಭಾರತದ ಅರ್ಥವ್ಯವಸ್ಥೆಯ ಸರಳ ಪುನರುತ್ಪತ್ತಿಯ ಪ್ರವೃತ್ತಿಯು, ನವ–ಉದಾರವಾದವು ಭಾರತದಲ್ಲಿ ಮಾತ್ರವಲ್ಲ, ಇಡೀ ವಿಶ್ವದಲ್ಲಿ ದಾರಿ ಕಾಣದ ಹಂತವನ್ನು ತಲುಪಿದೆ ಎಂಬ ಅಂಶವನ್ನು ಸೂಚಿಸುತ್ತದೆ. ●

ಕೋಮುವಾದೀಕರಣದ ಪಠ್ಯ ಪರಿಷ್ಕರಣೆ ವಿರುದ್ಧ ಬೃಹತ್ ಪ್ರತಿಭಟನಾ ಆಕ್ರೋಶ



ರಾಜ್ಯದ ಬಿಜೆಪಿ ಸರ್ಕಾರ ಪಠ್ಯ ಪರಿಷ್ಕರಣೆ ಮಾಡುವ ಮೂಲಕ ಸಂಪೂರ್ಣ ಕೋಮುವಾದಿಕರಣಕ್ಕೆ ಮುಂದಾಗಿರುವುದನ್ನು ಖಂಡಿಸಿ ಇಂದು (ಜೂನ್ 18) ನಗರದಲ್ಲಿ ಬೃಹತ್ ಪ್ರತಿಭಟನಾ ಸಭೆ ನಡೆದಿದೆ. ನಗರದ ಕೆಎಸ್ಆರ್ ರೈಲು ನಿಲ್ದಾಣದಿಂದ ಹೊರಟ ಬೃಹತ್ ಮೆರವಣಿಗೆಯು ಸ್ವಾತಂತ್ರ್ಯ ಉದ್ಯಾನವನದಲ್ಲಿ ಜಮಾವಣೆಗೊಂಡಿತು.

ಪರಿಷ್ಕೃತ ಆಗಿರುವ ಪಠ್ಯಪುಸ್ತಕಗಳನ್ನು ರದ್ದುಮಾಡಬೇಕು. ರೋಹಿತ್ ಚಕ್ರತೀರ್ಥರನ್ನು ಬಂಧಿಸಬೇಕು ಹಾಗೂ ಸಚಿವ ಬಿ.ಸಿ. ನಾಗೇಶ್ ರಾಜೀನಾಮೆ ನೀಡಬೇಕೆಂದು ಆಗ್ರಹಿಸಿದರು. ಅಲ್ಲದೆ, ವಿದ್ಯಾರ್ಥಿಗಳಿಗೆ, ಹಳೆಯ ಪಠ್ಯಪುಸ್ತಕಗಳನ್ನು ವಿತರಿಸಬೇಕೆಂದು ಆಗ್ರಹಿಸಲಾಯಿತು.

ಎಲ್ಲಾ ಸಮನ ಮನಸ್ಕರು ಸೇರಿ ಹಮ್ಮಿಕೊಂಡಿದ್ದ ಬೃಹತ್ ಸಮಾವೇಶದಲ್ಲಿ ಕುವೆಂಪು ಹೋರಾಟ ಸಮಿತಿ, ಸ್ವಾಮೀಜಿಗಳು, ಕನ್ನಡ ಪರ ಸಂಘಟನೆಗಳು, ವಿದ್ಯಾರ್ಥಿ ಸಂಘಟನೆಗಳು, ಸಾಹಿತಿ, ಚಿಂತಕರು, ಸಾರಿಗೆ ಒಕ್ಕೂಟ, ಸಿಐಟಿಯು ಸೇರಿದಂತೆ ಹಲವು ಸಂಘಟನೆಗಳು ಭಾಗಿಯಾಗಿವೆ.

ರಾಷ್ಟ್ರಕವಿ ಕುವೆಂಪು ಅವರು ಬರೆದ ನಾಡಗೀತೆಯನ್ನು ತಿರುಚಿದ ರೋಹಿತ್ ಚಕ್ರತೀರ್ಥ ಎಂಬ ವ್ಯಕ್ತಿಯ ನೇತೃತ್ವದಲ್ಲಿ ಪರಿಷ್ಕರಣೆಯಾದ ಪಠ್ಯಪುಸ್ತಕಗಳನ್ನು ಮಕ್ಕಳಿಗೆ ವಿತರಿಸಬಾರದು ಎಂದು ಕನ್ನಡಿಗರು ಆಗ್ರಹಿಸಿದ್ದಾರೆ.

ನಂಜಾವದೂತ ಸ್ವಾಮೀಜಿಗಳು ಶಿವಮೊಗ್ಗ ಜಿಲ್ಲೆಯ ಕುಪ್ಪಳ್ಳಿಯಿಂದ ಬಂದ ಕುವೆಂಪು ಜ್ಯೋತಿ ಸ್ವಾಗತಿಸಿದರು. ಪ್ರತಿಭಟನೆಯಲ್ಲಿ ವಿಶ್ವಮಾನವ ಭಾವುಟ ಬಿಡುಗಡೆ ಮಾಡಲಾಯಿತು. ಮಾಜಿ ಪ್ರಧಾನಿ ಹೆಚ್ ಡಿ ದೇವೇಗೌಡ, ನಂಜಾವದೂತ ಸ್ವಾಮೀಜಿ, ಜ್ಞಾನ ಪ್ರಕಾಶ್, ಡಿ.ಕೆ ಶಿವಕುಮಾರ್ ಅವರಿಂದ ನೂತನವಾಗಿರುವ ಜೈ ವಿಶ್ವಮಾನವ ಎಂದು ಬರೆದಿರುವ ನೂತನ ಭಾವುಟ ಬಿಡುಗಡೆ ಮಾಡಲಾಗಿದೆ.

ಹಿರಿಯ ವಕೀಲ ಸಿಎಚ್ ಹನುಮಂತರಾಯ ಮಾತನಾಡಿ, ಶೈಕ್ಷಣಿಕ ಕ್ಷೇತ್ರದಲ್ಲಿ ಆಗುತ್ತಿರುವ ಅನ್ಯಾಯ ಸಹಿಸಲು ಆಗುತ್ತಿಲ್ಲ. ಕೂಡಲೇ ಸಚಿವ ಬಿ ಸಿ ನಾಗೇಶ್ ಪಠ್ಯಪುಸ್ತಕ ಪರಿಷ್ಕರಣೆಗೆ ರೋಹಿತ್ ಚಕ್ರತೀರ್ಥರನ್ನು ಅಧ್ಯಕ್ಷರಾಗಿ ನೇಮಕ ಮಾಡಿದ್ದರು. ಈ ಸಮಿತಿಯಲ್ಲಿ ಮೂಲಭೂತವಾಗಿ ದೊಡ್ಡ ತಪ್ಪಾಗಿದೆ. ಆದೇಶವೇ ಇಲ್ಲದೆ ಪರಿಷ್ಕೃತಗೊಂಡ ಪಠ್ಯ ಪುಸ್ತಕಗಳ ಪಾಡೇನು? ಡಾ. ಬಿಆರ್ ಅಂಬೇಡ್ಕರ್, ಬಸವಣ್ಣ ಅವರ ವಿಚಾರಗಳನ್ನು ತಿರುಚಿದರು. ಶಂಕರ ಎನ್ನುವ ಪದಕ್ಕೆ ಅನರ್ಥ ಬರುವಂತೆ ನಡೆದುಕೊಂಡರು. ಸಂತ ಶಿಶುನಾಳ ಶರೀಫರ ವಿಚಾರಗಳನ್ನು ಕಿತ್ತುಹಾಕಿದ್ದಾರೆ. ಬುದ್ಧನ ಪಾಠವನ್ನು ತೆಗೆದು ಹಾಕಿದರು. ನಿರುದ್ಯೋಗ ಸಮಸ್ಯೆ ಕೈಬಿಡಲಾಗಿದೆ. ಕೆಲವೊಂದು ಸಿದ್ಧಾಂತಗಳನ್ನು ಮುನ್ನಲೆಗೆ ತರಲು ಮುಂದಾದರು. ಈ ಸಿದ್ಧಾಂತಗಳು ದೂರವಾಗಬೇಕು. ಬಸವಣ್ಣ ಅವರ ವಿಚಾರಕ್ಕೂ ಕೈ ಹಾಕಿದರು. ಸಾಹಿತ್ಯ, ನಾಡಗೀತೆಗೆ ಅಪಮಾನ ಮಾಡಿದರು. ಮುಂದೆ ಹೇಗೆ ಹೆಜ್ಜೆ ಇಡಬೇಕು ಎಂದು ಗಮನಿಸಬೇಕಾಗಿದೆ. ಮುಖ್ಯಮಂತ್ರಿಗಳು ಸ್ವಲ್ಪ ಆಚೆ ಬಂದು ನೋಡಬೇಕು ಎಂದು ಆಗ್ರಹಿಸಿದರು.

ಜ್ಞಾನ ಪ್ರಕಾಶ್ ಸ್ವಾಮೀಜಿ ಮಾತನಾಡಿ, ನಾವೆಲ್ಲ ತಪ್ಪು ಮಾಡಿದ್ದೇವೆ. ಅವರಿಗೆ ರಾಗಿ, ಭತ್ತ, ಎಣ್ಣೆ, ಮೆಟ್ಟು ಹೊಲಿದು ಕೊಟ್ಟೇವೆ. ತುಪ್ಪ, ಗುಡಿ ಸೇರಿದಂತೆ ಎಲ್ಲವೂ ಮಾಡಿಕೊಡುತ್ತಿದ್ದೇವೆ. ನಾವು ಹೊರಗಡೆ ನಿಂತು, ನೀವು ಮಹನ್ ಪೂಜ್ಯರು ಎಂದು ತಲೆ ಮೇಲೆ ಕೂರಿಸಿಕೊಂಡಂತಾಗಿದೆ. ಅದಕ್ಕಾಗಿ ನಮ್ಮ ತಲೆ ಮೇಲೆ ಕಾಲಿಟ್ಟಿದ್ದಾರೆ ಎಂದರು.

ಕೆಲ ವರ್ಷಗಳ ಹಿಂದೆ, ಡಾಕ್ಟರ್ ರಾಜಕುಮಾರ ಅವರು ಕುವೆಂಪು ಬಗ್ಗೆ ಮಾತಾಡಿ ಎಂದರೇ ಕುವೆಂಪು ಅವರ ಬಗ್ಗೆ ಮಾತಾಡುವಷ್ಟು ನಾನು ಬೆಳೆದಿಲ್ಲ ಎಂದಿದ್ದರು. ಈಗಿನವರು, ಕುವೆಂಪು ಅವರ ಬೂಟಿನ ದೂಳಿನ ಸಮವಿಲ್ಲ. ಬಸವಣ್ಣನವರ ಕಾಲಿನ ದೂಳಿನ ಸಮವಿಲ್ಲ. ಮೊದಲು ಶಾಲೆಯ ಗೋಡೆ ಮೇಲೆ ಗಾಂಜಾ, ತಂಬಾಕು ನಿಷೇಧ ಎಂದು ಬರೆಯಲಾಗುತ್ತಿತ್ತು, ಆದರೆ, ಈಗ ಅದರ ಅವಶ್ಯಕತೆ ಇಲ್ಲ. ಏಕೆಂದರೆ, ಪಠ್ಯಪುಸ್ತಕಗಳಲ್ಲಿಯೇ ಗಾಂಜಾ ಅಫೀಮ್ ಎಂಬುಂತೆ ಕೋಮುವಾದ ತುಂಬಲಾಗಿದೆ. ಶಾಲೆಗಳು ನಿಮ್ಮ ಆರ್‌ಎಸ್‌ಎಸ್ ಶಾಖೆಗಳಾ ಎಂದು ಪ್ರಶ್ನಿಸಿದರು.

ಪೊಲೀಸ್ಸಿನವರು ಸಣ್ಣಪುಟ್ಟದಕ್ಕೆ ಸ್ವಯಂ ದೂರು ದಾಖಲಿಸಿಕೊಳ್ಳುತ್ತಾರೆ. ಆದರೆ, ಕುವೆಂಪು ಅವರಿಗೆ ಮಾಡಿದ ಅಪಮಾನಕ್ಕೆ ಈಗ ಯಾಕೆ ಸುಮ್ಮನೆ ಇದ್ದೀರಾ ಸ್ವಯಂ ದೂರು ದಾಖಲು ಯಾಕೆ ಮಾಡಿಕೊಳ್ಳುತ್ತಿಲ್ಲ. ಮುಖ್ಯಮಂತ್ರಿಗಳು ಬಂದು, ಪಠ್ಯಪುಸ್ತಕ ವಿತರಣೆ ಮಾಡಲ್ಲ ಎನ್ನಬೇಕು ಮತ್ತು ಬರಗೂರು ರಾಮಚಂದ್ರಪ್ಪ ಅವರ ಪಠ್ಯಪುಸ್ತಕ ಮುಂದುವರಿಸುತ್ತೇವೆ ಎಂದು ಹೇಳಬೇಕು ಎಂದರು.

ಮಾಜಿ ಪ್ರಧಾನಿ ಹೆಚ್.ಡಿ. ದೇವೇಗೌಡ ಅವರು, ಮೊನ್ನೆ ಹೋರಾಟ ಸಮಿತಿ ಭೇಟಿ ಮಾಡಿತ್ತು. ಹಿರಿಯ ವಕೀಲ ಹನುಮಂತ್ರಾಯಪ್ಪ ಎಲ್ಲಾ ವಾಸ್ತವಾಂಶಗಳ ಪರಿಸ್ಥಿತಿಯನ್ನು ವಿವರಿಸಿದರು. ನಂಜಾವಧೂತ ಸ್ವಾಮೀಜಿ ಯಾರಿಗೂ ಹೆದರೋದಿಲ್ಲ ಎಂದಿದ್ದಾರೆ. ಸರ್ಕಾರಕ್ಕೆ ಅಂತಿಮ ಕರೆ ಕೊಟ್ಟಿದ್ದಾರೆ. ಅವರು ಐಕ್ಯತೆಗೆ ನಾನು ಆಭಾರಿ. ಡಿ ಕೆ ಶಿವಕುಮಾರ್ ಕಠಿಣವಾದ ಶಬ್ದ ಬಳಸಿದರು. ಪುಸ್ತಕನೇ ಹರಿದು ಹಾಕಿದರು. ಪುಸ್ತಕದ ಮೇಲೆ ಅಷ್ಟೊಂದು ಆವೇಶ ಅವರಿಗಿದೆ. ಒಂದು ಕಾರ್ಯಕ್ರಮ ಹಾಕಿದರೆ, ಹೇಗೆ ಅಂತ್ಯಗೊಳಿಸಬೇಕು ಎಂದು ಗೋಕಾಕ್ ಚಳುವಳಿ ಮಾದರಿ ಎಂದರು.

ಜೆಡಿಎಸ್ ರಾಜ್ಯಾಧ್ಯಕ್ಷ ಸಿ.ಎಂ. ಇಬ್ರಾಹಿಂ ಮಾತನಾಡಿ, ನಾನು ಮುಸ್ಲಿಂ ಆಗಿ, ಜನತಾದಳದವನಾಗಿ ಬಂದಿಲ್ಲ. ನಾನು ಬಸವಣ್ಣ, ಕುವೆಂಪು ಹಿಂಬಾಲಕನಾಗಿ ಬಂದಿದ್ದೀನಿ. ಬಸವಣ್ಣ ಕೇಶವ ಕೃಪದಲ್ಲಿ ತುಂಬಾ ದಿನ ಇರೋಕೆ ಆಗಲ್ಲ. ನೀನು ಬಸವ ಕೃಪದವನು ಎಂಬುದನ್ನು ಮರೆಯಬೇಡ. ಭಾರತ ಜನನಿಯ ತನುಜಾತೆ ಮುಖ್ಯ. ಮೊದಲು ಅಮ್ಮನನ್ನು ನೋಡಿ. 2024ಕ್ಕೆ ಇತಿಹಾಸ ಮತ್ತೆ ಬರಲಿದೆ. ಬಸವಣ್ಣನವರ ಸರ್ಕಾರ ತರ್ಲಿವಿ ಎಂದರು.

ಪರಿಷ್ಕರಣೆಗೊಂಡಿರುವ ಪುಸ್ತಕವನ್ನು ವೇದಿಕೆ ಮೇಲೆಯೇ ಹರಿದು ಹಾಕಿದ ಕೆಪಿಸಿಸಿ ಅಧ್ಯಕ್ಷ ಡಿ.ಕೆ ಶಿವಕುಮಾರ್ ಅವರು, ನಾನು ಇದನ್ನು ಸುಟ್ಟು ಹಾಕಬೇಕು ಎಂದು ಬಂದೆ. ಆದರೆ ವೇದಿಕೆ ಮೇಲೆ ಸುಡಲು ಆಗಲ್ಲ. ಹಾಗಾಗಿ ಹರಿದು ಹಾಕುತ್ತಿದ್ದೇನೆ ಎಂದರು.

ಈ ಹೋರಾಟದೊಂದಿಗೆ ನಾವು ಇದ್ದೇವೆ ಎಂದು ಹೇಳಲು ಬಂದಿದ್ದೇನೆ. ದೇಶಕ್ಕೆ ಸ್ವಾತಂತ್ರ್ಯ ಹೋರಾಟ ತಂದುಕೊಟ್ಟ ಪಕ್ಷದ ಪ್ರತಿನಿಧಿಯಾಗಿ ಬಂದಿದ್ದೇನೆ. ನಾವು ವಿಧಾನಸಭೆಯಲ್ಲಿ ಮಾತಾಡಬೇಕು. ಆದರೆ ಸಮಯ ಬಂದಿಲ್ಲ. ಪಠ್ಯಪುಸ್ತಕ ಪರಿಷ್ಕರಣೆ ವಾಪಸ್ಸು ಪಡೆಯುವವರೆಗೂ ಹೋರಾಟ ಮಾಡ್ತೇವೆ. ಯಾರ್‍ಯಾರು ಈ ಹೋರಾಟ ಬುನಾದಿ ಹಾಕಿದ್ದೀರಿ ಅವರಿಗೆ ಸಾಷ್ಟಾಂಗ ನಮಸ್ಕಾರ ಎಂದರು.


ಬರಗೂರು ರಾಮಚಂದ್ರಪ್ಪ ಅವರ ಪಠ್ಯ ರಾಜ್ಯದ ಸ್ವತ್ತು. ಅವರ ಪಠ್ಯಪುಸ್ತಕ ಎಂದಿಗೂ ಯಾರು ಸಹ ವಿರೋಧ ಮಾಡಲಿಲ್ಲ. ಮುಂದೆ ಬೇರೆ ಪಕ್ಷ ಅಧಿಕಾರಕ್ಕೆ ಬರುತ್ತೆ. ಬಂದಾಗ ನೀವು ಮಾಡಿದ ಪರಿಷ್ಕರಣೆ ಕೆಳಗೆ ಇಳಿಸುತ್ತೇವೆ. ರಾಜಕಾರಣ ಬೇರೆ ರೀತಿ ವ್ಯಾಖ್ಯಾನ ಮಾಡ್ತೇವೆ ನಾಡಿನ ಸಂಸ್ಕೃತಿ ಉಳಿಸಲು ಹೋರಾಟ ಮಾಡುತ್ತಿದ್ದೀರಿ. ಮೂರು ಸಾವಿರಕ್ಕೂ ಹೆಚ್ಚು ಮಠಾದೀಶರು ಇದ್ದಾರೆ. ನಮ್ಮ ರಾಜಕಾರಣಕ್ಕೆ ನಿಮ್ಮ ಬೆಂಬಲ ಬೇಡ. ಆದರೆ, ಎಲ್ಲಾ ಜಾತಿ, ಧರ್ಮಗಳಿಗೆ ಅಪಮಾನ ಆಗಿದೆ. ಹಳ್ಳಿ ಹಳ್ಳಿಯಲ್ಲು ಹೋರಾಟ ಮಾಡೋಣ ಎಂದರು.

ಈ ವೇಳೆ ರ್‍ಯಾಲಿಗೆ ಅವಕಾಶ ನೀಡದ ಪೊಲೀಸರು ಮತ್ತು ಪ್ರತಿಭಟನಾಕಾರರ ನಡುವೆ ವಾಗ್ವಾದ ನಡೆಯಿತು. ಪ್ರತಿಭಟನೆಯಲ್ಲಿ ನಂಜಾವಧೂತ ಸ್ವಾಮೀಜಿ, ಜ್ಞಾನ ಪ್ರಕಾಶ್ ಸ್ವಾಮೀಜಿ, ಜೆಡಿಎಸ್ ರಾಜ್ಯಾಧ್ಯಕ್ಷ ಸಿಎಂ ಇಬ್ರಾಹಿಂ, ರಾಜ್ಯ ಒಕ್ಕಲಿಗ ಸಂಘಟನೆ ರಾಜ್ಯಾಧ್ಯಕ್ಷ ಹಾಗೂ ಶಾಸಕ ಬಾಲಕೃಷ್ಣ, ಕೆಪಿಸಿಸಿ ಅಧ್ಯಕ್ಷ ಡಿ.ಕೆ ಶಿವಕುಮಾರ್, ಶಾಸಕ ರಂಗನಾಥ್, ಎಂ ಕೃಷ್ಣಪ್ಪ, ಸಂಗೀತ ನಿರ್ದೇಶಕ ಹಂಸಲೇಖ, ಸಿ.ಎಸ್ ಧ್ವಾರಕನಾಥ್, ಮುಖ್ಯ ಮಂತ್ರಿ ಚಂದ್ರು ಸಾ.ರಾ ಗೋವಿಂದ್, ಅಕ್ಕೈ ಪದ್ಮಾಶಾಲಿ ಎಸ್ ಜಿ ಸಿದ್ದರಾಮಯ್ಯ, ಪಠ್ಯಪುಸ್ತಕ ಪರಿಷ್ಕರಣೆ ಸಮಿತಿ ಮಾಜಿ ಅಧ್ಯಕ್ಷ ಬರಗೂರು ರಾಮಚಂದ್ರಪ್ಪ, ದಲಿತ ಸಂಘಟನೆ ಮುಖಂಡ ಮಾವಳ್ಳಿ ಶಂಕರ್, ರಕ್ಷಣಾ ವೇದಿಕೆ ಅಧ್ಯಕ್ಷ ಪ್ರವೀಣ್ ಶೆಟ್ಟಿ, ಸೌಹಾರ್ದ ಕರ್ನಾಟಕ, ಸಿಪಿಐ(ಎಂ), ಸಿಐಟಿಯು, ಜನವಾದಿ ಮಹಿಳಾ ಸಂಘಟನೆಯ ನಾಯಕರು ಸೇರಿದಂತೆ ಅನೇಕ ಪ್ರಗತಿಪರ ಹೋರಾಟಗಾರರು ಭಾಗಿಯಾಗಿದ್ದರು.





NEW No. MAG(3)/NPP/205/2021-2022
JANASHAKTHI KANNADA VARA PATRIKE JUNE 20-26, 2022 Price: Rs. 10/- Date of Publication: 17 JUNE 2022 RNI No. KARKAN /2006/17926 Posted on 20-06-2022
"REGISTERD" Postal Reg. No. RNP/KA/BGS/2078/2019-21 Posted at BG PSO, BG - 560026 Licensed to Post without prepayment License No. PMG/BG/WPP-283/2019-21 **Posted at Periodical Rate -** Rs. 2



"ನೇತ್ರಾವತಿಯಲ್ಲಿ ನೆತ್ತರು" ಕರಾವಳಿಯ ಕರಾಳತೆಯ ಅನಾವರಣ

ಎಚ್.ಆರ್. ನವೀನ್ ಕುಮಾರ್



"ಧರ್ಮ ಹೃದಯದಲ್ಲಿ ಇದ್ದಿದ್ದು ನೆತ್ತಿಗೇರಿದಾಗ ನಂಜಾಗುತ್ತದೆ."
ಹಿಂದೂ ಮುಸ್ಲಿಮರ ರಕ್ತ ಮಂದಿರ ಮಸೀದಿಗಳಲ್ಲಿ ಒಂದಾಗದಿದ್ದರೆ, ಕೊನೆಗೂ ನಗರದ ಚರಂಡಿ ಗಟರ್‌ಗಳಲ್ಲಿ ಒಂದಾಗುತ್ತದೆ."

– ಸಾದತ್ ಹಸನ್ ಮಂಟೊ

ಸಾದತ್ ಹಸನ್ ಮಂಟೊರವರ ಈ ಮಾತಿನ ಮೂಲಕ ಆರಂಭವಾಗುವ ಪತ್ರಕರ್ತ ನವೀನ್ ಸೂರಿಂಜೆಯವರ "ನೇತ್ರಾವತಿಯಲ್ಲಿ ನೆತ್ತರು" ಪುಸ್ತಕ ಕರಾವಳಿ ಪ್ರದೇಶದ ಕೋಮುವಾದದ ಘಟನೆಗಳಿಗೆ ಕಾರಣ, ಅದರ ಹಿಂದಿರುವ ಹಿಂದುತ್ವವಾದಿ ಶಕ್ತಿಗಳ ಕೆಲಸ ಮತ್ತು ಪೊಲೀಸ್ ವ್ಯವಸ್ಥೆ ಮತೀಯಗೊಂಡರೆ ಸಮಾಜದ ಸೌಹಾರ್ದತೆ ಹೇಗೆ ಹಾಳಾಗುತ್ತದೆ ಎಂಬ ಆತಂಕಕಾರಿ ಅಂಶಗಳ ಕುರಿತು ಧಾಖಲೆಗಳ ಸಮೇತ ಘಟನೆಗಳನ್ನು ವಿವರಿಸುತ್ತಾ ಕರಾವಳಿಯ ಕರಾಳತೆಯನ್ನು ನಮ್ಮಗಳ ಕಣ್ಣ ಮುಂದೆ ತೆರೆದಿಟ್ಟಿದ್ದಾರೆ. ಈ ಪುಸ್ತಕ ಮಂಗಳೂರು, ಉಡುಪಿ ಭಾಗದ ಕರಾವಳಿಯ ಕೋಮುವಾದದ ಕರಾಳತೆಯನ್ನು ಕಟ್ಟಿಕೊಡುವುದರ ಜೊತೆಗೆ ಅಲ್ಲಿನ ಜನ ಅದರಲ್ಲೂ ಅಲ್ಪಸಂಖ್ಯಾತರು, ಮಹಿಳೆಯರು ಅನುಭವಿಸುತ್ತಿರುವ ಕಷ್ಟಗಳನ್ನು ನೆನೆಸಿಕೊಂಡರೆ ಎಂತಹ ಕಲ್ಲು ಹೃದಯವಾದರೂ ಒಂದು ಕ್ಷಣ ಮಿಡಿಯುತ್ತದೆ ಮಾತ್ರವಲ್ಲ ಆತಂಕಗೊಳ್ಳುತ್ತದೆ.

ನವೀನ್ ಸೂರಿಂಜೆ ಒಬ್ಬ ಪತ್ರಕರ್ತರಾಗಿ, ಸಮಾಜದ ಆಗುಹೋಗುಗಳಿಗೆ ಸ್ಪಂದಿಸುತ್ತಾ, ಮಾನವೀಯ ಮೌಲ್ಯಗಳನ್ನು ಬೆಳೆಸಿಕೊಂಡವರಾಗಿ ಕರಾವಳಿಯಲ್ಲಿ ನಡೆದ ಕೋಮುಗಲಭೆಯ ಹಿಂದಿನ ಕಟು ಸತ್ಯಗಳನ್ನು ಹುಡುಕುತ್ತಾ ಅವರ ಅನುಭವಗಳನ್ನು ಧಾಖಲಿಸುವ ಕೆಲಸ ಮಾಡಿದ್ದಾರೆ. ಮಾತ್ರವಲ್ಲ ಈ ಘಟನೆಗಳನ್ನು ಓದುತ್ತಾ ಹೋದ ಹಾಗೆ ಕೋಮು ಸಾಮರಸ್ಯವನ್ನು ಹೊಂದಿದ ಪತ್ರಕರ್ತ, ಪೊಲೀಸ್, ಅಧಿಕಾರಿ, ನ್ಯಾಯಾಧೀಶರುಗಳು ಇದ್ದರೆ ಸಮಾಜವನ್ನು ಹಳಿತಪ್ಪದಂತೆ ನೋಡಿಕೊಳ್ಳಬಹುದು ಎಂಬುದನ್ನೂ ತೋರಿಸಿದ್ದಾರೆ.

ಮೊದಲ ಬುರ್ಕಾ/ಸ್ಕಾರ್ಫ್ ಬ್ಯಾನ್ ಪ್ರಕರಣ, ಮೊದಲ ಲೌವ್ ಜಿಹಾದ್ ಪ್ರಕರಣ, ಹೋಂಸ್ಟೇ ಮೇಲಿನ ದಾಳಿ, ಗೋರಕ್ಷಣೆಯ ಹೆಸರಿನಲ್ಲಿ ಕೆಲಸ ಮಾಡುವ ಬಜರಂಗದಳ ಮತ್ತು ಹಿಂದೂಪರ ಸಂಘಟನೆಗಳ ಹಿಂದಿನ ಮುಖವಾಡದ ಕರಾಳ ಸತ್ಯಗಳು, ಹಿಂದುತ್ವ ಕೋಮುವಾದಿಶಕ್ತಿಗಳು, ಪೊಲೀಸ್ ವ್ಯವಸ್ಥೆ ಮತ್ತು ಕಾರ್ಪೊರೇಟ್ ಶಕ್ತಿಗಳ ಮೈತ್ರಿ ಹೇಗೆ ಬಡ, ಅಮಾಯಕ ಮುಸ್ಲಿಮರನ್ನು ಅತ್ಯಂತ ಕ್ರೂರ ಹಿಂಸೆಗೆ ತಳ್ಳುತ್ತದೆ, ಜೈಲಿನ ಒಳಗಿನ ಕರಾಳತೆಯನ್ನೂ ಸೇರಿ ಹತ್ತು ಹಲವು ಘಟನೆಗಳನ್ನು ವಿವರಿಸುವ ಮೂಲಕ ಮುಚ್ಚಿಡಲ್ಪಟ್ಟ ಸತ್ಯವನ್ನು ಸಮಾಜದ ಮುಂದೆ ತೆರೆದು ತೋರಿಸಿ ಸಮಾಜವನ್ನು ಎಚ್ಚರಿಸುವ ಜವಾಬ್ದಾರಿಯುತ ಪತ್ರಕರ್ತರ ಕೆಲಸ ಈ ಪುಸ್ತಕದಲ್ಲಿ ಎದ್ದು ಕಾಣುತ್ತಿದೆ.

ದೇಶದ ಮುಸ್ಲಿಮರ ಪರಿಸ್ಥಿತಿ ಹೇಗಿದೆ ಎಂಬುದನ್ನು ನೋಡಿದರೆ ಕೋಮು ಸೂಕ್ಷ್ಮ ಪ್ರದೇಶವನ್ನಾಗಿಸಿರುವ ಕರಾವಳಿಯಲ್ಲಿ ಸ್ಥಿತಿ ಹೇಗಿದೆ ಎಂಬುದನ್ನ ಲೇಖಕರ ಮಾತಿನಲ್ಲೇ ಹೇಳುವುದಾದರೆ "ನಮ್ಮ ದೇಶದ ಮುಸ್ಲಿಮರೂ ಕೂಡಾ ಕ್ರಿಮಿನಲ್ ಟ್ರೈಬ್ ತರಹ ಕ್ರಿಮಿನಲ್ ಕಮ್ಯೂನಿಟಿ ಎಂದೇ ಪರಿಗಣಿಸಲ್ಪಟ್ಟಿರುವ ಅನುಮಾನಿತ ಮತ್ತು ಅವಮಾನಿತ ಸಮುದಾಯ. ಕಳ್ಳತನ ಆದ ತಕ್ಷಣ ಕೆಲ ಆದಿವಾಸಿ ಸಮುದಾಯವನ್ನು ಹೇಗೆ ಬಂಧಿಸಲಾಗುತ್ತೋ, ಕೋಮುಗಲಭೆ, ಹಿಂದೂಗಳ ಸಾವು, ಬಾಂಬು ಕಂಡಾಕ್ಷಣ ಮುಸ್ಲಿಮರನ್ನು ಆರೋಪಿಯನ್ನಾಗಿಸುವ, ಅವಮಾನಿಸುವ, ಅನುಮಾನಿಸುವ ಕೆಲಸ ನಡೆಯುತ್ತದೆ." ಈ ಮನಸ್ಥಿತಿಯೇ ಇಂದಿನ ಎಲ್ಲ ಸಮಸ್ಯೆಗಳಿಗೂ ಮುಸ್ಲಿಮರೇ ಕಾರಣ ಎಂದು ಬಿಂಬಿಸಲಾಗುತ್ತಿದೆ.

ಒಂದೆಡೆ ಧಾರ್ಮಿಕ ಮತಾಂಧತೆಯಿಂದಾಗಿ ಬದುಕಿನ ಪ್ರಶ್ನೆಗಳು ಮುಖ್ಯವಾಗದಿದ್ದಾಗ ಹಸಿವನ್ನ ನೀಗಿಸಿಕೊಳ್ಳಲು ಬಡವರು ಪಡುವ ಕಷ್ಟ ಎಂತದ್ದು "ಹೊಟ್ಟೆಯಲ್ಲಿರುವಾಗಲೇ ಇನ್ನೂ ಜಗತ್ತು ಕಾಣದ ಮಗುವನ್ನು ಹಸಿವಿಗಾಗಿ ಮಂಗಳೂರಿನಲ್ಲಿ ಮಾರಾಟ ಮಾಡಲಾಗುತ್ತದೆ. ಇಂತಹ ನೂರಾರು ತಾಯಿ ಮತ್ತು ಮಗುವಿನ ಕೂಗು ಕರಾವಳಿಯ ಯಾವ ಧರ್ಮರಕ್ಷಕರಿಗೂ ಕೇಳುವುದಿಲ್ಲ!"

ಮಾನವೀಕತೆಯನ್ನು ಕಳೆದುಕೊಂಡ ಸಮಾಜದಲ್ಲಿ ದ್ವೇಷವನ್ನೇ ತುಂಬಿಕೊಂಡು ಧರ್ಮದ ಮದವೇರಿರುವವರ ನಡುವೆ ಬದುಕುವವರ ಸ್ಥಿತಿ ಹೀಗೆಯೇ ಆಗುವುದು. ಗೋವುಗಳನ್ನು ಸಾಗಾಟ ಮಾಡುತ್ತಿದ್ದಾರೆಂದು ಹೇಳಿ ಪೊಲೀಸರು ಮತ್ತು ಕೇಸರಿ ಶಾಲುದಾರಿಗಳು ಜಂಟಿ ಕಾರ್ಯಾಚರಣೆಯ ಮೂಲಕ ದಾಳಿ ನಡೆಸಿದಾಗ "ಪೆಟ್ಟು ತಿಂದು ಸಾವು ಬದುಕಿನ ಮಧ್ಯೆ ಹೋರಾಟ ಮಾಡುತ್ತಿರುವ ಮುಸ್ಲಿಂ ಹುಡುಗರನ್ನು ಆಸ್ಪತ್ರೆಗೆ ಧಾಖಲಿಸಲು ಆಂಬುಲೆನ್ಸ್ ತರಿಸುವ ಬದಲು ದನಗಳ ರಕ್ಷಣೆಗೆ ಪೊಲೀಸರು ಲಾರಿ ತರಿಸಿದ್ರು. ಎಲ್ಲಾ ದನಗಳನ್ನು ರಕ್ಷಣೆ ಮಾಡಿದ ಬಳಿಕ ಅಂಬುಲೆನ್ಸ್ ತರಿಸಿ ಚಾಲಕ ಅಬ್ದುಲ್ ಸಮೀರ್, ಫಯಾಸ್ ಮತ್ತು ಶೌಕತ್‌ರನ್ನು ಆಸ್ಪತ್ರೆಗೆ ದಾಖಲಿಸಲಾಯ್ತು." ಈ ಘಟನೆ ಪೊಲೀಸ್ ವ್ಯವಸ್ಥೆ ಎಷ್ಟು ಮತೀಯಗೊಂಡಿದೆ ಮತ್ತು ಕೇಸರಿ ಪಡೆಗಳ ಅಟ್ಟಹಾಸ ಕರಾವಳಿಯಲ್ಲಿ ಗೋರಕ್ಷಣೆ, ಧರ್ಮರಕ್ಷಣೆಯ ಹೆಸರಿನಲ್ಲಿ ಹೇಗೆ ನಡೆಯುತ್ತಿದೆ ಎಂಬುದು ಸ್ಪಷ್ಟವಾಗುತ್ತದೆ.

"ಇಡೀ ದಕ್ಷಿಣ ಕನ್ನಡದ ಮತೀಯವಾದಿ ರಕ್ತ ಚರಿತ್ರೆಯಲ್ಲಿ ಒಬ್ಬನೇ ಒಬ್ಬ ಬ್ರಾಹ್ಮಣ ಸಮುದಾಯಕ್ಕೆ ಸೇರಿದ ಕಾರ್ಯಕರ್ತನಾಗಲೀ, ನಾಯಕನಾಗಲೀ ಜೈಲು ಸೇರಿಲ್ಲ ಅಥವಾ ಹಿಂದುತ್ವಕ್ಕೆ ಜೀವ ನೀಡಿಲ್ಲ." ಈ ಸತ್ಯವನ್ನು ಅರ್ಥಮಾಡಿಕೊಂಡರೆ ಸಾಕು ಬ್ರಾಹ್ಮಣಶಾಹಿಯ ಕುತಂತ್ರಕ್ಕೆ ಕರಾವಳಿಯ ದಲಿತ, ಶೂದ್ರ, ಹಿಂದುಳಿದ ವರ್ಗದ ಹುಡುಗರು ಹೇಗೆ ಬಲಿಯಾಗುತ್ತಿದ್ದಾರೆ ಎಂಬುದು ಗೊತ್ತಾಗುತ್ತದೆ. ಇದರ ಜೊತೆಗೆ ಹಿಂದುತ್ವ ಕೋಮುವಾದ ಕಾರ್ಪೊರೇಟ್ ಶಕ್ತಿಗಳೊಂದಿಗೆ ಸೇರಿರುವುದನ್ನು ಲೇಖಕರು ಗುರುತಿಸುತ್ತಾರೆ. "ಹಿಂದುತ್ವ ಮತ್ತು ರೌಡಿಸಂ, ಹಿಂದುತ್ವ ಮತ್ತು ರಿಯಲ್ ಎಸ್ಟೇಟ್ ಮೈತ್ರಿಯಾಗಿ ಮೈತ್ರಿ ಜನಕಂಟಕವಾಗಿರುವುದು ನೋಡಿದ್ದೇವೆ. ಹಿಂದುತ್ವ ಮತ್ತು ಕಾರ್ಪೊರೇಟ್ ಎಷ್ಟೊಂದು ಜನಪೀಡಕ ಎಂಬುದನ್ನು ಕರಾವಳಿಯ ಹಿಂದುತ್ವ ತೋರಿಸಿಕೊಟ್ಟಿದೆ. ದೇಶದಲ್ಲಿ ಈಗ ಹಿಂದುತ್ವ ಮತ್ತು ಕಾರ್ಪೊರೇಟ್ ಮೈತ್ರಿ ಇದೆ. ಈ ಹಿಂದುತ್ವ ಮತ್ತು ಕಾರ್ಪೊರೇಟ್ ಮೈತ್ರಿಯ ಪ್ರಯೋಗಶಾಲೆ ಮಂಗಳೂರು ಎಂಬುದು ಆಶ್ಚರ್ಯವಾದರೂ ಸತ್ಯ."

ಈ ಪುಸ್ತಕದ ಕುರಿತು ನಿವೃತ್ತ ಅಸಿಸ್ಟಂಟ್ ಪೊಲೀಸ್ ಕಮಿಷನರ್ ಬಿಕೆ.ಶಿವರಾಂ ರವರು ಪುಸ್ತಕದ ಮುನ್ನುಡಿಯಲ್ಲಿ ಹೀಗೆ ಹೇಳುತ್ತಾರೆ "ಭಾರತ ಬಹುಸಂಸ್ಕೃತಿಯ ದೇಶ. ಬಹುತ್ವದಲ್ಲಿ ಏಕತೆಯನ್ನು ಪ್ರತಿಪಾದಿಸುತ್ತಾ, ವಿಭಿನ್ನ ಸಂಸ್ಕೃತಿ, ಹಲವು ಭಾಷೆ, ಲಕ್ಷಾಂತರ ಆಚರಣೆ, ನೂರಾರು ವಿಚಾರ, ವಿಭಿನ್ನ ಭೌಗೋಳಿಕ ಪರಿಸರದಲ್ಲಿ ನಾವಿದ್ದರೂ ನಾನು ಭಾರತೀಯ ಎನ್ನುವ ಘೋಷವಾಕ್ಯದಲ್ಲಿ ನಾವೆಲ್ಲಾ ಒಟ್ಟಾಗಿದ್ದರಿಂದ ಇಲ್ಲಿಯವರೆಗೆ ಭಾರತವು ಒಂದು ದೇಶವಾಗಿ ಉಳಿದಿದೆ. ದೇಶದ ದುರಾದೃಷ್ಟವೆಂದರೆ ಇತ್ತೀಚೆಗೆ ಏಕ ಸಂಸ್ಕೃತಿಯ ಪ್ರತಿಪಾದಕರು ಹೆಚ್ಚುತ್ತಿದ್ದು, ದೇಶದೊಳಗೆ 'ನಾಗರಿಕ ಭಯೋತ್ಪಾದನೆ'ಯನ್ನು ಮಾಡುತ್ತಿದ್ದಾರೆ. ಈ ರೀತಿಯ ಆಂತರಿಕ ಭಯೋತ್ಪಾದನೆಯು ದೇಶದ ಗಡಿರಕ್ಷಣಾ ಸಮಸ್ಯೆಗಿಂತಲೂ ಹೆಚ್ಚಿನ ಸಮಸ್ಯೆಯನ್ನು ಸೃಷ್ಟಿಸುತ್ತಿದ್ದು, ದೇಶವನ್ನು ಆಂತರಿಕವಾಗಿ ವಿಭಜನೆಗೆ ಪ್ರೇರೇಪಿಸುತ್ತದೆ. ದೇಶಪ್ರೇಮಿ ಭಾರತೀಯರು ಈಗಲೇ ಎಚ್ಚೆತ್ತುಕೊಂಡು ಇದನ್ನು ಪ್ರತಿಭಟಿಸದೇ ಇದ್ದರೆ ದೇಶವಿಭಜನೆಯೋ, ವಿನಾಶವೋ ಆಗುವುದರಲ್ಲಿ ಯಾವ ಸಂಶಯವೂ ಇಲ್ಲ".

"ನಾವು ಒಂದು ದೇಶವಾಗಿ ವಿಶ್ವಭ್ರಾತೃತ್ವವನ್ನು ಪೋಷಿಸಿಕೊಂಡು ಬಂದವರು. ಹಿಂದೂ ಧರ್ಮವು 'ವಸುದೈವ ಕುಟುಂಬಕಂ' ಮತ್ತು 'ಸರ್ವೇ ಜನಾಃ ಸುಖಿನೋ ಭವಂತು' ಎಂಬ ವಾಕ್ಯಗಳಲ್ಲಿ ನಂಬಿಕೆ ಇಟ್ಟುಕೊಂಡು ಬೆಳೆದಿದೆ. ಕರ್ನಾಟಕವು ಶರಣ ಶ್ರೇಷ್ಠರ ಶರಣ ಸಾಹಿತ್ಯ, ದಾಸ ಶ್ರೇಷ್ಠರ ದಾಸ ಸಾಹಿತ್ಯ, ತೀರಾ ಇತ್ತೀಚೆಗೆ ಕುವೆಂಪು ಸಾರಿದ ವಿಶ್ವಮಾನವ ತತ್ವಗಳನ್ನು ರೂಢಿಸಿಕೊಂಡಿದೆ. ಆದ್ದರಿಂದ ನಾವು ಎಲ್ಲರನ್ನು ಒಳಗೊಂಡು, ಪ್ರೀತಿಸಿ ಬದುಕುವುದರಿಂದಷ್ಟೇ ದೇಶಪ್ರೇಮಿ, ಕನ್ನಡ ಪ್ರೇಮಿ, ಧರ್ಮ ಪ್ರೇಮಿ ಆಗಿರಲು ಸಾಧ್ಯ. ಈ ಸತ್ಯವನ್ನು ಹಿಂದೂ ಧರ್ಮದ ಪ್ರತಿಪಾದಕರು ಎಂದು ಹೇಳಿಕೊಳ್ಳುತ್ತಿರುವ ಧರ್ಮಾಂಧರು ಮೊದಲಿಗೆ ಅರ್ಥ ಮಾಡಿಕೊಳ್ಳಬೇಕಿದೆ".

"ಪೊಲೀಸರಿಗೆ ಪೊಲೀಸ್ ಮ್ಯಾನುವಲ್ ಮಾತ್ರ ಧರ್ಮಗ್ರಂಥವಾಗಬೇಕು. ತಮ್ಮ ವೈಯಕ್ತಿಕ ಬದುಕಿನ ಧರ್ಮ ಗ್ರಂಥವನ್ನು ಮನೆಯಲ್ಲಿಟ್ಟು ಬಂದು ಯೂನಿಫಾರಂ ಧರಿಸಬೇಕು. ಇದಕ್ಕೆ ವ್ಯತಿರಿಕ್ತವಾಗಿ ನಡೆದುಕೊಂಡ ಪೊಲೀಸರ ಕ್ರೂರ ಬದುಕು ಈ ಪುಸ್ತಕದಲ್ಲಿ ದಾಖಲಾಗಿದೆ".

ಲೇಖಕ ನವೀನ್ ಸೂರಂಜೆಯವರೆ ಹೇಳುವಂತೆ 'ಕೇಸರಿ ಶಾಲು', 'ನೈತಿಕ ಪೊಲೀಸುಗಿರಿ', 'ಧರ್ಮ ರಕ್ಷಣೆ', 'ಭಾರತೀಯ ಸಂಸ್ಕೃತಿ ರಕ್ಷಣೆ' ಇವೆಲ್ಲದರ ಹಿಂದೆ ಬೇರೆಯದ್ದೇ ರಾಜಕೀಯ ಅಜೆಂಡಾ ಇದೆ ಎಂಬುದು ಹಿಂದುಳಿದ ವರ್ಗಗಳಿಗೆ ಗೊತ್ತಾಗಬೇಕಿದೆ. ಎಲ್ಲಾ ಸಂದರ್ಭದಲ್ಲೂ ಹಿಂದುತ್ವದ 'ರಾಜಕೀಯ ಅಜೆಂಡಾ' ಬಯಲಾಗುತ್ತಿದ್ದರೂ ಮರೆವಿನ ಕಾರಣದಿಂದ ಜನರು ಮತ್ತೆ ಮತ್ತೆ ತಮಗೆ ಸಂವಿಧಾನ ದತ್ತ ಸವಲತ್ತುಗಳನ್ನು ತೆಗೆದು ಹಾಕಲು ಚಿತಾವಣೆ ನಡೆಸುತ್ತಿರುವವರಿಂದ ಈ ಕೋಮುವಾದಿ ದಾಳಕ್ಕೆ ಸಿಲುಕಿಕೊಳ್ಳುತ್ತಾರೆ. ಪ್ರಾರಂಭದಲ್ಲಿ ಮೇಲು–ಕೀಳು ಜಾತಿ ವ್ಯವಸ್ಥೆಯನ್ನು ಉಳಿಸಿಕೊಳ್ಳಲು, ಕೆಳವರ್ಗಗಳು ಅಭಿವೃದ್ಧಿ ಹೊಂದದಂತೆ ನೋಡಿಕೊಳ್ಳಲು, ಬ್ರಾಹ್ಮಣ್ಯದ ರಕ್ಷಣೆಗಾಗಿ ಊಳಿಗಮಾನ್ಯ ಯಜಮಾನಿಕೆ ವ್ಯವಸ್ಥೆಯು ಹಿಂದುತ್ವದ ಜೊತೆ ಮೈತ್ರಿ ಮಾಡಿಕೊಂಡಿತ್ತು. ಈಗ ಕಾರ್ಪೊರೇಟ್ ಮತ್ತು ಹಿಂದುತ್ವದ ನಡುವೆ ಮೈತ್ರಿಯಾಗಿ ಸರ್ಕಾರಿ ವ್ಯವಸ್ಥೆಯನ್ನು ಬಳಸಿಕೊಂಡೇ ಹಿಂದುಳಿದ ವರ್ಗಗಳನ್ನು ತುಳಿಯುತ್ತಲೇ ಮೇಲ್ವರ್ಗದ ಯಜಮಾನಿಕೆ ಮತ್ತು ಕಾರ್ಪೊರೇಟ್ ವ್ಯವಸ್ಥೆಯ ಪರ ಕೆಲಸ ಮಾಡುತ್ತಿದೆ. ಆದ್ದರಿಂದಲೇ ಹಿಂದುತ್ವ ರಾಜಕಾರಣದ ಸುಳ್ಳುಗಳು, ಅಪ್ರಾಮಾಣಿಕತೆ ಮತ್ತು ಹಿಡನ್ ಅಜೆಂಡಾ, ಸರ್ಕಾರಿ ಭಾಗಿದಾರಿಕೆಯನ್ನು ಘಟನೆಗಳ ಸಹಿತ "ನೇತ್ರಾವತಿಯಲ್ಲಿ ನೆತ್ತರು" ಪುಸ್ತಕದಲ್ಲಿ ಕ್ರೋಢೀಕರಿಸಲಾಗಿದೆ.

ಭವಿಷ್ಯದಲ್ಲಿ ಸೌಹಾರ್ದ ಕರ್ನಾಟಕದುದ್ದಕ್ಕೂ ಎದುರಾಗಬಹುದಾದ ಕೋಮುವಾದದ ಕರಾಳತೆಯನ್ನು, ಮತಾಂದ ಪೊಲೀಸ್ ವ್ಯವಸ್ಥೆಯನ್ನು ಸರಿಯಾಗಿ ಅರ್ಥಮಾಡಿಕೊಂಡು ಎಚ್ಚತ್ತು ಸರ್ವಜನಾಂಗದ ಶಾಂತಿಯ ತೋಟ ಕರ್ನಾಟಕ, ಭಾರತವನ್ನು ಉಳಿಸಿಕೊಳ್ಳುವ ಪ್ರಯತ್ನದ ಭಾಗವಾಗಿ ಎಲ್ಲರೂ ಈ ಪುಸ್ತಕವನ್ನು ಓದಲೇಬೇಕು.

ಪುಸ್ತಕವನ್ನು ಕ್ರಿಯಾ ಮಾಧ್ಯಮ ಪ್ರಕಟಿಸಿದೆ. ಬೆಲೆ ರೂ. 185

JANASHAKTHI KANNADA VARA PATRIKE: Printed, Published by **U. BASAVARAJ**, No. 37/a, 8th Cross, EMS Bhavan, Mahalakshmi Layout, Bangalore 560086, Karnataka on behalf of **COMMUNIST PARTY OF INDIA (MARXIST)** and **Printed at : Kriya Prakashana,** No. 12, 18th Cross, Sampangirama Nagar, Bangalore 560027 Editor : **NITYANANDASWAMI**